ಗಾವ್ಡೆ' ಸಮುದಾಯಾಚೊ ಲೋಕ್ 'ದಾಂಡ್ಯಾ ಖೇಳ್' ಪ್ರಕಾರ್ ಖೆಳ್ತಾ. ದಾದ್ಲೆಚ್ಚ್ ಜೊಡಿನ್ ಕಲಾಕಾರ್ ಜಾವ್ನ್ ಆಸ್ತಾ ಪುಣ್ ಜೊಡಿಕಾರ್ ದಾದ್ಲೊ ಸಂಪೂರ್ಣ್, ಸ್ತ್ರೀಯಾಂಚ್ಯಾ ವೇಷ್ ಭೂಷಣಾರ್ ಆಸ್ತಾ. ದಾದ್ಲೊ ಕಲಾಕಾರ್ ಪೆಂಕ್ಟಾಕ್ ಶಾಲ್ ಬಾಂಧುನ್, ತಾಚ್ಯಾ ವಯ್ಲ್ಯಾನ್ ತಾಂಬ್ಡಿ ಪಟ್ಟಿ ಬಿಗ್ದುನ್, ಮಾತ್ಯಾಕ್ ರುಮಾಲ್ ಬಾಂಧ್ತಾ. ಕಲಾಕಾರ್ ಪ್ರಥಮ್ ಜಾವ್ನ್ ಮಾಂಡಾರ್ ಆನಿ ಹರ್ಯೆಕಾ ಘರಾ ಆಂಗ್ಣಾಂನಿ ಖೆಳ್ತಾ. ಕಲಾಕಾರಾಚ್ಯಾ ಉಜ್ವ್ಯಾ ಹಾತಾಂತ್ ಅಡೇಜ್ ಇಂಚಾಂ ವ್ಯಾಸ್ ಆನಿ ಸುಮಾರ್ ಚಾರ್‌ಫೀಟ್ ಲಾಂಬಾಯೆಚೊ ವರ್ತುಲಾಕಾರಾಚೊ ದಾಂಡೊ ಆಸೊನ್, ಪದಾಂ ಆನಿ ತಾಳಾಕ್ ತೆಕಿದ್ ನಾಚ್ಪಿ ವಿವಿಧ್ ಶಯ್ಲಿಂನಿ ಖೆಳ್ತಾ. ಹಿಮ್ಮೇಳ್ ವ್ಹಾಜಂತ್ರಾಂತ್ ಝುಂಜ್, ಮದ್ದಳಿಂ ಆನಿ 'ಗುಮ್ಟಾಂ' ಉಪ್ಯೋಗ್ ಕರ್ತಾ.

ಮುಸಳಾಂ ಫೆಳ್ : 'ಮುಸಳಾಂ ಫೆಳ್' (ಮುಸಲ ನೃತ್ಯ) ಪುರ್ವಿಂ ಹಿಂದೂ ವಿಧಿ ಪ್ರಕಾರ್ ಪ್ರದರ್ಶಿತ್ ಜಾತಾಲೊ. ಆತಾಂ ಚಾಂದೊರ್ ಪರಿಸರಾಂತ್ಲೆ ಕ್ರಿಸ್ತಾಂವ್ ಕಾರ್ನಿವಾಲಾಚ್ಯಾ ದುಸ್ರ್ಯಾ ದಿಸಾ ಖೆಳ್ಚೊ ಸಂಪ್ರದಾಯ್ ಪಾಲನ್ ಕರ್ನ್ ಆಯ್ಲ್ಯಾ. ಗೊಂಯಾಂತ್ ಕದಂಬಾ ರಾಯಾಂಲ್ಯಾ (980-1005) ರಾಜ್ವಟ್ಕೆ ಕಾಲಾರ್ ಹೊ ನಾಚ್ ಪ್ರಚಲಿತ್ ಆಸ್‌ಲ್ಲೊ ಮ್ಹಣ್ ಚರಿತ್ರಾಕಾರಾಂಚಿ ಅಭಿಪ್ರಾಯ್ 1310 ವರ್ಸಾ ವಿಜಯನಗರಾಚೊ ಹರಿಹರ ರಾಯ್‌ಕುವರ್ ಚೋಳರಾಯಾಕ್ ಸಲ್ವಾಯಿಲ್ಲ್ಯಾ ಸಂಭ್ರಮಾಚರಣಾಕ್ ಚಂದ್ರಾಪುರ್ ಕೊಟ್ಯಾ ಬಾಗ್ಲಾಂತ್ ಹ್ಯಾ ನಾಚಾಚೊ ಪ್ರಥಮ್ ಪ್ರಯೋಗ್ ಜಾಲೊ ಮ್ಹಳ್ಳಿ ಸಾಂಗ್ಣಿಯೀ ಆಸಾ.

ನಾಚ್ಪಿ ಯಾದವ್ ಶಯ್ಲಿಚೆಂ ನ್ಹೆಸಣ್ ನ್ಹೆಸ್ತಾ. ವಿಶೇಸ್ ಮ್ಹಳ್ಯಾರ್ ಹಿಂದೂ ಧಾರ್ಮಿಕ್ ಲಕ್ಷಣಾಂ ಆಸ್ಚೊ ಹೊ ಖೇಳ್ 'ಕ್ರಿಸ್ತಾಂವ್ ಚಾರ್ಡೆ ' (ಕ್ಷತ್ರಿಯ್) ಜನಾಂಗಾಚೆ ಕಾರ್ನಿವಾಲ್ ಉತ್ಸವಾವೆಳಿಂ ಖೆಳ್ತಾ. ಚಾಂದೊರ್‌ಚೆ ಕ್ರಿಸ್ತಾಂವ್ ದಾದ್ಲೆ ಧೋತಿ ನ್ಹೆಸುನ್, 'ಮುಸಳಾಂ' (ಕಾಂಡಣಾಂ =ಒನಕೆ) ಘೆವ್ನ್, ವ್ಹಾಜಂತ್ರಾಂಚ್ಯಾ ತಾಳಾಕ್ ತೆಕಿದ್ ಭೂಮಿವಯ್ರ್ ಕಾಂಡುನ್ ನಾಚ್ತಾ ಜಾಲ್ಯ್ಯಾನ್ ಹೊ 'ಮುಸಳಾಂ ಫೆಳ್' (ಮುಸಲ ನೃತ್ಯ) ಮ್ಹಣ್ ಪ್ರಸಿದ್ಧ್. ಹಿಮ್ಮೇಳಾಂತ್ ಧೊಲ್, ಕಂಸಾಳೆ, ಝುಂಜ್ ಆನಿ 'ಗುಮ್ಟಾಂ' ವ್ಹಾಜಯ್ತಾ.

ರಣಮಾಲೆ : ಗೊಂಯಾಂತ್ ಸತ್ತರಿಂ, ಸಾಂಗೆಂ ಆನಿ ಗೋವಾ ಕರ್ನಾಟಕ್ ಗಡಿ ಪ್ರದೇಶಾಂನಿ, ಶಿಗ್ಮ್ಯಾ ವೆಳಾರ್ ಪ್ರದರ್ಶಿತ್ ಜಾಂವ್ಚೊ, ದಾದ್ಲೆ ಮಾತ್ರ್ ಪಾತ್ರ್ ಘೆಂವ್ಚೊ 'ರಣಮಾಲೆ' ಮ್ಹಳ್ಳೊ ಸ್ವತಂತ್ರ್ ಜಾನಪದ್ ಪ್ರಕಾರ್ ಪ್ರಚಲಿತ್ ಆಸಾ. ಹಾಚೆಂ ಪ್ರದರ್ಶನ್ ದೋನ್ ವಿಧಾನಾಂನಿ ಜಾತಾ. ಪ್ರಥಮ್ ಜಾವ್ನ್, ನಾಚ್ ಆನಿ ಜತ್ ಮ್ಹಳ್ಯಾ ಪದಾಂನಿ ಮಿಸ್ಳಾಲ್ಲ್ಯಾ ಹ್ಯಾ ಪ್ರದರ್ಶನಾಂತ್, ಸುರ್ವೆರ್ ರಾಮಾಯಣಾಚಿ ಕಥಾ ಸಾದರೀಕರಣ್ ಜಾತಾನಾ, ಮಧೆಂ ಮಧೆಂ ಕಥಾಕ್ ಸಂಬಂಧ್ ಜಾಲ್ಲೆ ಪಾತ್ರ್ ಮಾಂಡಾರ್ ಯೇವ್ನ್ ಪ್ರಸಂಗಾಚ್ಯಾ ಸನ್ನಿವೇಶಾಂಕ್ ತೆಕಿದ್ ಮೂಕಾಭಿನಯಾಂ ಕರ್ತಾ. ಹ್ಯಾ ಪಾತ್ರಾಂಕ್ 'ಸವಂಗಾಂ'

ಮ್ಹಣ್ ನಾಂವ್

ದುಸ್ರ್ಯಾನ್, ರಾಮಾಯಣಾಚಿ ವಿವಿಧ್ ಖಂಡಾಂಚಿ ಕಥಾ ಚಲಾತ್ತ್ ಆಸ್ತಾನಾ ಮಧೆಂ 'ಧೊಂಗಾ' ಮ್ಹಳ್ಳ್ಯಾ ಸಾಮಾಜಿಕ್ ಪಾತ್ರಾಂಚೆ ವೇಷ್ ಮಾಂಡಾರ್ ಯೇವ್ನ್, ಹಾಸ್ಯಭರಿತ್ ವಿವಿಧ್ ಆಂಗಿಕ್ ಅಭಿನಯಾಚೆ ಪ್ರದರ್ಶನ್ ಕರ್ತಾ. ಹೆ ಪಾತ್ರ್ ಮೌನ್ ರಾವಾನಾಸ್ತಾಂ ರಾಮಾಯಣ್ ಕಥಾ ಸಾದರೀಕರಣಾಚೆಂ ಗಂಭೀರ್ ವಾತಾವರಣ್, ಆಪ್ಲಿಂ ಗಾಣಾಂ, ಹಾಸ್ಯಭರಿತ್ ಉತ್ರಾಂ ಆನಿ ಅಭಿನಯಾಂನಿ ನಿತಳ್ ಕರ್ನ್ ಪ್ರೇಕ್ಷಕಾಂಕ್ ಮನೋರಂಜನ್ ದಿತಾ. ಹ್ಯಾ ಕಲಾ ಪ್ರದರ್ಶನಾಚ್ಯಾ ಹಿಮ್ಮೇಳ್ ವ್ಹಾಜಂತ್ರಾಂತ್ ಶಹನಾಯ್, ಸಮ್ಮೇಳ್, ಧೋಲ್, ತಾಶೆಂ, ಕಂಸಾಳೆ ಆನಿ 'ಗುಮ್ಟಾಂ'ಯೀ ಪ್ರಮುಖ್ ವ್ಹಾಜಂತ್ರಾಂ ಜಾವ್ನ್ ಉಪ್ಯೋಗ್ ಜಾತಾ.

ಪಾಲ್ಕಿ : ತೆನ್ನಾ ಗೊಂಯಾಂತ್ ಪುನ್ವೆಚ್ಯಾ ಪಾಂಚ್ ದಿಸಾಂ ಆದ್ದಿಂ, ಮ್ಹಳ್ಯಾರ್ ಫಾಲ್ಗುಣ್ ನವಮಿ ದೀಸ್ ಪ್ರಾರಂಭ್ ಜಾವ್ನ್ ಫಾಲ್ಗುಣ್ ಪುನ್ವೆಕ್ ಆಖೆರ್ ಜಾಂವ್ಚೊ 'ಧಾಕ್ಟೊ ಶಿಗ್ಮೊ' ಆನಿ ಬಡ್ಗಾ ಗೊಂಯಾಂತ್ ಫಾಲ್ಗುಣ್ ಪುನ್ವೆಕ್ ಸುರು ಜಾವ್ನ್ 'ಗುಡಿ ಪಾಡ್ವ್ಯಾ' ಪರ್ಯಾಂತ್ 'ವ್ಹಡ್ಲೊ ಶಿಗ್ಮೊ' ಹೊಳಿ ಉತ್ಸವ್, ದೆವ್ಳಾಂನಿ ಚಲ್ತಾ. ನಿಶ್ಚಿತ್ ದೀಸ್ ದೇವಾಲಿ ಪಾಲ್ಕಿ ಭಾಯ್ರ್ ಸರ್ತಾ. ಪಾಲ್ಕಿ, ಮುಕಾರ್ ಹರ್‌ದೀಸ್ ನಾಚ್, ನಾಟಿಕ್ ಆನಿ ಚಂದ್ರಾವಳ್, ಫಾಗ್, ಖಾಣಪದ್ ಮ್ಹಳ್ಳ್ಯಾ ಪದಾಂಚೊ ಸುವಾರಿ ಗಾಯನ್ ವಾದ್ಯಮೇಳ್ ಚಲ್ತಾ. ಹ್ಯಾ ವ್ಹಾಜಂತ್ರಾಂ ಮೆಳಾಂತ್ ಉಪ್ಯೋಗ್ ಜಾಂವ್ಚ್ಯಾ ಸಮ್ಮೇಳ್, ಧೋಲ್, ಝುಂಜ್, ಕಂಸಾಳೆ -ಹಾಚ್ಯಾ ವಾಂಗ್ಡಾ 'ಗುಮಟ್' ಯೀ ಏಕ್ ಪ್ರಮುಖ್ ವ್ಹಾಜಂತ್ರ್.

ಸುವಾರಿ : ಸುವಾರಿ ಮ್ಹಣ್ಟ್ಯಾರ್ ಏಕಾ ಥರಾಚೊ ವ್ಹಾಜಪಾ ಮೇಳ್ (ಜುಗುಲ್‌ಬಂದಿ) ಮ್ಹಣ್ಯೆತ್. ಹಾಂತುಂ ಸಾಹಿತ್ಯ್ ಆಸಾನಾ. ವ್ಹಾಜಂತ್ರಾಂ ಮಾತ್ರ್ ಉಪ್ಯೋಗ್ ಜಾತಾ. ಹೊ ಪ್ರಕಾರ್ ಚಡಾವತ್ ಮೆವರಣೆಗೆಂನಿ ಪಳೊಂವ್ಕ್ ಮೆಳ್ಟಾ. ಗೊಂಯಾಂ ಕಾರ್‌ವಾರ್ಚ್ಯಾ ಗಾಂವಾಂನಿ ಕೊಂಕಣಿ ಭಾಷಿಕ್, ಪೂಜಾ ಪುರಸ್ಕಾರಾಂ ಸಂದರ್ಭಾನಿ, ಗಣೇಶೋತ್ಸವಾಂನಿ - ವೇದಿಕೆಂನಿಯೀ ಮೇಳ್ ಚಲಂವ್ಚೆಂ ಆಸಾ. ಸಮ್ಮೇಳ್ , ಶಹನಾಯ್, ತಾಳಾ ಸಾಂಗಾತಾ 3-4 ಜಣ್ ಗುಮ್ಟಾಂ ವ್ಹಾಜೊವ್ಚ್ಯಾ ಹ್ಯಾ ಪ್ರಕಾರಾಕ್ ಗುಮಟಾ ಸುವಾರಿ ಮ್ಹಣ್‌ಯೀ ನಾಂವ್ ಆಸಾ.

ಗುಮ್ಟಾಂ ಆರ್‌ತಿ ಸರ್ತ್ : '(ಸ್ಪರ್ಧೆ): ಚವಥ್ ಲಾಗಿಂ ಪಾವ್ತಾ ಪಾವ್ತಾನಾ ಗೊಂಯಾಂತ್ ಜಾಯ್ತ್ಯಾ ವಠಾರಾಂನಿ ಗುಮಟ್ ಆರತಿಂಚೊ ಆವಾಜ್ ಆಯ್ಕೊಪಾಕ್ ಮೆಳ್ಟಾ. ಜುಲಾಯ್ ಮ್ಹಯ್ನ್ಯಾಚ್ಯಾ ರಾತಿಂನಿ ಗುಮಟ್ ಆರತಿ ಶಿಖ್ಚೆ ತರ್ನಾಟೆ ಗುಮಟ್ ತಜ್ಞಾಂಚ್ಯಾ ಮಾರ್ಗದರ್ಶನಾನ್ ತರ್ಬೆತಿ ಜೊಡ್ಟಾ. ಹ್ಯಾ ತರ್ಬೆತಿ ಘೆಂವ್ಚ್ಯಾಂತ್ ಸ್ತ್ರೀಯೊ ಆನಿ ಚೆಡ್ವಾಂಯ್ ಆರ್ತಾಂ ಭಾಗ್ ಘೆತಾ ಹಿ ಏಕ್ ಬರಿ ಗಜಾಲ್.

ಗುಮಟ್ ಗೊಂಯ್ಕಾರಾಂಚ್ಯಾ ಎಕ್ವಟಾಚೆಂ ಪ್ರತೀಕ್ ಕಶೆಂಗೀ ಗೊಂಯ್ಚ್ಯಾ ಲೋಕ್‌ಕಲಾಚೆಂ ಅವಿಭಾಜ್ಯ್ ವ್ಹಾಜಂತ್ರ್. ಎಕಾ ಕಾಲಾರ್ ಗುಮಟ್, ಸಮ್ಮೇಳ್, ಕಂಸಾಳೆಂ, ಝುಂಜ್ - ಹಿಂ ವ್ಹಾಜಂತ್ರಾಂ ಗೊಂಯ್ಚ್ಯಾ ಇತಿಹಾಸಾಂತ್ ಅಳ್ಬೊನ್ ವೆಚ್ಯಾ ಪರಿಸ್ಥಿತಿರ್ ಆಸ್‌ಲ್ಲಿಂ. ಗೊಂಯ್ ಸರ್ಕಾರಾನ್ ರಾಜ್ಯ್ ಮಟ್ಟಾರ್ ಗುಮಟ್ ಆರ್‌ತಿ ಸರ್ತಿ (ಸ್ಪರ್ಧೆ) ಸುರುಕೆಲ್ಲ್ಯಾನ್ ಗುಮ್ಟಾಂಕ್ ಬರೆ ದೀಸ್ ಆಯ್ಲ್ಯಾ ಮ್ಹಣ್ಯೆತ್. ಆತಾಂಚಿ ಪಿಳ್ಗಿ ಸ್ವಾಭಾವಿಕ್ ಥರಾನ್ ಪಾಶ್ಚಾತ್ಯ್ ಸಂಗೀತಾಕ್ ಆಕರ್ಷಿತ್ ಜಾತಾ. ಪುಣ್ ಗುಮಟ್ ಆರತಿ ಸ್ಪರ್ಧೆ ಸುರು ಜಾಲ್ಲ್ಯಾನ್ ತೆಂ ಆಕರ್ಷಣ್ ಗುಮ್ಟಾಂ ಕಡೆನ್ ಘುಂವ್ಲಾಂ ಮ್ಹಣ್ ಗುಮ್ಟಾಂ ತಜ್ಞಾಂಚೆಂ ಸಾಂಗ್ಣೆಂ. ಗೊಂಯ್ಚಿ ಹಿ ಕಲಾ ಹರೇಕಾ ಘರಾ ಘರಾಂನಿ, ವಾಡ್ಯಾ ವಾಡ್ಯಾಂನಿ, ಗಾಂವಾಂ ಗಾಂವಾನಿ ಘಲೊನ್, ಹ್ಯಾ ಲೋಕ್ ಕಲೆಚೊ ಸಮಾಜಾಂತ್ ಪ್ರಸಾರ್ ಜಾಂವ್ಚಿ, ನವ್ಯಾ ಪದ್ಧತಿನ್, ಪಾರಂಪರಿಕ್ ಕಲಾಚೊ ಮೂಳ್ ಗೌರವ್, ಸ್ಥಾನ್‌ಮಾನ್ ತಶೆಂಚ್ಚ್ ದವರೂನ್ ಗುಮಟ್ ಆರತ್ಯೊ ಶಾಸ್ತ್ರ ಶುದ್ಧ್ ರಿತಿರ್ ಶಿಕ್ಚಾ ಅಭ್ಯಾಸಾಕ್ ಲಾಗ್ಚೆಲಿ ಗರಜ್ ಆಸಾ.

ಪ್ರಸ್ತುತ್ ಗೊಂಯಾಂತ್ ಸ್ಪರ್ಧ್ಯಾಂ ಖಾತಿರ್ ಗುಮಟ್ ಶಿಕ್ಚಿ ಉಭಾರ್ ತರ್ನಾಟ್ಯಾಂ ಮಧೆಂ ಚಡ್‌ಲ್ಲಿ ದಿಸೊನ್‌ಯೆತಾ. ಗುಮಟ್ ಆರತಿಂಚೆ ನವೆ ನವೆ ಪಂಗಡ್‌ಯೀ ಅಳ್ಮ್ಯಾ ವ್ಹಿರಿಂ ಜಲ್ಮಾಲ್ಯಾ. ಹ್ಯಾ ಕಲಾಕಾರಾಂಮಧೆಂ ಭೇದ್‌ಭಾವ್‌ಯೀ ಸುರು ಜಾಲ್ಲ್ಯಾ ಕಾರಣಾನ್ ಬರ್‍ಯಾ ಕಲಾಕಾರಾಂಕ್ ಅನ್ಯಾಯ್ ಜಾಂವ್ಕ್‌ಯೀ ಲಾಗ್ಲಾ. ಥೊಡ್ಯಾ ಪಂಗ್ಡಾಂಚೆಂ ಪರೀಕ್ಷಕಾಂ ಕಡೆನ್ ಫಿಕ್ಸಿಂಗ್ ಕರ್ಚೆಂ, ಆಯೋಜಕಾಂ ಕಡೆನ್ ಝುಗ್ಡೆಂ ಕರ್ಚೆಂ ಸದಾಂಚೆಂ ಜಾಲಾಂ. ಇನಾಮಾಂಕ್ ಮೆಳ್ಚೆ 50 ಠಕ್ಕೆ ಆಪ್ಣಾಕ್ ಆನಿ 50 ಠಕ್ಕೆ ಪರೀಕ್ಷಕಾಂಕ್ ವಾಂಟೆ ಜಾತಾನಾ, ಹೆಳ್‌ಲ್ಲ್ಯಾ ಬರ್‍ಯಾ ಕಲಾಕಾರಾಂಕ್ ಅನ್ಯಾಯ್ ಜಾತಾ ಮ್ಹಣ್ ಗುಮಟ್ ಜಾಣ್ಕಾರಾಂಚೆಂ ದುರ್ಶೊಣೆಂ. ಸ್ಪರ್ಧ್ಯಾಂನಿ ಭಾಗ್ ಘೆಂವ್ಚ್ಯಾ ಪಂಗ್ಡಾಂನಿ ಇನಾಮಾಂ ಖಾತಿರ್ ಝುಗ್ಡನಾಸ್ತಾನಾ, ಪರೀಕ್ಷಕಾಂನಿ ಫಿಕ್ಸಿಂಗಾಂತ್ ಸಾಂಪ್ಡನಾಸ್ತಾನಾ ಶಿಸ್ತ್ ಬದ್ಧ್ ಸ್ಪರ್ಧೆ ಚಲ್ಲ್ಯಾರ್ ಗುಮ್ಟಾಂ ಕಲಾಚೆಂ ದಾಯ್ಜ್ ಸಾಂಬಾಳ್ಚ್ಯಾಂತ್ ಗೊಂಯ್ಕಾರಾಂಕ್ ಬರೆಂ ಭವಿಷ್ಯ್ ಆಸಾ, ಮ್ಹಣ್ ತಜ್ಞಾಚಿ ಅಭಿಪ್ರಾಯ್.

ಪ್ರಕೃತ್ ಗೊಂಯ್ಚ್ಯೆ ಹಿಂದೂ ಕುಡ್ಮಿ, ಕ್ರಿಸ್ತಾಂವ್ ಆನಿ ಹೆರ್ ಸಮುದಾಯ್ ಹೊಳಿ ಪರ್ಬೆಚ್ಯಾ ಶಿಗ್ಮ್ಯಾ ಉತ್ಸವಾಂನಿ ಚವಥ್, ಕಾರ್ನಿವಾಲ್, ದೆವಳಾಂ ಉತ್ಸವಾಂನಿ, ಸಾಮಾಜಿಕ್ ಉತ್ಸವ್– ಇತ್ಯಾದಿ ಸಂದರ್ಭಾಂನಿ ತಾಳ್‌ವ್ಹಾಜಂತ್ರ್ ಜಾವ್ನ್ 'ಗುಮಟ್' ಉಪ್ಯೋಗ್ ಕರ್ತಾ ಪುಣ್, ಹಾಂಚ್ಯಾ ಮಧೆಂ ಹೆರ್ ಆಧುನಿಕ್ ಸುಧಾರಿತ್ ಸಾಧನಾಂ ವಾಂಗ್ಡಾ ಗುಮಟ್ ಏಕ್ ಪೂರಕ್ ವ್ಹಾಜಂತ್ರ್ ಜಾವ್ನ್ ಸಾಂಕೇತಿಕ್ ರೂಪಾರ್ ಮಾತ್ರ್ ಉಪ್ಯೋಗ್ ಕರ್ತಾ ತಿ ದುಖಾಚಿ ಗಜಾಲ್. ಗೊಂಯಾಂತ್ ಪಾಶ್ಚಾತ್ಯ್ ಸಂಗೀತ್ ಉಪಕರಣಾಂಚೊ

ಪ್ರಭಾವ್ ಚಡ್‌ಮಾಪಾನ್ ಜಾಲ್ಲೊ ಸ್ಪಷ್ಟ್ ದಿಸ್ತಾ. ಹ್ಯಾಚ್ಯ್ ವೆಳಾರ್, ಗೊಂಯಾಥಾವ್ನ್ಯಾಚ್ಯ್ ದೇಸಾಂತರ್ ಯೇವ್ನ್ ಕರ್ನಾಟಕಾಂತ್ ವಸ್ತಿ ಆಸ್ಚ್ಯೊ ಕುಡ್ಮಿ ಲೋಕ್ ಶಿಗ್ಮ್ಯಾಂತ್ 'ಗುಮ್ಮ್ಯಾಂಚೊ ಉತ್ಸವ್'ಚ್ಯ್ ಕರ್ತಾ - ಹಿ ವಿಷಯ್ ಅಭಿಮಾನಾಚಿ.

ಉಪಸಂಹಾರ್ :

ಆರ್ತಾಂ ಆಮಿ ಪಳೆವ್ನ್ ಆಸ್‌ಲ್ಲ್ಯಾಪ್ರಿರಿಂ, ವ್ಹಡ್-ವ್ಹಡ್ ತಕ್ಲೆ ನಾಂವಾಂಚ್ಯಾ ಕೊಂಕಣಿ ಕಾರ್ಯಾವಳಿಂನಿ, ಸಾಂಸ್ಕೃತಿಕ್ ಕಾರ್ಯಾಂನಿ, ಏಕ್ ಗುಮಟ್ ದಾಖವ್ನ್, ತೆಂ ಜಮ್‌ಲ್ಲ್ಯಾ ಲೊಕಾಮುಖಾರ್ ವ್ಹಾಜವ್ನ್, ಕಾರ್ಯೆಂ ಉಗ್ತಾವಣ್‌ದಾರಾಂಚ್ಯಾ ಗಳ್ಯಾಕ್ ಘಾಲುನ್, ಬ್ಯಾನರಾಂ ಬಾಂಧುನ್ , ಗುಮ್ಮ್ಯಾಚೊ ಸೊಭಿತ್ತ್ ಫೋಟೋ ಛಾಪ್‌ಲ್ಲಿಂ ಬ್ರೋಶರಾಂ ಕಾಡುನ್, ಪುಸ್ತಕಾಂಚ್ಯಾ ಮುಕ್ಲ್ಯಾ ಪಾನಾರ್ ಕಂಪ್ಯೂಟರಾರ್ ಚಿತ್ರಾಯಿಲ್ಲೊ (Collage) ಫೋಟೊ ಘಾಲುನ್ - 'ಹೆಂ ಗುಮಟ್, ಆಮ್ಚ್ಯಾ ಮ್ಹಾಲ್ಘಡ್ಯಾಂಲೆಂ ದಿರ್ವೆಂ, ಕೊಂಕ್ಣಿ ಸಂಸ್ಕೃತಿಚೆಂ ದಾಯ್ಜ್, ಕೊಂಕ್ಣಿ ಕಾರ್ಭಾರ್ಯಾಂಚೆಂ ಆಯ್ದ್, ತೆಂ ಆಮಿ ಉರೊವ್ಕಾ ' ಮ್ಹಣ್ ತೊಂಡಾನ್ ಗುಮಟ್ ವ್ಹಾಜಯ್ಲ್ಯಾರ್, ಗುಮಟ್ ಆಮಿ ಫೊಟೊಂಚೆರ್ ಮಾತ್ರ್ ಉರೊಂವ್ಕಾಕ್ ಸಕ್ತಲೆ.

ಗುಮ್ಮ್ಯಾಂಚಿ ಕಲಾ ಹೆರ್ ಸಮಾಜೆಚ್ಯಾ ಲೊಕಾನ್, ಸಂಘ್ ಸಂಸ್ಥ್ಯಾಂಚ್ಯಾ ಕಾರ್ಭಾರ್ಯಾಂನಿ, ನಕಲ್ ಕಾಡ್ನ್ ಪ್ರದರ್ಶನಾಂ ದಿಂವ್ಚಾಕ್ ಪ್ರಾರಂಭ್ ಕರ್ಚಾದ್ದಿಂ, ತ್ಯಾ ಮುಖಾಂತ್ರ್ ಗುಮಟ್ ಆಪ್ಲೆಂ ಕರ್ನ್ ಘೆವ್ಚಾದ್ದಿಂ, ಪರಂಪರಾಗತ್ ಜಾವ್ನ್ ಗುಮಟ್ ಉಪ್ಯೋಗ್ ಕರ್ಚ್ಯಾ ಸಮುದಾಯಾಂಚ್ಯಾ ಲೊಕಾಚೆಂ ಅಕ್ಕಲ್ ಜಾಗೃತ್ ಜಾವ್ಕಾ. ತಶೆಂ ಹೆರಾಂನಿ ದಿಂವ್ಚಿ ಪ್ರದರ್ಶನಾಂ ನಕ್ಲಿವೇಷ್ (Fancy Dress) ಜಾಯ್ತ್ ಶಿವಾಯ್ ಅಭಿಜಾತ್ ಯಾ ಆಸ್ಲಿ ಕಲಾ ಜಾಂವ್ಚಿನಾ.

ಏಕ್ ಸಂಗೀತ್ ಸಾಧನ್‌ಜಾವ್ನ್ ಗುಮ್ಮ್ಯಾಚೊ ಉಪ್ಯೋಗ್ ಜಾಲ್ಲೊ ಆನಿ ತಾಚ್ಯಾ ಮಹತ್ವಾಚೊ ವಿವರ್ ಹ್ಯಾ ಪುಸ್ತಕಾಂತ್ ದಿಲಾ. ಚಾಮ್ಡ್ಯಾ ವ್ಹಾಜಂತ್ರಾಂ ಪಯ್ಕಿ ಗುಮ್ಮ್ಯಾಕ್ ವಿಶಿಷ್ಟ್ ಸ್ಥಾನ್ ಆನಿ ಮಾನ್ ಆಸಾ. ಆಯ್ಚ್ಯಾ ಪರಿಸರಾಂತ್ ಖಂಯ್ಚ್ಯಾ ಸಮುದಾಯಾಂಚ್ಯಾ ಲೊಕಾನ್ ತಾಂಚ್ಯಾ ಧಾರ್ಮಿಕ್, ಸಾಮಾಜಿಕ್ ಆನಿ ಸಾಂಸ್ಕೃತಿಕ್ ಕಾರ್ಯಾಂವೆಳಿಂ ಗುಮಟ್ ಉಪ್ಯೋಗ್ ಖಡ್ಡಾಯೆನ್ ಕೆಲಾಂ ತ್ಯಾ ಜನಾಂಗಾಂನಿ ಹಿ ಕಲಾ ಉರಯ್ಲ್ಯಾ, ಆನಿ ಮುಕಾರ್‌ಯೀ ಉರಯ್ತಲೆ. ಸುರ್ವೆರ್ ವಿದೇಶೀ ಮತಾಂಧ್ಯಾಂನಿ ಗುಮ್ಮ್ಯಾ ಕಲಾಕ್ 'ಕಾಟ್ ಲೊಕಾಲಿ ಕಲಾ, ದೆಂವ್ಚಾರಾಚಿ ವಿದ್ಯಾ' ಮ್ಹಣ್ ಆಡಾಯ್ಲೆಂ. ಗುಮ್ಮ್ಯಾಂ ಕಾಡಯ್ಲಿಂ, ಉಡಯ್ಲಿಂ, ಗುಮ್ಮ್ಯಾಕಾರಾಂಲೆಂ ಕಾಳಿಜ್ ಕಡಯ್ಲೆಂ, ಗುಮ್ಮ್ಯಾಕಾರಾಂಕ್ ರಡಯ್ಲೆಂ ಆನಿ ಮೂಳ್‌ಪೀಠ್ ಗೊಂಯಾಂ ಥಾವ್ನ್ಯಾಚ್ಯ್ ಧಾಂವ್ಡಾಯ್ಲೆಂ. ತ್ಯಾ ಮಾಗಿರ್ ಪಾಶ್ಚಾತ್ಯ್ ಸಂಸ್ಕೃತಿಚ್ಯಾ ಕುಡ್ಡ್ಯಾ ಅನುಕರಣಾನ್ ಗುಮ್ಮ್ಯಾಂ ಕೊನ್ಯಾಕ್ ಪಡ್ಲಿಂ. ತಂತ್ರ್‌ಜ್ಞಾನ್ ಸುಧಾರಣ್

ಜಾವ್ನ್ ಯೆತಾನಾ, ಜಾಗತೀಕರಣಾಚ್ಯಾ ಪ್ರಭಾವಾನ್ ಗುಮಟ್ ಉಪ್ಯೋಗ್ ಕರ್ಚೆಂ ಕೊಣಾಕೀ ನಾಕಾಂ ಜಾಲೆಂ. ಸುಲಭಾಯೆನ್ ಹಾತಾಕ್ ಮೆಳ್ಚಿಂ ಚಡ್ ಬಾಲ್ತಾರ್ ಯೆಂವ್ಚಿಂ, ಆಕರ್ಷಕ್ ಸುಧಾರಿತ್ ಸಾಧನಾಂ ಮೆಳ್ತಾನಾ ಗುಮ್ಟಾ ತಸಲೆಂ ಮಾತ್ತೆಚೆಂ ಅನಾಕರ್ಷಕ್ ಸಾಧನ್ ಸಾಮಾಜಿಕ್, ಧಾರ್ಮಿಕ್, ಸಾಂಸ್ಕೃತಿಕ್ ಕಾರ್ಯಾಂನಿ ಉಪ್ಯೋಗ್ ಕರ್ಚೆಂ ತಾಂಚ್ಯಾ ಭರಮಾಕ್ ಉಣೆಪಣ್ ಮ್ಹಣ್ ಭಗ್ಲೆಂ ಧಾರ್ಮಿಕ್ ಚೌಕಟ್ಟಾಚ್ಯಾ ಪರಿಧೆಂತ್ ಹ್ಯಾ ಸಮಾಜೆಚ್ಯಾಂನಿ ಗುಮ್ಟಾಕ್ ಆವ್ಕಾಸ್ ದೀನಾಸ್ತಾನಾ, ಧರ್ಮ್ ಆನಿ ಹ್ಯಾ ಕಲಾ ಮಧ್ಲೊ ಗಾಂಟ್ ತುಟ್‌ಲ್ಲ್ಯಾ ನಿಮಿತ್ತಾನ್ ತ್ಯಾ ಸಮಾಜೆಂತ್ ಗುಮ್ಟಾಚಿ ಕಲಾ ಆಳ್ವಾಲಿ, ತಸಲ್ಯಾ ಸಮಾಜೆಂನಿ ಆನಿ ಮುಕಾರೀ ಆಳ್ವಾತಲಿ.

ಗುಮ್ಟಾಚಿ ಕಲಾ, ತೀ ಮನ್ಸ್ಯಾಲಿ ಸಂಸ್ಕೃತಿ ಪ್ರತಿಬಿಂಬಿತ್ ಕರ್ಚಿ ಪುರಾತನ್ ಕಲಾ. ಧಾರ್ಮಿಕ್, ಸಾಂಸ್ಕೃತಿಕ್, ಸಾಮಾಜಿಕ್ ಆಚಾರಣಾಂನಿ ಮಾತ್ರ್ ನ್ಹಂಯ್, ಹೆರ್ ವೆಳಾಂರ್‌ಯೀ ಆಮಿ ಆಮ್ಚ್ಯಾ ಭುಗ್ಯಾಂಕ್, ಭುರ್ಗ್ಯಾಪಣಾರ್ ಥಾವ್ನ್‌ಚ್, ಹಾಚೊ ಮಹತ್ವ್ ಕಳವ್ನ್ ಪದಾಂ, ವಾದನ್ ಆನಿ ತ್ಯಾ ಸಂಬಂಧ್ ನಾಚ್‌ಯೀ ಶಿಕೊವ್ಕಾ. ಹಳ್ಳೆಂತ್ಲ್ಯಾ ಅಶಿಕ್ಷಿತ್ ಲೊಕಾಕ್ ಮಾತ್ರ್ ನ್ಹಂಯ್, ವಿದ್ಯಾವಂತ್ ಯುವಜಣಾಂಕ್ ಉಣೆಪಣಾಚೊ ಮನೋಭಾವ್ ಪಯ್ಸ್ ಕರುನ್, ಕಲಾ ವಯ್ರ್ ಅಭಿಮಾನ್ ಅಭಿರೂಚ್ ಯೆಂವ್ಚ್ಯಾ ಬರಿಂ ಪ್ರೋತ್ಸಾಹ್ ದೀವ್ನ್ ಶಿಕೊಂವ್ಚೆಂ ಪ್ರಾಮಾಣಿಕ್ ಪ್ರಯತ್ನ್ ಕೆಲ್ಯಾರ್ ಮುಕ್ಲ್ಯಾ ಪಿಳ್ಗೆಕ್ ಹಿ ಕಲಾ ಉರವ್ಯೆತ್.

❖❖❖

ಪರಾಮರ್ಶನ್ ಗ್ರಂಥ ಸೂಚಿ

1. ಕನ್ನಡ ನಿಘಂಟು - ಕನ್ನಡಸಾಹಿತ್ಯ ಪರಿಷತ್ ಬೆಂಗಳೂರು - III ಸಂಪುಟ
2. ತುಳು ನಿಘಂಟು - ಸಂಪುಟ III - ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ್ ಉಡುಪಿ - 1995
3. ಕರ್ನಾಟಕ ಜನಪದ ಕಲೆಗಳ ಕೋಶ - ಕನ್ನಡ ವಿಶ್ವವಿದ್ಯಾನಿಲಯ ಹಂಪಿ - 1996
4. ಕರ್ನಾಟಕ ಬುಡಕಟ್ಟುಗಳು ಸಂಪುಟ 1 : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ - 1998
5. ರಾಮಭಟ್ ಸಜಂಗದ್ದೆ - ಉದಯವಾಣಿ ಮೆಗರಿಝೀನ್ 3-3-1996
6. ಡಾ| ಎನ್. ತಿರುಮಲೇಶ್ವರ ಭಟ್ - ಉದಯವಾಣಿ 21-12-2001 (ಬುರ್ರಕಥಾ)
7. ರಾಕ್ಣೊ - 60 - ಅಂಕೊ 1998
8. ಚಾ .ಫ್ರಾ. ದೆ 'ಕೊಸ್ತಾ - ಜಿವಿತ್ ಕೊಂಕಣಿ ಪತ್ರ್ - ಮೇ 1983 ಪಾನ್ 30-31
9. ಕೊಂಕ್ಣಿ ಲೋಕ್‌ವೇದ್-ಕೊಂಕಣಿ ಸಂಸ್ಥೊ, ಸೈಂಟ್ ಎಲೋಶಿಯಸ್ ಕೊಲೇಜ್, ಮಂಗ್ಳುರ್ - ಕೊಂಕಣಿ ಡಿಪ್ಲೋಮಾ ಕರೆಸ್ಪಾಂಡೆನ್ಸ್ ಕೋರ್ಸ್ ದುಸ್ರ್ಯಾ ವರ್ಸಾಚೊ ನೋಟ್ಸ್ - ಪುಸ್ತಕ್ 2 ಅಂಕೊ 2
10. ಸಿರಿಲ್ ಮಾಡ್ತಾ - 'ಕೊಂಕಣಿ ದಾಯ್ಜ್' ಲೇಖನ್ - ಅಮರ್ ಕೊಂಕ್ಣಿ 1974 - ರಾಕ್ಣೊ ಪ್ರಕಾಶನ್, ಮಂಗ್ಳುರ್
11. ವಿ.ಡಿ. ಸಿಲ್ವಾ ಕಾಂಜೂರ್ ಮಾರ್ಗ್ 'ಆಮ್ಚಿಂ ಅದ್ಲಿಂ ಕಾಜಾರಾಂ ' -2002
12. ಪ್ರೊ. ಬೆನೆಟ್ ಪಿಂಟೊ -Konkani Bards and Musicians of Kanara - 2003
13. ಫ್ರಾನ್ಸಿಸ್ ಜೆ. ಹರ್ನೊಡ್‌ಕರ್ - 'ಸಿದ್ದಿ ಲೋಕ್‌ಗೀತ್ ಸಂಗ್ರಹ್' _ ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗ್ಳುರ್ - 2007
14. ಸುರೇಶ್ ತಾಂಡೇಲ್ - 'ಖಾರ್ವಿ ಲೋಕ್ ಗೀತ್ ಸಂಗ್ರಹ್' - ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗ್ಳುರ್ - 2007
15. ಪೂವಪ್ಪ ಕಣಿಯೂರು - ಉದಯಾಣಿ 28-2-1988

16. 'ವೊಗ್ರೆಂ ಕಾರಣ್' - ಪಾವ್ಲು ವೊರಾಸ್ - ಪಡ್ವಳ್ ಪ್ರಕಾಶನ್, ಮಂಗ್ಳುರ್ - 2008

17. ಪ್ರವೋದ್ ಮಹಾದೇಶ್ವರ್ ಗೋವಾ 'ಪ್ರಬಂಧ್' ಗೊಂಯ್ಚಿ ಪಾರಂಪರಿಕ್ ಲೋಕ್‌ನಾಟ್ಯ್ ಕಲಾ -2008

18. ಸುನಾಪರಂತ್ ತಾ. 7-7-2010

19 ಪ್ರೊ. ಎ. ವಿ. ನಾವಡ - 'ಕೊಂಕಣದ ಕುಡುಬಿಯರು' ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗ್ಳುರ್ - 2008

❖❖❖

ಅನುಬಂಧ್ 1 :

ಸೇಸು ಮೇಸ್ತ್ರಿ ಕೊಂಪದವು

ದಕ್ಷಿಣ ಕನ್ನಡಾಂತ್ ಕಾರ್ಕಳ್ ಥಾವ್ನ್ ಕೊಣಾಜೆ ಮ್ಹಣಾಸರ್ ಆಸ್ಚ್ಯಾ ಸುಮಾರ್ 25 ಕುಡ್ಮಿ ವಾಡ್ಯಾಂ ಪಯ್ಕಿ ಪ್ರಥಮ್ ಗೌರವಾಚೊ ವಾಡೊ ಕೊಂಪದವು ಗಾಂವ್. ಹ್ಯಾ ವಾಡ್ಯಾಂತ್ 350-400 ಕುಟ್ಮಾಂ ಆಸೊನ್ ಗಾಂವಾಂತ್ ಚಡ್ಶೆಂ ಜನಸಂಖ್ಯೆ ಕುಡ್ಮ್ಯಾಂಲೆಂ. ಸಾಂಪ್ರದಾಯಿಕ್ ಗುಮ್ಟಾಂ ತೋಣಿಯಾಂ ಖೇಳಾ ಸಾಂಗಾತಾ ಮಾಡಿ ಲ್ಹ್ಯಾಸುನ್, ಹೋಳಿ ಕಾಮದಹನಾಚೆಂ ಕ್ರಮ್ ಚಲ್ತೆಂ ಹಾಂಗಾ ಮಾತ್ರ್.

ಕೊಂಪದವುಚ್ಯಾ 'ವೊರ್ಲ್ಡೆ' ವ್ಹಳ್ಳಿಕಡೆ ಸಾಮಾಜಿಕ್, ಆರ್ಥಿಕ್ ರಿತಿರ್ ಫಾಟಿಂ ಉರ್‍ಲ್ಲ್ಯಾ ಕುಡ್ಮಿ ಸಮುದಾಯಾಂತ್, ಮುಂಡಗೌಡ ಭಾಗೀರಥಿ ಬಾಯಿ ದಂಪತಿಂಕ್ ಎಕ್ಲೊಚ್ ಪೂತ್ ಸೇಸು ಮೇಸ್ತ್ರಿ. ಆತಾಂ 91 ಪ್ರಾಯೆಚೊ ಸೇಸು ಮೇಸ್ತ್ರಿ ಆಪ್ಲ್ಯಾ 15 ವ್ಯಾ ಪ್ರಾಯೆರ್ಚ್ ಕುಡ್ಮ್ಯಾಂಲ್ಯಾ ಧಾರ್ಮಿಕ್ ಪರಂಪರೆಚ್ಯಾ ಆಚರಣಾಚೆಂ ಮಹತ್ವ್ ಆಸ್ಚ್ಯಾ ಪ್ರದರ್ಶನಾತ್ಮಕ್ ಜಾನಪದ್ ಕಲಾ - ಗುಮ್ಟಾಂ ತೋಣಿಯಾಂಚೆಂ ಗಾಯನ್ ಆನಿ ತ್ಯಾ ಸಂಬಂಧ್ ನಾಚಾಂಕ್ ಆಪ್ಲೆಂ ಕರುನ್ ಘೆತ್‍ಲ್ಲೊ ಮೇರು ಕಲಾಕಾರ್. ಸಾನ್ ಪ್ರಾಯೆರ್ ದುರ್ಬೋಳ್ಪಣ್ ಆಸ್ಲ್ಯಾರೀ ಕಲಾಖಾತಿರ್ ಆಪ್ಲೆಂ ಜೀವಮಾನ್ ಅರ್ಪಿಲ್ಲೊ. ವಿದ್ಯಾಭ್ಯಾಸಾಚೆಂ ವಾರೆಂ ಸಯ್ತ್ ನಾಸ್‍ಲ್ಲ್ಯಾ ಹಾಚೆ ಮ್ಹಾಲ್ಘಡೆ ಕೊಣೀ ಕಲಾಕಾರ್ ನ್ಹಂಯ್ ಜಾಲ್ಯಾರೀ ಕೇವಲ್ ಕಂಠಸ್ಥ್ ಸಂಪ್ರದಾಯಾನ್ ಆದ್ಲ್ಯಾ ಪರಂಪರೆ ಪ್ರಮಾಣೆ, ಸಂಪ್ರದಾಯ್‍ಬದ್ಧ್ ಶೈಲಿ ಅಪ್ಣಾವ್ನ್ ಹ್ಯಾ ಕಲಾಕ್ ಉಂಚ್ಲೆಂ ಸ್ಥಾನ್ ಮೆಳವ್ನ್ ದಿಲ್ಲೊ ಮಹಾನ್ ಕಲಾಕಾರ್.

ಜಾನಪದ್ ಕಲಾ ಜಾಲ್ಯಾರೀ ತಾಕಾ ಏಕ್ ಪೂರ್ಣ್ ಶಿಸ್ತಾಚೊ ಚೌಕಟ್ ಆಸ್ತಾ. ಕಲಾಭ್ಯಾಸ್ ಆನಿ ಕಲಾಪೋಷಣ್, ಕಲಾಚ್ಯಾ ಗೌರವಾಕ್ ಉಣೆಂ ಪಣ್ ಹಾಡ್ಚ್ಯಾಬರಿಂ ಆಸ್ಚಾಕ್ ನಜೊ. ಕಲಾಪ್ರಕಾರ್ ಹರ್‍ಎಕ್ಲ್ಯಾಕೀ ಅನಾಯಾಸ್ ರಿತಿರ್ ಶಿಕ್ಚಾಕ್ ಜಾಯ್ನಾ. ಥೊಡ್ಯಾಂಕ್ ಮ್ಹಾಲ್ಘಡ್ಯಾಂಲಿ ದೆಣ್ಗಿ ಜಾಲ್ಯಾರ್ ಸೇಸು ಮೇಸ್ತ್ರಿಕ್ ತಿ ಸ್ವಯಾರ್ಜಿತ್. ಹೀ ಕಲಾ ತೋ ಶಿಕ್ತಾನಾ ಪರಿಸರಾಂತ್ಲೆ ತ್ಯಾ ಕಾಲಾಚೆ ಖ್ಯಾತ್ ಕಲಾಕಾರ್ -ಕಾನ್ಸೆಕಾರ್ ಸೇಸಪ್ಪ ಗೌಡ, ರವಳುಗೌಡ, ವಿಠಲ ಮಾಸ್ತರಾಚೊ ಬಾಪೊಯ್ ಅಮ್ಮುಗೌಡ, ಕುಷ್ಟು ಗುರ್ಕಾರ್, ಪುಟ್ಟಣ್ಣ ಗುರ್ಕಾರ್, ಬಾಬುಗುರ್ಕಾರ್, ಪೆರಾರ್‍ಕಾರ್ ಕೊರಗಗೌಡ, ತಿಮ್ಮಪ್ಪ ಗೌಡ, ಸರಂಗಿಕಾರ್ ತಿಮ್ಮಗೌಡ - ಹಾಂಚೊ ಪ್ರಭಾವ್ ಆಪ್ಣಾವಯ್ರ್ ಜಾಲ್ಲೊ ಪ್ರಾಮಾಣಿಕ್‍ಪಣಾನ್ ತೋ ಉಡ್ಗಾಸ್ ಕರ್ತಾ. ತೋ ಕೃಷಿಕ್ ನ್ಹಂಯ್. ಪುಣ್ ಕುಡ್ಮಿ ಜಾನಪದ್ ಕಲಾಕ್ಷೇತ್ರಾಂತ್

ತಾಣೆಂ ಕೆಲ್ಲ್ಯಾ ಕೃಷಿಕ್ ಮೋಲ್ ಬಾಂಧ್ಚ್ಯಾಕ್ ಸಾಧ್ಯ್ ನಾ. ಕೊಂಪದವು ವಾಡ್ಯಾಂತ್ ಎಕಾ ಕಾಲಾರ್ ರಾವೊನ್ ವೆಚ್ಯಾ ಪರಿಸ್ಥಿತಿಂತ್ ಆಸಲ್ಲ್ಯಾ ಗುಮ್ಟ್ಯಾ ಕಲಾಚೊ ಖೇಳ್ ಮೇಳ್ ಪುನಃಶ್ಚೇತನ್ ಕೆಲ್ಲೊ ಸೇಸು ಮೇಸ್ತ್ರಿನ್ ಮ್ಹಣ್ ಸಾಂಗ್ಣಿ ಆಸಾ.

ಕಲಾ ವ್ಹಾಂವ್ಚ್ಯಾ ಉದ್ಕಾಬರಿಂ ಆಸೊಕಾ ವಿನಃ ರಾವುಲ್ಲೆಂ ತಳೆಂ ಜಾವ್ಚ್ಯಾಕ್ ನಜೊ. ರಾವುಲ್ಲೆಂ ಉದಕ್ ನಿಷ್ಕ್ರಿಯ್ ಆಸ್ತಾ. ವ್ಹಾಂವ್ಚೆಂ ಉದಕ್ ಚೈತನ್ಯಭರಿತ್ ಆಸ್ತಾ. ಸೇಸು ಮೇಸ್ತ್ರಿನ್ ಸಾಂಪ್ರದಾಯಕ್ ಚೌಕಟ್ಟ್ ಮಿರ್ಸ್ಚಾನಾಸೆಂ, ಸಮರ್ಥ್ ನಿರ್ದೇಶನಾ ಮುಖಾಂತರ್, ಅರ್ಪಣಾ ಮನೋಭಾವಾನ್ ಪರಿಸರಾಂತ್ಲ್ಯಾ ಸಗ್ಳ್ಯಾಂಕೀ ಹಿ ಕಲಾ ಶಿಕೊವ್ನ್, ಸಗ್ಳ್ಯಾಂಲ್ಯಾ ಅಭಿಮಾನಾಕ್ ಪಾತ್ರ್ ಜಾಲ್ಲೊ ಪುಣ್ಯ ಜೀವಿ. ೬ ಚೆಡೆ ಆನಿ ೪ ಚೆಡ್ವಾಂ ಭುರ್ಗಿಂ ಆಸ್ಚ್ಯೊ ಸುಸಂಸ್ಕೃತ್ ಸಂಸಾರ್ ತಾಂಚೊ. ತಾಚೆ ಪೂತ್ ಸಗ್ಳೆ ಕಲಾಕಾರ್. ಮ್ಹಾಲ್ಘಡೊ ಪೂತ್ ಲಿಂಗಪ್ಪ ಮೇಸ್ತ್ರಿ, ಸೇಸು ಮೇಸ್ತ್ರಿಚಿ ಪರಂಪರಾ ಮುಕಾರ್ ವ್ಹರ್ತೇ ಆಸಾ.

ಕಲಾಪೋಷಣ್ ಕರುನ್ ಸಾರ್ಥಕತಾ ಅಪ್ಣಾಯಿಲ್ಲೆ ಉಣೆ. ಸಾರ್ಥಕತಾ ಅಪ್ಣಾಯ್ಲ್ಯಾರೀ ಪ್ರಸಿದ್ಧ್ ಜಾಲ್ಲೆ ಆಪ್ರೂಪ್. ಚಡ್‌ಶೆ ಕಲಾಕಾರ್ ಸಾಧನಾಚೆಂ ಮೇಟ್ ಚಡ್‌ಲ್ಲೆಚ್ ಸ್ತಬ್ಧ್ ರಾವ್ತಾ. ಸೇಸು ಮೇಸ್ತ್ರಿ ಆತಾಂ 91 ಪ್ರಾಯೆಚೊ ಮ್ಹಾಲ್ಘಡೊ ಜಾಲ್ಯಾರೀ ಗುಮ್ಟ್ಯಾಂ ಕಲಾಂತ್ ಸಕ್ರಿಯ್ ರಿತಿರ್ ತರ್ನಾಟ್ಯಾಂಚಾಕ್‌ಯೀ ಚಡ್ ಉತ್ಸಾಹಾನ್ ಭಾಗ್ ಘೆತಾ ತೆಂ ವಿಶೇಷ್. ಸರಳ್ ಸ್ವಭಾವ್, ನಿರಾಡಂಬರ್ ವ್ಯಕ್ತಿತ್ವ್, ನಿಗರ್ವಿ, ಪ್ರಚಾರ್ ಪ್ರಶಂಸಾಂಕ್ ಆಶೆನಾಸ್‌ಲ್ಲ್ಯಾ ಸೇಸು ಮೇಸ್ತ್ರಿಂಕ್, ತಾಂಚ್ಯಾ ಯೋಗ್ಯತೆಕ್ ಮಾನ್ ದೀವ್ನ್ ಸಮಾಜಾನ್ ದೋನ್ ಪಾವ್ಟಿಂ ಗೌರವಾಚ್ಯಾ ವೇದಿಂಚೆರ್ ಸನ್ಮಾನ್ ಕೆಲಾ.

❖❖❖

ಅನುಬಂಧ್ 2 :

ಕೊರ್ಗ್ಯಗೌಡ, ಕನ್ನೋರಿ

ಮಂಗ್ಳುರ್ ತಾಲೂಕ್ ಎಡಪದವು ಗಾಂವಾಂತ್ ವಸ್ತಿ ಆಸ್ಚ್ಯಾ ಚಡ್‌ಶ್ಯೆ ಕುಡ್ಮ್ಯಾ 'ಕನ್ನೋರಿ' ವಾಡ್ಯಾಕ್ ಸಂಬಂಧ್ ಆಸ್‌ಲ್ಲೆ. ಮ್ಹಸ್ತ್ ಕಾಳಾ ಥಾವ್ನ್‌ಯೀ ಜೈನ ಜಮೀನ್ದಾರಾಂಚೆ ವಕ್ಲಾಂ ಜಾವ್ನ್ ಕೃಷಿ ಆನಿ ಕೃಷಿಕೂಲಿಂಚ್ಯಾ ಶ್ರಮಜೀವನ್ ಆಪ್ಣಾವ್ನ್ ಹೆರ್ ಸಮಾಜೆಚ್ಯಾ ಲೊಕಾಥಾವ್ನ್ ಪ್ರಾಮಾಣಿಕ್ ಕಷ್ಟ್ ಜೀವಿ ಪಂಗಡ್ ಮ್ಹಣ್ ಪ್ರಶಂಸಾಪಾತ್ರ್ ಜಾಲ್ಲೆ. ಕನ್ನೋರಿ ವಾಡ್ಯಾಂತ್ ಗುರ್ಕಾರಾಲೆಂ ಕುಟಾಮ್ ಕುಡ್ಮ್ಯಾಂಚ್ಯಾ ಧಾರ್ಮಿಕ್ ಪಾಟ್‌ಭೂಂಯ್ಚಿ, ಜಾನಪದ್ ಮಹತ್ವಾಚಿ ಸಾಂಸ್ಕೃತಿಕ್ ಕಲಾ -ಗುಮ್ಟಾಂ ಖೆಳಾಚೆಂ ಗಾಯನ್, ವಾದನ್, ನರ್ತನಾಂಕ್ ಪ್ರಖ್ಯಾತ್. ಅಸಲ್ಯಾ ಮಂತನಾಚ್ಯಾ ಕುಟ್ಮಾಂತ್ ಗುರ್ಕಾರ್ ಅಪ್ಪುಗೌಡಾಲೊ ತಿಸ್ರೊ ಪೂತ್ ಜಾವ್ನ್ ಜಲ್ಮಾಲ್ಲೊ ಕೊರ್ಗ್ಯಗೌಡ.

ಬಾಳ್ಪಣಾಂತ್ ಹಾಕಾ ಮೆಳಲ್ಲೊ ಪೂರಕ್ ಕಲಾ ಪರಿಸರ್, ಸಾನ್ ಪ್ರಾಯೆರ್‌ರ್ಚ್ಯೆ ಕುಡ್ಮ್ಯಾ ಸಂಸ್ಕೃತಿಚ್ಯಾ ಜಾನಪದ್ ಕಲಾಂತ್ ಪರಿಣತ್ ಜಾವ್ಚ್ಯಾಕ್ ಅನ್ಕೂಲ್ ಜಾಲೆಂ. ಪರಂಪರಾಗತ್ ಮ್ಹಾಲ್ಘಡ್ಯಾಂಲಿ ದೆಣ್ಗಿ, ನಿರಂತರ್ ಪರಿಶ್ರಮಾಚ್ಯಾ ಅಭ್ಯಾಸಾನ್ ಏಕ್ಲೊ ಉತ್ಕೃಷ್ಟ್ ಕಲಾಕಾರ್ ಜಾವ್ಚ್ಯಾಕ್ ಸಾಧ್ಯ್ ಜಾಲೆಂ.

ಗುರ್ಕಾರ್ ಅಪ್ಪುಗೌಡ ಹ್ಯಾ ಕಲಾಚೆಂ ಅಂತರಂಗ್ ಬಹಿರಂಗ್ ಕಳ್‌ಲ್ಲೊ ಆಸೊನ್ ಗಾಯನ್ ಆನಿ ನರ್ತನ್ ಸರಳ್ ರಿತಿನ್ ಶಿಕೊವ್ಚ್ಯಾಕ್ ಸಮರ್ಥ್ ಆಸ್‌ಲ್ಲೊ. ತ್ಯಾ ಕಾಲಾರ್ ಪದಾಂ ಬರವ್ನ್ ದವರ್ಚ್ಯಾ ತಿತ್ಲೆ ವಿದ್ಯಾವಂತ್ ನಾಸ್‌ಲ್ಲೆ. ಜಾನಪದ್ ಪದಾಂ ಶ್ರುತಿ ಸಂಪ್ರದಾಯಾನ್, ಕೇವಲ್ ಉಡ್ಗಾಸಾ ಸಕ್ತಿನ್ ತೊಂಡಾ ಥಾವ್ನ್ ತೊಂಡಾಕ್, ಪಿಳ್ಗೆ ಥಾವ್ನ್ ಪಿಳ್ಗೆಕ್ ವ್ಹಾಳೊನ್ ಯೆತಾ. ಕೊರ್ಗ್ಯ ಗೌಡಾಕ್ ಇಲ್ಲೆಂ ಬರಪ್‌ಯೀ ಆಸ್‌ಲ್ಲ್ಯಾನ್ ತಾಚ್ಯಾ ಪರಿಣತಿಕ್ ಸಹಾಯ್ ಜಾಲೆಂ ಮ್ಹಣ್ಯೆತ್. ಪೂರ್ಣ್ ರಾಮಾಯಣಾಚಿಂ ಪದಾಂ ಆಡ್ ಆಡ್ಕೊಳ್ ನಾಸ್ತಾಂ ಗಾಯಿತ್ತ್. ಹೆರ್ ಪುರಾಣಾಂಚಿಂ ಪದಾಂ ಕಂಠಪಾಠ್ ಕರುನ್ ನೃತ್ಯಾಭ್ಯಾಸಾ ಸಯ್ತ್ ಉಂಚ್ಲೊ ಕಲಾಕಾರ್ ಜಾವ್ನ್ ರೂಪಿತ್ ಜಾಲೊ. ಹಾಕಾ ನಾಚಾಕ್‌ಯೀ ಗಾಯನ್ ಚಡ್ ಫಾಲ್ಸಾಲೆಂ ಮ್ಹಣ್ಯೆತ್. ಅಶೆಂ ಪರಂಪರೆಚೊ ಪ್ರತಿನಿಧಿ ಜಾವ್ನ್ ರೂಪಿತ್ ಜಾತಾನಾ ಆಪ್ಲೊ ಬಾಪಯ್ ನ್ಹಂಯ್ ಆಸ್ತಾಂ ತವಳ್ಚೆ ಪ್ರಸಿದ್ಧ್ ಕಲಾಕಾರ್ ಮಡಪಾಡಿ ತೋಟ ಮೋನುಗೌಡ, ಮಡಪಾಡಿ ಅಣ್ಣಪ್ಪ ಗೌಡ, ಪಾದೆ ಅಣ್ಣುಗೌಡ, ದೆಪ್ಪದವು

ಹೊನ್ನುಗೌಡ, ಕಿಟ್ಟುಗೌಡ, ಸಾಂತಪ್ಪಗೌಡ, ಗುತ್ತಗಾರ್ ಚಂದುಗೌಡ, ಪಟ್ಲಚಿಲ್ ಚಂದುಗೌಡ... ತಸಲ್ಯಾಂಚೊ ಒಡನಾಟ್ ತೊ ಸ್ಮರಣ್ ಕರ್ತಾ.

ಕಲಾರೂಚ್ ಆಸ್‌ಲ್ಯಾಂಕ್ ತಿ ಕಲಾ ಕಶೆಂ ಉರೊವ್ಕಾ ಮ್ಹಣ್‌ಯೀ ಕಳಿತ್ ಆಸ್ತಾ. ಕಲಾ ಕೆದ್ನಾಂಯ್ ಆಪ್ಲ್ಯಾ ಉಂಚ್ಲ್ಯಾ ಸ್ತರಾಕ್ ಕಲಾಕಾರಾಕ್ ಉಭಾರ್‍ಕಾ ಶಿವಾಯ್ ಕಲಾಚ್ಯಾ ಕಲಾಕಾರಾಚ್ಯಾ ಮಟ್ಟಾಕ್ ದೆಂವ್ಚಾಕ್ ನಜೊ. ಕೊರ್‍ಗ್ಯ ಗೌಡಾನ್ ಗುಮ್ಮಟಾಂ ಕಲಾಚ್ಯಾ ಗಾಯನಾಕ್ ಎಕಾ ಉಂಚ್ಲ್ಯಾ ಪಾಂವ್ಡ್ಯಾಕ್ ಪಾವವ್ನ್ ಗೌರವಾಚೆಂ ಸ್ಥಾನ್ ಲಾಭಂವ್ಚಾಂತ್ ಪ್ರಮುಖ್ ಪಾತ್ರ್ ಘೆಲಾ. ಹಾಂಚ್ಯಾ ಮುಖಾಂತರ್ ಮ್ಹಸ್ತ್ ತರ್‍ನಾಟೆ ಪ್ರಭಾವಿತ್ ಜಾವ್ನ್ ಪರಂಪರಾ ಮುಕಾರ್ ವ್ಹಾಳಯ್ತ್ ಆಸಾ. ಹಾಂಚ್ಯಾ ಪುತಾಂ ಪೈಕಿ ಕೂಸ ಗೌಡ ಪದವೀಧರ್ ಉದ್ಯೋಗಸ್ಥ್ ಜಾಲ್ಯಾರೀ ಆಪ್ಲ್ಯಾ ಬಾಪಾಯ್ಲ್ಯಾ ಕಲಾಕ್ಷೇತ್ರಾಂತ್ ಹೆಳೊನ್ ಆಸಾ.

ಪ್ರಕೃತ್ ಗುಮ್ಮಟ ಪದಾಂಚ್ಯಾ ಸಾಹಿತ್ಯಾಕ್ ಸಂಬಂಧ್ ಜಾವ್ನ್ ಸಂಪನ್ಮೂಳ್ ವ್ಯಕ್ತಿ ಜಾವ್ನೈತ್ ಜಾಲ್ಯಾಂ ಪೈಕಿ ಗುರ್ಕಾರ್ ಅಪ್ಪುಗೌಡ ಉಪ್ರಾಂತ್ಲೊ ವ್ಯಕ್ತಿ ಕೊರ್‍ಗ್ಯ ಗೌಡ. ತಾಂಚೆ ಪ್ರಾಯ್ ತಾಂ 75 ಉತ್ರೊನ್ ನಿವೃತ್ತಿಚ್ಯಾ ತಡಿರ್ ಪಾವ್ಲ್ಯಾರೀ ಕಲಾಕ್ಷೇತ್ರಾಂತ್ ಪ್ರವೃತ್ತ್ ಆಸಾ.

❖❖❖

ಅನುಬಂಧ್ 3 :

ಬಾಬು ಗೌಡ, ಮ್ಯೆಂದೇರಿ

ದಕ್ಷಿಣ ಕನ್ನಡ ಜಿಲ್ಲ್ಯಾಂತ್ಲೊ ಪ್ರಸಿದ್ಧ್ ಯಾತ್ರಾಸ್ಥಳ್, ಆನಿ ಸಾಂಸ್ಕೃತಿಕ್ ನಗರ್, ಜೈನಕಾಶಿ ಮ್ಹಣ್‌ಚ್ ಪ್ರಖ್ಯಾತ್ ಜಾಲ್ಲೊ ಗಾಂವ್ ಮೂಡಬಿದ್ರೆ. ಹಾಂಗಾಥಾವ್ನ್ ಸುಮಾರ್ ಸ ಕಿ.ಮೀ. ತೆನ್ನಾಕ್, ಆದ್ಲಿಂ ಚೌಟರಾಯಾಂಲ್ಯಾ ರಾಜ್ಪಟ್ಕೆಚ್ಯಾ ಮರಕಡ ಗುತ್ತಾಚ್ಯಾ ಬಂಟ ಸಮುದಾಯಚೆಂ ಆಡಳಿತ್ ಆಸ್‌ಲ್ಲ್ಯಾ 'ಮ್ಯೆಂದೇರಿ' ಮ್ಹಳ್ಳ್ಯಾ ಪ್ರಶಾಂತ್ ಪರಿಸರಾಂತ್ ಕುಡ್ಮಿಚ್ ಚಡ್ ವಾಸ್ತವ್ಯ್ ಆಸ್‌ಲ್ಲೊ ಏಕ್ ವಾಡೊ ಆಸಾ. ಕುಡ್ಮಿ ಹಾಂಗಾ ಮರಕಡ ಗುತ್ತಾಚೆ ಒಕಲ್ ಜಾವ್ನ್ ಆಪ್ಲಿ ಸ್ವಾಮಿನಿಷ್ಠಾ, ಪ್ರಾಮಾಣಿಕತಾ, ದೇವಭಕ್ತ್, ಸ್ವಾಭಿಮಾನ್ , ಸರಳ್ ಜೀವನಾಚೊ ಸುಸಂಸ್ಕೃತ್ ಸಮಾಜ್ ಜಾವ್ನ್ ಜೀವನ್ ಕರ್ನ್ ಆಯಿಲ್ಲೆ. ಹಾಂಗಾಚ್ಯಾ ಗುರ್ಕಾರಾ ಘರ್ಚೊ ಪರಂಪರಾಗತ್ ಕಲಾಕಾರ್ ದಿ| ತಿಮ್ಮಗೌಡಾಚೊ ಪೂತ್, ಸುಮಾರ್ 58 ವರ್ಸಾಂ ಉತ್ರಾಲ್ಲೊ, ಸರ್ವಾಂಕ್ 'ಬಾಬಣ್ಣ' ಮ್ಹಣ್‌ಚ್ ವಳ್ಕಾಲ್ಲೊ ಬಾಬುಗೌಡ, ಕೊಡಿಯಾಲ್ ಕುಡ್ಮಿ ಗುಮ್ಟಾಂ ಕಲಾಕಾರಾಂ ಪೈಕಿ ವ್ಹಡ್ ನಾಂವ್.

ಸಾನ್ಪಣಾರ್ 'ಪಾಟ್ಲೊವ್ಚಾಕ್ ಆಸಾ, ಘಾಂಗೊರ್ಚಾಕ್ ನಾ' ಮ್ಹಳ್ಳ್ಯಾ ಸಾಂಗ್ಣೆಬರಿ ದುರ್ಬಳ್ಕಾಯ್, ಆರ್ಥಿಕ್ ಅಡ್ಚಣ್, ಪ್ರೋತ್ಸಾಹಾಚ್ಯಾ ಬೇಪರ್ವಾನ್ ವಿದ್ಯಾಭ್ಯಾಸ್ ನಾಸ್ಲ್ಯಾರೀ, ಅಪಾರ್ ಉಡ್ಗಾಸಾ ಸಕ್ತಿನ್ ಗಾಯ್ಲೆಲೆಂ ಗಾಯಿಲ್ಲ್ಯಾಬರಿ, ನಾಚ್‌ಲ್ಲೆಂ ನಾಚ್‌ಲ್ಲ್ಯಾಬರಿ ಕನುಕರಣ್ ಕರ್ನ್ ದುಸ್ರ್ಯಾ ದೀಸ್‌ಚ್ ಆಪ್ಣಾನ್‌ಯೀ ಗಾವ್ನ್, ನಾಚೂನ್ ಶಿಕ್ಚ್ಯಾ ಸಾಮರ್ಥ್ಯಾನ್ ಅಭಿಜಾತ್ ಕಲಾಕಾರ್ ಜಾವ್ನ್, ಹ್ಯಾ ಕಲಾಕ್ ಉತ್ತೀಮ್ ಭವಿಷ್ಯ್ ರೂಪಿತ್ ಕೆಲ್ಲೊ ವ್ಯಕ್ತಿ. ನಿರ್ದಿಷ್ಟ್ ಅವ್ದೆಂತ್ ಮಾತ್ರ್ ಅಭ್ಯಾಸ್ ಕರ್ಯೆತ್ ಜಾಲ್ಲ್ಯಾ, ಹೆರ್ ಸಂದರ್ಭಾಂನಿ ಹ್ಯಾ ಕಲಾಚ್ಯಾ ಅಭ್ಯಾಸಾಕ್ ಸಮಾಜೆಂತ್ಲ್ಯಾ ರಿತಿರಿವಾಜಿಚೆಂ ನಿರ್ಬಂಧ್ ಆಸ್ಲ್ಯಾರೀ ಪಾವ್ಸಾಡಿಂಚ್ಯಾ ರಾತ್ತಿಂನಿ ಬಾಪಾಯ್‌ಥಾವ್ನ್ ಪುತಾಕ್ ರಾಮಾಯಣ್, ಮಹಾಭಾರತ್, ಭಾಗವತ್, ಶಿವಪುರಾಣಾಂತ್ಲ್ಯಾ ಪದಾಂಚೊ ಕಂಠಪಾಠ್ ಜಾವ್ನ್ ನಿದ್ತಾನಾ ಥೊಡ್ಯಾ ಪಾಪ್ಟಿಂ ಘಾತ್ಯಾ ಪಾರಾಚೊ ಕೊಂಬೊ ಸಾಜ್ ಘಾಲ್ತಾಲೊ. ಆಪ್ಲ್ಯಾ ಕುಟ್ಮಾಂತ್ಲೆ ತ್ಯಾ ಕಾಲಾಚೆ ಪ್ರಸಿದ್ಧ್ ಕಲಾಕಾರ್ ವೀರಪ್ಪ ಗುರ್ಕಾರ್, ಅಣ್ಣು ಗುರ್ಕಾರ್, ನೇಮುಗೌಡ ಹಾಂಚ್ಯಾ ಪದಾಂ ನಾಚಾಂನಿ ಪ್ರಭಾವಿತ್ ಜಾವ್ನ್, ಬಾಬಣ್ಣಾಕ್ 18 ವರ್ಸಾಂ ಭರ್ತಾನಾ ಎಕ್ಲೊ ಉಂಚ್ಲೊ ಕಲಾಕಾರ್ ಜಾವ್ಚ್ಯಾಕ್ ಸಾಧ್ಯ್ ಜಾಲೆಂ.

ಬಾಬಣ್ಣಾನ್‌ಚ್ ಸಾಂಗ್ಚ್ಯಾ ಪ್ರಕಾರ್–ಮ್ಹಾಲ್ಘಡ್ಯಾಂ ಖೆಳ್ಗಡ್ಯಾಂಥಾವ್ನ್ ಹಿ ಕಲಾ ಶಿಕ್ಚಾಕ್ ಜಾಯಿತ್ತೆಂ ಕಷ್ಟ್ ಆಸ್‌ಲ್ಲೆಂ. ಪದಾಂ, ನಾಚ್ ಆನಿ ಗುಮ್ಟಾಂ ವ್ಹಾಜಂವ್ಚೆಂ ಪಳೆವ್ನ್,

ಆಯ್ಕೊನ್ ಅನುಭವ್ ಜೊಡ್ನ್ ಶಿಕೋಂಕಾ ಆಸ್‌ಲ್ಲೆಂ. ಪೊಟಾಕ್ ಶಿತ್ ನಾಸ್ಲ್ಯಾರೀ, ಧಾರ್ಮಿಕ್ ಆಚರಣ್ ಉರವ್ಚ್ಯಾಕ್ ಹಿ ಕಲಾ ಶಿಕ್ಚಿ ಆನಿವಾರ್ಯತಾಯ್ ಆಸ್‌ಲ್ಲಿ. ಸಾನ್ ಚೆಡೆಭುರ್ಗೆ ಆನ್ಪ್ಯಾಗ್ ಆಸ್‌ಲ್ಲ್ಯಾ ವ್ಹಾಲ್ಫಡ್ಯಾಂ ಖೆಳ್ಗಡ್ಯಾಂಥಾವ್ನ್ ಶಿಕೋಂಕಾ ಜಾಲ್ಯಾರ್ ವ್ಹಸ್ತ್ ಪರಿಣತಾ ಜಾವ್ಯಾಕಸ್‌ಲ್ಲಿ. ಪರಿಣತಾ ಆಸ್ಲ್ಯಾರ್‌ಯೀ, ಪಂಗ್ಡಾಂತ್ ಖೆಳ್ಟಾನಾ ಪದಾಂ, ನಾಚ್ಪಾಚಿಂ ಪಾವ್ಲಾಂ, ಗುಮ್ಟಾಂಚೆ ತಾಳ್ ಕುಸ್ಕಟ್ ಚುಕ್ಲ್ಯಾರೀ ಕುಟಾಮ್ ಸಂಬಂಧ್ ವ್ಹಳ್ಖಿ ಮುಲಾಜ್ ನಾಸ್ತಾನಾ, ಖಂಚ್ಯಾಯೀ ವ್ಹಾಲ್ಫಡ್ಯಾಂ ಕಲಾಕಾರಾಂಚೆ ಪೇಟ್, ಫಾಪೊರ್‌ಯೀ ಖಾವ್ಕಾಸ್‌ಲ್ಲೆ. ಮಾತ್ರ್ ನ್ಹಂಯ್, ತ್ಯಾ ಘಡಿಯೆಚ್ಚ್ ಪಂಗ್ಡಾಂತ್ಲೆಂ ವ್ಹೊಸ್ತುನ್ ಭಾಯ್ರ್ ಘಾಲ್ತಾಲೆ. ಅಶೆಂ ಪೇಟ್, ಫಾಪೊರ್ ಖಾಯ್ಲ್ಯಾರೀ ಚೆಡೊ ಜಾಂವ್, ಚೆಡ್ವಾಚೆ ಆವ್ಯೊಯ್ ಬಾಪ್ಯೊಯ್ ಜಾಂವ್, ವ್ಹೊಸ್ತಿಲ್ಲ್ಯಾಚ್ಯಾ ವಿರೋಧ್ ಉಲಯ್ನಾಸ್‌ಲ್ಲೆ. ಕೊಣ್‌ಯೀ ಚಕಾರ್ ಸಬ್ದ್ ಸಯ್ತ್ ಕಾಡಿನಾಸ್‌ಲ್ಲೆ. ಅಸಲ್ಯಾ ಸಂದರ್ಭಾಂನಿ ವ್ಹೊಸ್ತೊವ್ನ್ ಘೆತ್‌ಲ್ಲೊ ಭುರ್ಗೊ 'ಪಂಗ್ಡಾಂತ್ ಖೆಳ್ನ್‌ಚ್ ಸುದ್ದ್ 'ವ್ಹಳ್ಖ್ಯಾ ಹರಾಕ್ ಪಡೊನ್, ಕಿಟ್ಲೆಚ್ಚ್ ಕಷ್ಟ್ ಜಾಲ್ಯಾರೀ, ಫಾಪೊರ್, ಪೇಟ್, ಆವ್ಮಾನ್ ಸಯ್ತ್ ಸಹಿಸೂನ್ ಹಿ ಕಲಾ ಶಿಕ್ತಾಲೊ.

ಸಮಕಾಲೀನ್ ಸಂದರ್ಭಾಂತ್ ಕುಡ್ಮಿ ಕಲಾಕಾರಾಂ ಪೈಕಿ ಗುಮ್ಟಾಂಚೆ ತಾಳ್, ಗಾವಪ್ ನಾಚಪ್, ಆಚಾರಣಾ ವಿಧಿಂಚೆ ದೀಗಾಯ್, ರೂಂದಾಯ್, ಊಂಚಾಯ್, ಗೂಂಡಾಯ್ ನಿಯಮಾನುಸಾರ್ ಕಳಿತ್ ಆಸ್ಲೊ ಸವ್ಯಸಾಚಿ ಕಲಾಕಾರ್ ಬಾಬಣ್ಣ. ಆಪ್ಲ್ಯಾ ಜೀವನಾನುಭವಾ ಮೌಲ್ಯಾಂನಿ ಕುಡ್ಮಿ ಸಂಸ್ಕೃತಿವಿಶಿಂ ಸಂಪನ್ಮೂಳ್ ವೆಕ್ತಿ ಜಾವ್ನ್ ಅಧಿಕಾರಾಚ್ಯಾ ಉತ್ರಾಂನಿ ವಿವರಣ್ ದಿಂವ್ಚ್ಯಾಕ್ ತೊ ಶಕ್ತ್. ಹಾಚಿ ಗಾವ್ಪಾಚಿ ಶೈಲಿ, ನಾಚಾಚೆಂ ಮಟ್ಟ್, ಗುಮ್ಟಾಂ ತಾಳಾಂಚೆಂ ಗತ್ತ್ ಆದ್ಲ್ಯಾ ವ್ಹಾಲ್ಫಡ್ಯಾಂ ಖೆಳ್ಗಡ್ಯಾಂಲ್ಯಾ ಕಲಾಚೊ ಉಡ್ಗಾಸ್ ಕರ್ತಾ. ಗುಮಟ್ ಖಾಂದಾಕ್ ಉಮ್ಕಾಳಾವ್ನ್ ಖೆಳ್ಚ್ಯಾಕ್ ಲಾಗ್ಲ್ಯಾರ್ ಏಕಾ ರಿತಿಚ್ಯಾ ಆವೇಸ್ ಭರಿತ್ ಜಾವ್ನ್, ವೇಳ್ ಕಾಳ್, ಬೆಸೂರಾಚಿ ಭೆಟ್ಕೊಳ್‌ನಾಸ್ತಾನಾ ಖೆಳ್ತೇ ಆಸ್ತಾ. ಉರ್ಲಲೆ ಖೆಳ್ಗಡಿ ವಿರಾಮಾಕ್ ಬಸ್ಲ್ಯಾರೀ ಹೊ ವಿರಾಮ್ ಘೆವ್ನೊನಾ. ವಾಘಾಚಿ ಘೊರೊಜ್‌ಶೆಂ ತಾಳೊ ಜಾಲ್ಯಾರೀ ತ್ಯಾ ತಾಳ್ಯಾಚೊ ಅಪಸ್ವರ್ ಯೆಂವ್ಚೊನಾ. ನಾಚ್ಪಾಚಿಂ ಪಾವ್ಲಾಂಯೀ ಚುಕ್ಚಿಂನಾ. ಗಾನ್ಯಾಚ್ಯಾ ಆಲಾಪನಾಂತ್ ಏಕಾ ರಿತಿಚೆಂ ವಿಶಿಷ್ಟ್ ಆಕರ್ಷಣ್ ಆಸಾ. ತೋಣಿಯೊ ಖೆಳ್ಟಾನಾ, ಖಂಯ್ ಕಾನ್ ದೊಳೆ, ಆಂಗಾ ಪಾಂಗಾಕ್ ಲಾಗೊನ್ ಪೇಟ್ ಜಾಯ್ತ್ ವ್ಹಣ್ ಸಾಂಗೊಡ್ಯಾ ಘುಡ್ಯಾಕ್ ಭ್ಯೆಂ ದಿಸ್ಲ್ಯಾರೀ ತೋಣಿಯಾಂಚೆ ಪೇಟ್ ಪಡ್ಚ್ಯಾಕ್ ಪಡಾತ್, ಲಾಗ್ಚಾಕ್ ಲಾಗೊನ್ ಸಬ್ದ್ ಮಾತ್ರ್ ಆಯ್ಕಾತ್. ಉಡಣ್ - ಉಡ್‌ಲ್ಲ್ಯಾ ತಿತ್ಲ್ಯಾಚ್ಚ್ ನಾಜೂಕಾಯೆನ್ ಧರ್ಣಿರ್ ರೊಂಬಾತ್. ಹಾಣೆ ಗುಮಟ್ ವ್ಹಾಜವ್ನ್ ನಾಚ್ತಾನಾ[illegible]ರ್‌ಗಿಟ್ಲೆಬರಿ ಕಾಡ್ಚ್ಯಾ ಘುಂವ್ಡೆಚೊ ರಭಸ್, ತಾಳ್ ಚುಕಾನಾಸ್ಲೆಂ ವಾದನ್, ಪದಾಂಚೆಂ ಆಲಾಪನ್ ತಾಚ್ಯಾಚ್ಚ್ ನಾಂವಾರ್ ದಾಖ್ಲೊ ಜಾವ್ನ್ ಉರ್ಲಾಂ. ಪ್ರಾಯ್ 58 ಉತರ್ಲ್ಯಾರೀ ಹಾಚೆಕಡೆನ್ ಶಿಕ್‌ಲ್ಲೆ ತರ್ನಾಟೆ ಹಾಚ್ಯಾ ಅರ್ಧ್ಯಾ ತಿತ್ಲೆಂಯೀ ಖೆಳ್ಚೆನಾ ವ್ಹಳ್ಖ್ಯಾರ್ ಚೂಕ್ ಜಾಂವ್ಚಿನಾ.

ಬಾಬಣ್ಣಾಲೆಂ ವ್ಯಕ್ತಿತ್ವ್, ಕಲಾ ಕೌಶಲ್ಯಾಚೆಂ ಆಕರ್ಷಣ್, ಪ್ರೇರಣ್, ಪೋಷಣ್ ಪ್ರೋತ್ಸಾಹಾವರ್ವಿಂ ಪ್ರಭಾವಿತ್ ಜಾಲ್ಲ್ಯಾಂ ಪೈಕಿ ಹಾಂವ್‌ಯೀ ಎಕ್ಲೊ. ಹಾಚಿ ಕಲಾ ಶೈಲಿ ಅನುಕರಣ್ ಕರ್ಚೆಂ ಪ್ರಯತನ್ ವ್ಹಡ್ಸ್ತ್ ಜಣಾಂನಿ ಕೆಲಾಂ ಜಾಲ್ಯಾರೀ, ಮ್ಹೆಂದೇರಿ ವಾಡ್ಯಾಂತ್ಲೊ ಹಾಚೊ ಸಾಂಗೊಡೊ ಘಡೊ ಫಕೀರಗೌಡ ಸೊಡ್ಲ್ಯಾರ್ ಹೆರ್ ಕೊಣೀ ಹಾಕಾ ಸಹಜಲ್ಲೊ ಘಡೊ ಜಾಲ್ಲೊನಾ. ಬಾಬಣ್ಣಾಲಿ ಪ್ರತಿಭಾ ಸಮಾಜೆನ್ ವಳ್ಕೊನ್ ಮಾಂದ್ಚಾಬರಿ ಜಾವ್ಕಾ. ಧಾರ್ಮಿಕ್ ಆಚಾರಣಾಚಿ ಪಾಟ್‌ಭೂಂಯ್ ಆಸ್ಚ್ಯಾ ಹ್ಯಾ ಕಲಾನಿಮಿತ್ತಿ ಪೊಟ್‌ಭರಾನಾ ಜಾಲ್ಯಾರೀ ದೈವಿಕ್ ಆರಾಧನಾಚ್ಯಾ ಪ್ರಭಾವಾನ್ ಸುಖ್ ಸಮಾಧಾನ್ ಮೆಳ್ತಾ ಪ್ಹುಳ್ಳ್ಯಾ ಭರ್ವಸ್ಯಾನ್ ಮನ್ಯ್ಯಾಲ್ಯಾ ಮುಕಾಯ್ಲ್ಯಾ ಜೀವನಾಂತ್ ಉತ್ಸಾಹ್, ಉಲ್ಲಾಸ್, ಭರ್ಚಿ ಹಿ ಕಲಾ ಬಾಳ್ಕೊಕಾ.

❖❖❖

ಗೊಂಯ್ಕಾರ್
ಕುಡುಬಿ
ಗುಮಟೆ
ನೃತ್ಯ

ಮರಾಠಿಗರ
ಗುಮಟೆ ನೃತ್ಯ

ಬುರ್ರ ಕಥಾ ಮೇಳ

ಹಾಲಕ್ಕಿಯವರ ಗುಮಟೆ ಕುಣಿತ

ಗೊಂಯ್ಕಾರ್ ಕುಡುಬಿ ಗುಮಟೆ ಕಲಾವಿದ

ಕುಡುಬಿ ಗುಮಟೆ ತಂಡ

ಕುಡುಬಿ ಗುಮಟೆ ಕಲಾವಿದ
ಬಾಬು ಗೌಡ ಮೈಂದೇರಿ

ಸಿದ್ಧಿ ಗುಮಟೆ ತಂಡ

ಕುಡುಬಿ ಗುಮಟೆ ತಂಡ

ಉತ್ತರ ಕನ್ನಡದ ಗುಮಟೆ ತಂಡ

ಖಾರ್ವಿ ಗುಮಟೆ ತಂಡ



ಕುಡುಬಿ ಗುಮಟೆ ತಂಡ

ಗುಮಟೆ ಸುವಾರಿ

ಕ್ರಿಶ್ಚಿಯನ್ ಗುಮಟೆ ತಂಡ

ಗೊಂಯ್ಯಾಕಾರ್ ಕುಡುಬಿ ಗುಮಟೆ ಮೇಳ

ಮರಾಠಿ ಗುಮಟೆ ಮೇಳ

ಕುಡುಬಿ ಗುಮಟೆ ಮೇಳ

ಬುರ್ರ ಕಥಾ ಮೇಳ

ಹಾಲಕ್ಕಿ ಗುಮಟೆ ಮೇಳ

ಗುಮಟೆ

(ಕನ್ನಡ ಆವೃತ್ತಿ)

ಸಂಶೋಧಿತ ಸಂಪಾದನೆ :

ಯಂ. ಗೋಪಾಲ ಗೌಡ, ಎಡಪದವು

2011

ಪ್ರಕಾಶಕರು :

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

ಮಹಾನಗರಪಾಲಿಕಾ ಸಂಕೀರ್ಣ, ಲಾಲ್‌ಭಾಗ್, ಮಂಗಳೂರು 575 003

ಅಧ್ಯಕ್ಷರ ಮಾತು

ಶ್ರೀ ನಾರಾಯಣ ಖಾರ್ವಿ
ಅಧ್ಯಕ್ಷರು

ಎಲ್ಲರಿಗೆ ನಮಸ್ಕಾರಗಳು,

ಈ ದಿವಸ ನಮ್ಮ ಗೋಪಾಲ ಗೌಡರು ಬರೆದ ಪುಸ್ತಕ, "ಗುಮಟೆ" ನಿಮ್ಮ ಕೈಗೆ ಸಿಗುತ್ತಿದೆ. "ಗುಮಟೆ"ಯನ್ನು ತಯಾರಿಸುವುದು ಹೇಗೆ? ಗುಮಟೆಯ ಉಪಯೋಗವೇನು? ಗುಮಟೆಯ ವಿಶೇಷತೆ ಹಾಗೆಯೇ ಸಮಾಜ ಜೀವನದಲ್ಲಿ ಹೇಗೆ ಬಂದಿದೆ ಅಂತ ವಿವರಿಸುವ ಒಂದು ಪ್ರಯತ್ನ. ಪ್ರತಿಯೊಂದು ಸಮಾಜಕ್ಕೆ ಒಂದು ಸಂಪ್ರದಾಯವಿರುತ್ತದೆ, ಆ ಸಮಾಜದ್ದೇ ಒಂದು ಸಂಗೀತ ಸಾಧನ ಇರುತ್ತದೆ. ಮತ್ತು ಅವರ ಒಂದು ಜಾನಪದ ಕಲೆಯೂ ಇರುತ್ತದೆ, ಹಾಗೆಯೇ ನಮ್ಮ ಕುಡುಬಿ ಬಾಂಧವರು. ಕುಡುಬಿ ಸಮಾಜದ ಪ್ರಖ್ಯಾತ ಸಂಗೀತ ಸಾಧನ ಅಂದರೆ "ಗುಮಟೆ". ಅವರು ಈ ಸಂಗೀತ ಸಾಧನದ ಚರ್ಮ ಹದಮಾಡಿ, ಮಣ್ಣಿನ ಕಳಸೆಗೆ ಕಟ್ಟಿ, ಆ ಕಳಸೆಯ ಇನ್ನೊಂದು ಬದಿಯಲ್ಲಿ ಗಾಳಿ ಹೊರಹೋಗಲು ಅವಕಾಶ ಕಲ್ಪಿಸಿ ಗುಮಟೆ ತಯಾರು ಮಾಡುತ್ತಾರೆ. ಈ ಗುಮಟೆಯ ವಿಶೇಷತೆ ಅಂದರೆ, ಪ್ರತೀ ಹೋಳಿ ಉತ್ಸವ ಸಂದರ್ಭ ಹೆಚ್ಚಾಗಿ ಆಡುತ್ತಾರೆ. ಗುಮಟೆಯನ್ನು ಸಮಾಜ ಬಾಂಧವರ ಮನೆಯಂಗಳ ಹಾಗೇ ಗುಮಟೆಯ ವೈಭವವನ್ನು ಜಗತ್ತಿಗೆ ತಿಳಿಯಪಡಿಸುವುದು ಕುಡುಬಿ ಸಮುದಾಯ ಬಂಧುಗಳ ಸಂಭ್ರಮ. ಸಮಾಜದ ಪ್ರತೀಯೊಂದು ಸಂತೋಷ ಸಮಾರಂಭಗಳಲ್ಲಿ ಗುಮಟೆ ಆಡುತ್ತಾರೆ. ಹಾಗೆಯೇ ಅವರ ನೃತ್ಯ ವೈವಿಧ್ಯ, ಉಡುಗೆ, ತೊಡುಗೆ, ಅಲಂಕಾರಗಳು ಆಕರ್ಷಕವಾಗಿ ವಿವಿಧ ರೀತಿ ಇರುತ್ತದೆ. ಅಬ್ಬಲಿಗೆ ಹೂಗಳ ಮಾಲೆಗಳನ್ನು ಮುಡಿದುಕೊಂಡು ನರ್ತಿಸುವ ರೀತಿ ಮನಮೋಹಕವಾಗಿರುತ್ತದೆ.

ಈ ಪುಸ್ತಕವನ್ನು ಬರೆಯುವಲ್ಲಿ ಆತ್ಮೀಯ ಗೋಪಾಲ ಗೌಡರ ಪ್ರಯತ್ನ ಶ್ಲಾಘನೀಯ. ಹಾಗೆಯೇ ಪುಸ್ತಕ ಸುಂದರವಾಗಿ ಪ್ರಕಟನೆಗೊಂಡಿದೆ. ಈ ಪುಸ್ತಕ ಕುಡುಬಿ ಸಮಾಜಕ್ಕೆ ಮಾತ್ರವಲ್ಲ, ಎಲ್ಲಾ ಕೊಂಕಣಿ ಸಮಾಜಕ್ಕೇ ಉಪಕಾರವಾಗುವುದು ಅಂತ ನಂಬುತ್ತೇನೆ.

ದೇವ್ ಬರೆಂ ಕರೊಂ.

ಕುಂದಾಪುರ ನಾರಾಯಣ ಖಾರ್ವಿ
ಅಧ್ಯಕ್ಷರು, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ.

ಪ್ರಸ್ತಾವನೆ :

ಮಾನವನ ಸಾಂಸ್ಕೃತಿಕ ಇತಿಹಾಸಕ್ಕೆ ಮತ್ತು ಜಾನಪದ ಕಲಾಸೃಷ್ಟಿಗೆ ಅವಿನಾಭಾವ ಸಂಬಂಧವಿದೆ. ಆರಾಧನೆ ಹಾಗೂ ಆಚರಣೆಗಳ ಕ್ರಿಯೆ ಮುಂದೆ ವಿಕಾಸಗೊಂಡು ಪೂರ್ಣ ಸ್ವರೂಪದ ಕಲೆಯಾಯಿತು. ಮನುಷ್ಯನ ರೀತಿ ರಿವಾಜು ಆಚಾರ ವಿಚಾರ, ಪರಂಪರೆ, ನಿಷ್ಠೆ, ಸಂಸ್ಕಾರಗಳ ಜಮಾವಣೆಯೇ ಸಂಸ್ಕೃತಿ. ನಮ್ಮ ಪೂರ್ವಿಕರಿಗೆ ವಿದ್ಯಾಭ್ಯಾಸ, ಯಾ ಓದು ಬರಹಗಳ ಗಂಧಗಾಳಿ ಇರದಿದ್ದರೂ ಜನಪದರ ಸಂಸ್ಕೃತಿ, ಮೌಖಿಕ ಸಾಹಿತ್ಯಗಳು ಜಾನಪದ ಕಲೆ, ಸಾಹಿತ್ಯಗಳಲ್ಲಿ ಜೀವಂತ ಉಳಿದುಕೊಂಡವು. ಪುರಾತನ ಕಾಲದಲ್ಲಿ, ಕವಿತ್ವ ಹಾಗೂ ಶಾಸ್ತ್ರಗಳ ಉಗಮಕ್ಕೂ ಮೊದಲು, ಹಳ್ಳಿಗಳಲ್ಲಿ ವಾಡೆಗಳಲ್ಲಿ, ಊರು ಕೇರಿಗಳಲ್ಲಿ, ಹಾಡಿಗಳಲ್ಲಿ, ಕೃಷಿಯ ಶ್ರಮಜೀವನದ ಸಂದರ್ಭಗಳಲ್ಲಿ, ಹಬ್ಬ ಹುಣ್ಣಿಮೆ ಉತ್ಸವಗಳಲ್ಲಿ, ಸುಖದುಃಖಗಳ ಸಂದರ್ಭಗಳಲ್ಲಿ ಜನಪದರು ಒಟ್ಟು ಸೇರಿ ತಮ್ಮ ರಸಾನುಭವಗಳನ್ನು ಹಾಡುತ್ತಾ ಸುಲಭಲಭ್ಯ ಸಂಗೀತೋಪಕರಣಗಳನ್ನು ನುಡಿಸುತ್ತಾ, ಸಂಗೀತ ಹಾಗೂ ವಾದ್ಯಗಳ ತಾಳಕ್ಕೆ ಸರಿಯಾಗಿ ಕುಣಿತದ ಹೆಜ್ಜೆಗಾರಿಕೆಗೆ ಪ್ರಾರಂಭಿಸಿದರು. ಹೀಗೆ ಪ್ರಾರಂಭಿಸಿದ ಹೆಜ್ಜೆಗಾರಿಕೆ ಹಾಗೂ ಹಾಡುಗಳ ಅಭಿನಯವೇ ಕುಣಿತವಾಯಿತು. ಪ್ರಕೃತಿಯಲ್ಲಿ ಸಹಜವಾಗಿ ಉಪಲಬ್ಧವಾದ ಮಣ್ಣು, ಕಲ್ಲು, ಗಿಡಮರ, ಬಿಳಲು, ಹಣ್ಣು ಅಥವಾ ಹಣ್ಣಿನ ಗೊರಟು, ಹಕ್ಕಿಪುಕ್ಕ, ಮರದ ತೊಗಟೆ, ಎಲೆ ಮಾತ್ರವಲ್ಲದೆ ಉರಗ ಯಾ ಪ್ರಾಣಿಗಳ ಚರ್ಮ, ಕೊಂಬು, ದಂತ ಇತ್ಯಾದಿಗಳನ್ನು ಉಪಯೋಗಿಸಿ ತಯಾರಿಸಿದ ವಿವಿಧ ಪರಿಕರಗಳೇ ಸಂಗೀತೋಪಕರಣ ಗಳಾದವು. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳ ಸಂದರ್ಭಗಳಲ್ಲಿ ಅಲ್ಲದೆ ತಮ್ಮ ಕಷ್ಟಕರವಾದ ಶ್ರಮಜೀವನದ ಆಯಾಸ ಪರಿಹಾರಾರ್ಥವಾಗಿ, ತಮ್ಮ ಆತ್ಮ ಸಂತೃಪ್ತಿಗಾಗಿ ಜಾನಪದ ಸಂಗೀತೋಪಕರಣಗಳನ್ನು ಉಪಯೋಗಿಸಿಕೊಂಡು, ಜಾನಪದ ಹಾಡುಗಳನ್ನು ಹಾಡಿ, ಜಾನಪದ ರೀತಿಯಲ್ಲಿ ನರ್ತನ ಮಾಡುತ್ತಾ, ಜನಪದರು ತಮಗಾಗಿ ತಾವೇ ಸೃಷ್ಟಿಸಿಕೊಂಡ ಈ ಕಲೆಯನ್ನು ಪರಂಪರಾಗತವಾಗಿ ಉಳಿಸಿಕೊಂಡು ಬಂದವರಾಗಿದ್ದಾರೆ.

'ಗೀತಂ ಚ, ವಾದ್ಯಂ ಚ, ನರ್ತನಂ ಚ ತ್ರಯಂ ಸಂಗೀತಮುಚ್ಯತೆ' ಇದು ಸಂಗೀತದ ಬಗ್ಗೆ ಸಂಸ್ಕೃತದಲ್ಲಿರುವ ಒಂದು ಶ್ಲೋಕ. ಸಂಗೀತ - ಅದು ಜಾನಪದ ಯಾ, ಶಾಸ್ತ್ರೀಯವೇ ಆಗಿರಲಿ - ಅಲ್ಲಿ ಗಾಯನ ಮತ್ತು ನರ್ತನಕ್ಕೆ ಇರುವಷ್ಟೇ ಪ್ರಾಮುಖ್ಯತೆ ವಾದನ ಅಥವಾ ವಾದನ ಸಾಧನಗಳಿಗೂ ಇದೆ. ವಾದನ ರಹಿತ ಸಂಗೀತ - ಅದು ಸಂಗೀತವಾಗಿ ಪರಿಪೂರ್ಣತೆಯನ್ನು ಪಡೆಯುವುದಿಲ್ಲ.

ಯಾವುದೇ ಒಂದು ಜಾನಪದ ಕಲೆ, ಸಾಹಿತ್ಯ ಅಥವಾ ಸಂಗೀತೋಪಕರಣ, ಒಂದು ಊರಿನಲ್ಲಿ, ಪ್ರದೇಶದಲ್ಲಿ, ಯಾ, ಯಾವುದೇ ಒಂದು ಸಮಾಜ, ಸಮುದಾಯಗಳಲ್ಲಿ ಏಕರೂಪವಾಗಿರುವುದಿಲ್ಲ. ಹಾಗೆ ನೋಡಿದರೆ ಇಡೀ ಜಾನಪದವೇ ಸಂದರ್ಭ ಸಿದ್ಧಾಂತಕ್ಕೆ ಒಳಗಾಗಿರುವುದನ್ನು ಅವಲೋಕಿಸಬಹುದು. ಒಂದೇ ಸಂಗೀತ ಸಾಧನವು ವಿವಿಧ ಸಂದರ್ಭಗಳಲ್ಲಿ, ವಿವಿಧ ಸಮುದಾಯಗಳಲ್ಲಿ, ವಿವಿಧ ರೀತಿಯಲ್ಲಿ ಬಳಕೆಯಾಗಿರಬಹುದು. ಯಾವುದೇ ಉಪಕರಣ, ಹಾಡು ಅಥವಾ ನೃತ್ಯ ತನ್ನ ಮೂಲರೂಪ, ಗುಣ, ಸಾಮರ್ಥ್ಯ, ಸೌಂದರ್ಯಗಳಲ್ಲಿ, ಸುಧಾರಣೆ ಯಾ ಪರಿವರ್ತನೆಯ ಹೆಸರಿನಲ್ಲಿ ಅಲಕ್ಷಿಸಲ್ಪಡುವುದೋ ಅದನ್ನು ಅದೇ ಮೂಲ ಹೆಸರಿನಿಂದ ಗುರುತಿಸುವುದು ಆ ಕಲೆಗೆ ಅಥವಾ ಆ ಸಾಧನಕ್ಕೆ ಮಾಡುವ ಅಪಚಾರವಾದೀತು.

ಇಂದಿನ ಸಮಾಜದಲ್ಲಿ 'ಗುಮಟೆ' ಒಂದು ಸಂಗೀತ ಸಾಧನವಾಗಿ ವಿವಿಧ ಸಮುದಾಯಗಳಲ್ಲಿ, ವಿವಿಧ ಸಂದರ್ಭಗಳಲ್ಲಿ ಬಳಕೆಯಲ್ಲಿರುವುದು ತಿಳಿದುಬರುತ್ತದೆ. ಆದರೆ ಕೊಂಕಣಿ ಮಾತೃಭಾಷೆಯಾಡುವ ಸಮುದಾಯಗಳಲ್ಲಿ ಉಪಯೋಗವಾದಷ್ಟು ಇತರ ಸಮುದಾಯಗಳಲ್ಲಿ ಗುಮಟೆಯ ಉಪಯೋಗವಾಗಿಲ್ಲ ಎಂಬುದರ ಬಗ್ಗೆ ಅಭಿಪ್ರಾಯ ಭೇದವಿರಲಿಕ್ಕಿಲ್ಲ. ಗುಮಟೆಗೆ ಕೊಂಕಣಿ ಸಂಸ್ಕೃತಿಯ ಪ್ರತೀಕ 'ಕೊಂಕಣಿ ಜನಪದರ 'ಬಳುವಳಿ' ಎಂದೇ ಹೆಸರಿದೆ. ಪುರಾತನ ಕಾಲದಿಂದಲೂ ಕೊಂಕಣಿಗರು ಗುಮಟೆಯ ಕಲಾಕೌಶಲ್ಯವನ್ನು ಜತನಮಾಡಿಕೊಂಡು ಬಂದಿದ್ದಾರೆ.

'ಗುಮಟೆ'ಯ ಬಗ್ಯೆ ವಿಸ್ತೃತವಾದ ಮಾಹಿತಿಗಳು, ಅಧ್ಯಯನಯೋಗ್ಯವಾದ ರೀತಿಯಲ್ಲಿ ಬರಹರೂಪದಲ್ಲಿ ಯಾವುದೇ ಗ್ರಂಥದಲ್ಲಿ ಪ್ರಕೃತ ಲಭ್ಯವಿಲ್ಲ. 'ಗುಮಟೆ' ಅಂದರೆ ಏನು? ಇದನ್ನು ಹೇಗೆ ತಯಾರಿಸಲಾಗುತ್ತದೆ? ಯಾರು, ಯಾವ ಸಂದರ್ಭಗಳಲ್ಲಿ ಉಪಯೋಗ ಮಾಡುತ್ತಾರೆ? ಇದರ ಕಲಾವಿದರು ಯಾರು? ಗುಮಟೆಯ ಮಹತ್ವವೇನು? ಈ ಎಲ್ಲಾ ವಿಷಯಗಳ ಬಗ್ಗೆ ವಿವರಣಾತ್ಮಕ ಮಾಹಿತಿ ನೀಡಲು ಇಲ್ಲಿ ಪ್ರಯತ್ನಿಸಲಾಗಿದೆ. ಹಾಗೆಂದು ಗುಮಟೆಯ ಬಗ್ಗೆ ಇದೊಂದು ಸಂಶೋಧನೆ, ಅಥವಾ ಇದರಲ್ಲಿ ವಿವರಿಸಲ್ಪಟ್ಟ ಮಾಹಿತಿಯೇ ಅಂತಿಮ, ಸಮಗ್ರ ಯಾ ಪರಿಪೂರ್ಣ ಎಂಬುದಾಗಿ ಯಾರೂ ನಿರ್ಣಯಕ್ಕೆ ಬರಬೇಕಾಗಿಲ್ಲ. ಇನ್ನೂ ಹೆಚ್ಚಿನ ಸ್ಪಷ್ಟ ಹಾಗೂ ನಿಖರವಾದ ಮಾಹಿತಿಗಳಿರಬಹುದು. ಆದರೆ, ಕೊಂಕಣಿ ಮಾತೃಭಾಷೆಯ 'ಕುಡುಬಿ' ಬುಡಕಟ್ಟು ಸಮುದಾಯದ ಸಂಪ್ರದಾಯಬದ್ಧ 'ಗುಮಟೆ' ಕಲೆಯ ಅಭಿಜಾತ ಕಲಾಕಾರನ ನೆಲೆಯಲ್ಲಿ ನಾನು ಕಂಡುಕೊಂಡು ಅನುಭವಿಸಿದ ಹಾಗೂ ನನಗೆ ಲಭ್ಯವಾದ ಆಧಾರ ಸಾಹಿತ್ಯಗಳಿಂದ ಆಯ್ದು, ಅರಗಿಸಿಕೊಂಡ ಮಾಹಿತಿಯನ್ನು ವಿವರಿಸಲಾಗಿದೆ. ಆದುದರಿಂದ ಸ್ವಾಭಾವಿಕವಾಗಿಯೇ ಕುಡುಬಿಯರ ಗುಮಟೆ ಕಲೆಯ ವಿವರಣೆಗೆ ಸ್ವಲ್ಪ ಹೆಚ್ಚಿನ ಒತ್ತು ನೀಡಲಾಗಿದೆ. ಸಾಂದರ್ಭಿಕ, ಪ್ರಾದೇಶಿಕ, ಸಾಮುದಾಯಿಕ ಯಾ ವೈಯಕ್ತಿಕ ಅಭಿಪ್ರಾಯ ಭೇದ ಅಥವಾ ಹೆಚ್ಚಿನ ಮಾಹಿತಿಗಳಿದ್ದರೆ ಮುಂದಕ್ಕೆ ಸೇರಿಸಿಕೊಳ್ಳಲು ಮನಮುಕ್ತವಾಗಿದೆ.

ಕೊಂಕಣಿಯ 'ತವರು' ಆಗಿರುವ ಗೋವಾ ಮತ್ತು ಇತರ ಪ್ರದೇಶಗಳಲ್ಲಿ ಗುಮಟೆಯ ಬಳಕೆಯ ಬಗ್ಗೆ ಇನ್ನೂ ವಿಸ್ತೃತವಾದ ಮಾಹಿತಿಗಳು ಸಿಗಬಹುದು. ಈ ಬಗ್ಗೆ ಕೂಲಂಕುಷ ಅಧ್ಯಯನ ಅಗತ್ಯ.

ಕುಡುಬಿ ಸಮುದಾಯದಲ್ಲಿ ಧರ್ಮ ಮತ್ತು ಜಾನಪದ ಕಲೆಗೆ ಅವಿನಾಭಾವ ಸಂಬಂಧವಿದೆ. ನಮ್ಮ ಸಂಪ್ರದಾಯ ಪ್ರಕಾರ ಪ್ರತೀ ವರ್ಷ ಹೋಳಿ ಹಬ್ಬಕ್ಕೆ ಈ ಕಲಾಸೇವೆ ಖಡ್ಡಾಯವಾಗಿ ಮಾಡಲೇಬೇಕಾದ ಅನಿವಾರ್ಯತೆ ಇರುವುದರಿಂದ ಕಲೆಯು ನೆಲೆಯಲ್ಲಿ ಮೂಲಸ್ವರೂಪ ಉಳಿದಿದೆ, ಬೆಳೆದಿದೆ ಮತ್ತು ಪರಂಪರೆ ಮುಂದುವರಿಯುತ್ತಿದೆ. ಸ್ವಾಭಾವಿಕವಾಗಿಯೇ ಹೆಚ್ಚಿನವರು ಜನ್ಮದಾರಭ್ಯ ಕಲಾವಿದರಾಗಿರುತ್ತಾರೆ. ಆದುದರಿಂದ ಆ ಎಲ್ಲಾ ಕಲಾವಿದರ ಹೆಸರುಗಳನ್ನು ಈ ಪುಸ್ತಕದಲ್ಲಿ ಉಲ್ಲೇಖಿಸಿಲ್ಲ. ಪಟ್ಟಿ ಮಾಡಿದರೆ ಅದೇ ಒಂದು ಗ್ರಂಥವಾಗಬಹುದು. ಅವಿಭಜಿತ ದಕ್ಷಿಣ ಕನ್ನಡದಲ್ಲಿ ಇಂತಹ ಕಲಾವಿದರ 65-75 ಕುಡುಬಿ ವಾಡೆಗಳಿವೆ. ಆದಾಗ್ಯೂ ನಮ್ಮ ಕಲಾಶಾಲೆಯ ಉದ್ಘಾಟನೆ ಮತ್ತು ಕೊಂಕಣಿ ಕುಡುಬಿ ಜಾನಪದ ಕಲಾ ಉತ್ಸವದ ಈ ಸಂದರ್ಭ ಸನ್ಮಾನಿಸಲ್ಪಡುವ ಎಡಪದವು ಪರಿಸರದಲ್ಲಿನ ಸಮಕಾಲೀನ ಮೂವರು ಪ್ರಸಿದ್ಧ ಕಲಾವಿದರ ವ್ಯಕ್ತಿ ಪರಿಚಯವನ್ನು ಈ ಪುಸ್ತಕದ ಅನುಬಂಧದಲ್ಲಿ ಕೊಡಲಾಗಿದೆ. ಅವರು ಕೊಂಪದವಿನ ಶ್ರೀ ಸೇಸು ಮೇಸ್ತ್ರಿ (91), ಎಡಪದವು ಕನ್ನೋರಿ ಗುರಿಕಾರ ಮನೆ ಶ್ರೀ ಕೊರ್ಗ್ಯ ಗೌಡ (75) ಮತ್ತು ಮರಕಡ ಮೈಂದೇರಿ ಬಿ.ಎಲ್. ನಿವಾಸ ಶ್ರೀ ಬಾಬು ಗೌಡ (58). ಕಲೆಯ ಎಲ್ಲ ಅಂಗಗಳನ್ನು ಕರಗತ ಮಾಡಿಕೊಂಡು, ತಮ್ಮ ಮುಂದಿನ ಪೀಳಿಗೆಗೆ ಕಲಿಸಿ, ಪರಂಪರೆಯನ್ನು ಉಳಿಸುವಲ್ಲಿ ಪ್ರಾಯ ಮತ್ತು ದೈಹಿಕ ಪ್ರಕೃತಿಯ ಅಸಹಕಾರವಿದ್ದರೂ, ಈಗಲೂ ಸಕ್ರಿಯರಾಗಿರುತ್ತಾ, ಕಲೆಗಾಗಿ ತಮ್ಮನ್ನು ಜೀವನಪೂರ್ತಿ ತೊಡಗಿಸಿಕೊಂಡ ಮಹಾನ್ ಕಲಾಕಾರರಿವರು. ಅವರ ಆಶೀರ್ವಾದ ಯಾಚಿಸುತ್ತಾ ಕಲಾಸೇವೆಯನ್ನು ಸ್ಮರಿಸುವುದು ನಮ್ಮ ಕರ್ತವ್ಯ ಮತ್ತು ಭಾಗ್ಯ.

ಗುಮಟೆ ಕಲೆಯನ್ನು ತಮ್ಮ ಸಂಸ್ಕೃತಿಯಲ್ಲಿ ಅಳವಡಿಸಿಕೊಂಡಿರುವ ವಿವಿಧ ಸಮುದಾಯಗಳ ಮತ್ತು ಸಂದರ್ಭಗಳ ವಿವರಣೆಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಸಂಗ್ರಹ ಕಷ್ಟಸಾಧ್ಯವಾದರೂ ಲಭ್ಯ ಕೆಲವು ಅಮೂಲ್ಯ ಫೋಟೋಗಳನ್ನು ಮುದ್ರಿಸಲಾಗಿದೆ.

ಎಡಪದವಿನಲ್ಲಿ ನಮ್ಮ ಕಲಾವೇದಿಕೆಯ ನೂತನ ಕಟ್ಟಡ ಉದ್ಘಾಟನಾ ಸಂದರ್ಭ ಯಾವುದಾದರೂ ಎರಡು ಪುಸ್ತಕಗಳನ್ನು ಪ್ರಕಟಿಸುವುದು ನಮ್ಮ ಆಕಾಂಕ್ಷೆಯಾಗಿತ್ತು. ಮತ್ತು ಆ ಪುಸ್ತಕಗಳನ್ನು ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲೇ ಬಿಡುಗಡೆಗೊಳಿಸುವ ಉದ್ದೇಶವಿರಿಸಿಕೊಂಡಿದ್ದೆವು. ಆ ಪೈಕಿ ನನ್ನ 'ಗುಮಟೆ' ವಿಷಯವನ್ನೊಳಗೊಂಡ ಅಧ್ಯಯನ ಲೇಖನವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಕಾರಣರಾದ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಶಿವರುದ್ರಪ್ಪ, ಅಧ್ಯಕ್ಷರಾದ ಶ್ರೀ ನಾರಾಯಣ ಖಾರ್ವಿ,

ಸರ್ವ ಪದಾಧಿಕಾರಿಗಳು ಮತ್ತು ಕಛೇರಿ ಸಿಬ್ಬಂದಿ ವರ್ಗಕ್ಕೆ ಕೃತಜ್ಞತಾರ್ಪಣೆ; ನಮ್ಮ ಕಟ್ಟಡದ ಹೆಸರು 'ಗುಮಟ್' ಮತ್ತು ಈ ಪುಸ್ತಕದ ಶಿರೋನಾಮೆಯೂ 'ಗುಮಟ್' ಆದುದು ಯೋಗಾಯೋಗ.

ಕನ್ನಡ ಲಿಪಿಯಲ್ಲಿ, ಕೊಂಕಣಿ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಿದ ಈ ಪುಸ್ತಕದಲ್ಲಿರುವ ಮಾಹಿತಿ, ಗುಮಟೆಗೆ ಸಂಬಂಧಪಟ್ಟಂತೆ ಮುಂದಕ್ಕೆ ಆಳವಾದ ಅಧ್ಯಯನ ಕೈಗೊಳ್ಳುವವರಿಗೆ ಸಂಪನ್ಮೂಲ ಸಾಹಿತ್ಯವಾಗಲಿ ಅಂತ ಹಾರೈಕೆ.

ಯಂ. ಗೋಪಾಲ ಗೌಡ

ಪಟ್ಲಚಿಲ್, ಎಡಪದವು.

'ಗುಮಟೆ'

'ಗುಮಟೆ' ಈ ಶಬ್ದಕ್ಕೆ 'ಸುಂದರ ಕಂಠ' ಎಂಬ ಅರ್ಥವಿದೆ. ಕನ್ನಡದ 'ಗುಮ್ಮಡಿ'; 'ಗುಂಬವಾದ್ಯ' (ಕುಂಭವಾದ್ಯ) 'ಗೊಮ್ಮಟ' ಮತ್ತು ಕೊಂಕಣಿಯ 'ಗುಮಟ್' ಒಂದೇ ಅರ್ಥ ಬರುವ ಶಬ್ದಗಳು. ದೇವಸ್ಥಾನದ ಗರ್ಭಗುಡಿಯ ಶಿಖರ ಅಥವಾ ಪ್ರಾರ್ಥನಾಮಂದಿರಗಳ ಶಿಖರವನ್ನು ಗೋಳಾಕಾರದಲ್ಲಿ ರಚಿಸುವ ಕ್ರಮವಿದೆ. ಮತ್ತು ಇದನ್ನು 'ಗುಮಟ' ಅಂತ ಕರೆಯುತ್ತಾರೆ. 1894 ರಲ್ಲಿ ಬಾಸೆಲ್ ಮಿಷನ್‌ನವರು ಪ್ರಕಟಿಸಿದ ಕಿಟ್ಟೆಲ್ ಅರ್ಥಕೋಶದಲ್ಲಿ (ಪುಟ 555) ಗುಮಟ =ಗೋಲಾಕಾರದ ಶಿಖರ (A copula or Dome) ಗುಂಬಜ್ ಎಂಬ ಅರ್ಥವಿವರಣೆ ಸಿಗುತ್ತದೆ. ಅದೇ ಪುಟದಲ್ಲಿ ಗುಮತಿ - Gumati = ಗುಮತೀ ವಾದ್ಯ, ಕುಮ್ಮ ವಾದ್ಯ ಅಂತ ವಿವರಿಸಲಾಗಿದೆ. ಗುಮಟೆಯನ್ನು ಇದೇ ರೀತಿಯ ಸುಂದರವಾದ ರಚನೆಯಲ್ಲಿ ತಯಾರಿಸಲಾಗುತ್ತದೆ. ಕನ್ನಡ ಸಾಹಿತ್ಯಪರಿಷತ್ ಪ್ರಕಟಿಸಿದ ಕನ್ನಡ ನಿಘಂಟುವಿನ ಮೂರನೇ ಸಂಪುಟದ 2560ನೇ ಪುಟದಲ್ಲಿ - ಗುಮ್ಮಡಿ = ಒಂದು ಬಗೆಯ ಮದ್ದಳೆ, ಕುಂಭವಾದ್ಯ ಎಂಬ ವಿವರಣೆ ಸಿಗುತ್ತದೆ. ಇದೇ ಸಂಪುಟದ 2622 ಪುಟದಲ್ಲಿ ಗೊಮ್ಮಟ = ಸುಂದರ, 'ಘುಂ' =ಜೋರಿನ ಶಬ್ಧ ಅಂತ ಅರ್ಥ ನೀಡಿದ್ದಾರೆ. ಗುಮಟೆ ಬಾರಿಸುವಾಗ ಹೊರಹೊಮ್ಮುವ 'ಘುಂ' ಎಂಬ ಶಬ್ಧದಿಂದಾಗಿ 'ಗುಮಟೆ' ಹೆಸರು ಬಂದಿರುವ ಸಾಧ್ಯತೆ ಇದೆ. ಗುಮಟೆಯು 'ಕಳಶ'ದ (ಬಿಂದಿಗೆಯ) ಆಕಾರದಲ್ಲಿ ಇರುವುದರಿಂದ ಗುಂಬವಾದ್ಯ, ಕುಂಭವಾದ್ಯ, ಎಂಬ ಹೆಸರು ಬಂದಿರುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. 'ಗುಂಬವಾದ್ಯ' ಮತ್ತು 'ಗುಮಟೆ' ಶಬ್ಧಗಳಿಗೆ ಹತ್ತಿರದ ಸಂಬಂಧವಿದೆ.

1995 ರಲ್ಲಿ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಡಾ। ಯು. ಪಿ. ಉಪಾಧ್ಯಾಯರ ಸಂಪಾದಕತ್ವದಲ್ಲಿ ಪ್ರಕಟಿಸಿದ ತುಳು ನಿಘಂಟು ಮೂರನೇ ಸಂಪುಟದ 1113ನೇ ಪುಟದಲ್ಲಿ ಹೀಗೆ ಅರ್ಥ ಕೊಟ್ಟಿದ್ದಾರೆ. - 'ಗುಮಟೆ = ಕುಡುಬಿಯರ ಹೋಳಿ ಕುಣಿತ, ಮರಾಠಿಗರ ಗೊಂದೋಳು ಕುಣಿತ ಪೂಜೆ ಮೊದಲಾದ ಸಂದರ್ಭ ಬಾರಿಸುವ, ಮಣ್ಣಿನ ಪಾತ್ರೆಯ ಬಾಯಿಗೆ ಚರ್ಮ ಮುಚ್ಚಿ ಮಾಡಿದ ಒಂದು ವಾದ್ಯ ವಿಶೇಷ (A kind

of Percusion Instrument or drum made by covering the mouth of earthen pots with animal hide used by kudubi people during Holi festival and by Marathis during Gondolu Retual)'

ಕುಡುಬಿ ಸಮುದಾಯದಲ್ಲಿ ತುಂಬಾ ಅಂದವಾಗಿದ್ದು ಚೂಟಿಯಾದ ಹೆಣ್ಣು ಮಗುವನ್ನು ಆಡಿಸುವಾಗ ತರಲೆ ಮಾಡುವುದಕ್ಕಾಗಿ 'ತರಿಂ ದಾಳ್ ಅಂಬೊಟ್, ಸುಬ್ಬಾ ಬಾಯ್ಲ್ ಗುಮೊಟ್' ಅಂತ ಒಂದು ಶಿಶುಗೀತೆಯನ್ನು ಹಾಡುವುದುಂಟು. ಇಲ್ಲಿ 'ಗುಮಟ್ ' ಅಂದರೆ 'ಸುಂದರ' ಎಂಬುದಾಗಿ ಅನ್ವರ್ಥರೂಪದಲ್ಲಿ ಈ ಶಬ್ದ ಉಪಯೋಗವಾಗಿರುತ್ತದೆ. ಕೊಂಕಣಿಯಲ್ಲಿ 'ಗೊಮ್ಟೆಂ' ಅಂದರೆ 'ಸುಂದರ' ಎಂದೇ ಅರ್ಥ.

'ಗುಮಟೆ' - ಇದೊಂದು ಪುರಾತನ ಸಂಗೀತಸಾಧನ. ಏಳನೇ ಶತಮಾನದ ಎಲ್ಲೋರಾ ಶಿಲಾಲೇಖದಲ್ಲಿ (Sculpture at ellora cave of the 7th Century) ಗುಮಟೆಯ ಚಿತ್ರವನ್ನು ಕೊರೆಯಲಾಗಿದೆ ಎಂದು ತಿಳಿದುಬರುತ್ತದೆ. ಆವೆ ಮಣ್ಣಿನಿಂದ ಪರಿಣತ ಕುಂಬಾರರು ಇದನ್ನು ತಯಾರು ಮಾಡುತ್ತಾರೆ. ಕಳಶ (ಬಿಂದಿಗೆ) ಯಾ, ಚೀನಿಕಾಯಿ ಆಕಾರದಲ್ಲಿ ತಯಾರಿಸಿದ ಈ ಮಡಕೆಯಾಕಾರಕ್ಕೆ 'ಕಳ್ಶಿ' (ಕಳಸೆ) ಅಂತ ಹೆಸರು. ಈ ಸಂಗೀತ ಸಾಧನಕ್ಕೆ 'ಗುಮಟೆ' ಎಂಬ ಹೆಸರು ಸಂಪೂರ್ಣ ಅನ್ವಯವಾಗಬೇಕಾದರೆ 'ಕಳ್ಶಿ' (ಕಳಸೆ) ಯು ಅಗಲವಿರುವ ಬಾಯಿಗೆ ಉಡದ (Monitor lizard = varamus monitor) ಚರ್ಮವನ್ನು ಕತ್ತಾಳೆ (ದಾಡ್ವಾಲೆ) ನಾರಿನ ಹಗ್ಗದಿಂದ ಬಿಗಿದು ಕಟ್ಟಬೇಕು. ಅಷ್ಟರತನಕ ಆ ಮಡಕೆಗೆ 'ಕಳ್ಶಿ' (ಕಳಸೆ) ಅಂತಲೇ ಹೆಸರು. ಆದರೆ ಈ ಕಳಸೆ ಅಕ್ಕಿಯ ಅಳತೆಯ ಮಾಪನ ಅಲ್ಲ. ಸುಮಾರು ಒಂದೂವರೆ ಅಡಿ ಉದ್ದ ಮತ್ತು ಒಂದು ಅಡಿ ಸುತ್ತಳತೆಯ ಈ ಕಳಸೆಗೆ ಎರಡು ಬಾಯಿಗಳಿರುತ್ತವೆ. ಕಳಸೆಯನ್ನು ಅಡ್ಡ ಇಟ್ಟರೆ ಬಲಬದಿಯ ಬಾಯಿ ಒಂದು ಗೇಣಿನಷ್ಟು ಅಗಲ ಇರುತ್ತದೆ. ಎಡಬದಿಯ ಬಾಯಿ ಎರಡು ಇಂಚಿನಷ್ಟು ಹೊರಚಾಚಿದಂತಿದ್ದು ಎಡಗೈಯ ಅಂಗೈಯೊಳಗೆ ಹಿಡಿಯಬಹುದಾದಷ್ಟು ಚಿಕ್ಕದಿರುತ್ತದೆ. ಅಗಲವಿರುವ ಬಾಯಿಯನ್ನು ಗುಮಟೆಯ 'ಕಂಠ' (ಕುಡುಬಿ ಭಾಷೆಯಲ್ಲಿ 'ಕಟ್') ಅನ್ನುತ್ತಾರೆ. ಮಧ್ಯದ ಊದಿದಂತಿರುವ ಭಾಗವನ್ನು ಗುಮಟೆಯ 'ಹೊಟ್ಟೆ' (ಪೋಟ್) ಮತ್ತು ಎಡಬದಿಯ, ಅಂಗೈಯೊಳಗೆ ಹಿಡಿಯುವ ಬಾಯಿಯನ್ನು 'ಧುಮ್ಕೊ' ಅನ್ನುತ್ತಾರೆ. ಕಂಠಕ್ಕೆ (ಅಗಲಬಾಯಿ) ಉಡದ ಚರ್ಮವನ್ನು ಬಿಗಿದು ಕಟ್ಟಿದರೆ 'ಗುಮಟೆ' ತಯಾರು. ಚರ್ಮದ ಮೇಲೆ ಬಲ ಅಂಗೈ ಬೆರಳುಗಳಿಂದ ಬಾರಿಸಿದಾಗ ವಿಶಿಷ್ಟ ರೀತಿಯ ಶಬ್ದ ಹೊರಹೊಮ್ಮುತ್ತದೆ. ಹೀಗೆ ವಾದನ ಮಾಡುವಾಗ ಎಡ ಅಂಗೈಯಿಂದ ಗುಮಟೆಯ ಕಿರುಬಾಯಿಯನ್ನು (ಧುಮ್ಕೊ) ಮುಚ್ಚಿ, ತೆರೆದು ಗಾಳಿಯ ಒತ್ತಡಕ್ಕೆ, ಶಬ್ದದ ತರಂಗಕ್ಕೆ ಅವಕಾಶ ಒದಗಿಸಿದಾಗ ಗುಮಟೆಯ ನಿನಾದ ಒಂದು ನಿಯಂತ್ರಿತ ರೀತಿಯಲ್ಲಿ ಹೊರಹೊಮ್ಮುತ್ತದೆ.

ಗುಮಟೆಯ ಕಳಸೆ ತಯಾರಿಸುವ ಕ್ರಮ : ಸಾಮಾನ್ಯವಾಗಿ ಕುಶಲ ಕುಂಬಾರರು ಆವೆ

ಮಣ್ಣಿನಿಂದ ಗುಮಟೆಯ ಕಳಸೆ ತಯಾರು ಮಾಡುತ್ತಾರೆ. ಗುಮಟೆಯ ಕಳಸೆಯನ್ನು ತಯಾರು ಮಾಡುವ ಕುಂಬಾರರಿಗೆ ಕಳಸೆಯ ನಿಶ್ಚಿತ - 'ಆಯ' ತಿಳಿದಿರಬೇಕಾದುದು ಅವಶ್ಯ. ಹಾಗೆಯೇ, ಕಳಸೆ ತಯಾರು ಮಾಡುವಾಗ ಪಾಲಿಸಬೇಕಾದ ನಿಯಮಗಳೂ ತಿಳಿದಿರಬೇಕಾಗುತ್ತದೆ. ಚರ್ಮ ಮುಚ್ಚುವ ಬಾಯಿ ಎಷ್ಟು ದೊಡ್ಡದಿರುತ್ತದೋ, ಅಷ್ಟೇ ಅಳತೆಯಲ್ಲಿ ಕಳಸೆಯ ಉದ್ದ ಮತ್ತು 'ಧುಮ್ಕೊ' ಕೂಡಾ ಅಷ್ಟೇ ಚಿಕ್ಕ ಅಳತೆಯಲ್ಲಿರಬೇಕಾಗುತ್ತದೆ. ಮಡಕೆ ತಯಾರಿಗಿಂತ ಹೆಚ್ಚಿನ ಕೌಶಲ್ಯ ಕಳಸೆ ತಯಾರಿಸುವಾಗ ಇರಬೇಕು. ಹೇಗಾದರೂ ತಯಾರಿಸಿದ ಕಳಸೆ ಅಂದವಾಗಿರಲಿಕ್ಕಿಲ್ಲ ಮಾತ್ರವಲ್ಲ ಅಂತಹ ಕಳಸೆಗೆ ಗುಮಟೆಗೆ ಹೊರಹೊಮ್ಮಬೇಕಾದ ವಿಶಿಷ್ಟ ಶಬ್ಧವೂ ಬರಲಿಕ್ಕಿಲ್ಲ.

ಪರಿಣಿತ ಕುಂಬಾರ ಒಣ ಆವೆ ಮಣ್ಣು ಸಂಗ್ರಹಿಸಿ, ಅದನ್ನು ಚೆನ್ನಾಗಿ ಕುಟ್ಟಿ ಹುಡಿ ಮಾಡುತ್ತಾನೆ. ಹೀಗೆ ಹುಡಿ ಮಾಡಿದ ಮಣ್ಣಿನಲ್ಲಿ ಕಲ್ಲು ಕಸ ಇರುವ ಸಾಧ್ಯತೆ ಇದೆ. ಅದಕ್ಕಾಗಿ ಒಂದು ಪಾತ್ರೆಯ ಬಾಯಿಗೆ ತೆಳುವಾದ ಬಟ್ಟೆ ಕಟ್ಟಿ ಅದರಲ್ಲಿ ಈ ಹುಡಿ ಮಣ್ಣನ್ನು ಸೋಸಲಾಗುವುದು. ಹೀಗೆ ಸೋಸುವಾಗ ಕಲ್ಲು ಕಸ ಬಟ್ಟೆಯ ಮೇಲ್ಪದರದಲ್ಲಿ ಉಳಿಯುತ್ತದೆ ಮತ್ತು ಶುದ್ಧ ಆವೆ ಮಣ್ಣು ಮಾತ್ರ ಪಾತ್ರೆಯ ತಳದಲ್ಲಿ ಸಂಗ್ರಹವಾಗುತ್ತದೆ. ಕಳಸೆಗೆ ಬೇಕಾದಷ್ಟು ಮಣ್ಣು ಗಾಳಿಸಿ, ಅದನ್ನು ಕಲಸಿ ಕೆಲವು ದಿವಸ ಕೊಳೆಯಲು ಬಿಡುತ್ತಾರೆ. ಮಣ್ಣು ಕೊಳೆತು ಹುಳಿಯಾಗಿ ಒಂದು ಹದಕ್ಕೆ ಬಂದ ಮೇಲೆ ಕುಂಬಾರ, ಮಣ್ಣು ಮುದ್ದೆಗೆ ಬರುವಂತೆ ಕಾಲಿನಿಂದ ಕುಟ್ಟಿ ಕಲಸುತ್ತಾನೆ. ಹೀಗೆ ಕುಟ್ಟಿ ಕಲಸಿದ ಮಣ್ಣನ್ನು ಮುದ್ದೆ ಮಾಡಿ ತನ್ನ ತಿಗರಿ (Potter's wheel) ಯಲ್ಲಿ ಹಾಕಿ ಗುಮಟೆಯ ಕಳಸೆಯ ಸುಂದರ ರೂಪಕೊಟ್ಟು ತಯಾರು ಮಾಡುತ್ತಾನೆ. ಕಳಸೆ ದಪ್ಪವಾದರೆ ಗುಮಟೆ ಬಾರಿಸುವಾಗ ಸುಶ್ರಾವ್ಯ ಶಬ್ಧ ಹೊರಹೊಮ್ಮುವುದಿಲ್ಲ. ಅದಕ್ಕಾಗಿ ಕುಂಬಾರ, ಕಳಸೆಯು ಸಾಧ್ಯವಾದಷ್ಟು ತೆಳುವಾಗುವಂತೆ ನೋಡಿಕೊಳ್ಳುತ್ತಾನೆ. ಕಳಸೆಯ ಆಕಾರ ಎತ್ತರ ತಗ್ಗು ಆದರೆ ಕುಂಬಾರನು ಚಿಕ್ಕ 'ಪೊಲ್ಮಣೆ' (ಮರದ ಚಿಕ್ಕ ತಟ್ಟುವ ಸಾಧನ) ಯಿಂದ ತಟ್ಟಿ ಸರಿಯಾದ ಆಕಾರಕ್ಕೆ ತರುತ್ತಾನೆ.

ಕುಡುಬಿಯರು ಪೀಪಾಯಿಯ ಹುಡಿ (China Clay), ಬಳೆಚೂರಿನ ಹುಡಿ, ಬೆಣಚುಕಲ್ಲಿನ ಹುಡಿ, ಅಥವಾ ಹೊಯಿಗೆ ಕುಟ್ಟಿ ಮಾಡಿದ ಹುಡಿಗಳನ್ನು ಸೋಸಿ ಕುಂಬಾರರಿಗೆ ಕೊಡುತ್ತಾರೆ. ಕುಂಬಾರನು ಆ ಹುಡಿಯನ್ನು ಬೇಕಾದಷ್ಟು ಅಳತೆಯಲ್ಲಿ ಮೊದಲೇ ಕಲಸಿಟ್ಟ ಆವೆ ಮಣ್ಣಿನೊಂದಿಗೆ ಬೆರಸಿ ಕಳಸೆ ತಯಾರು ಮಾಡುತ್ತಾನೆ. ಹೀಗೆ ತಯಾರು ಮಾಡಿದ ಕಳಸೆ ಸಾಮಾನ್ಯ ರೀತಿಯಲ್ಲಿ ತಯಾರಿಸಿದ ಕಳಸೆಗಿಂತ ಹೆಚ್ಚು ಬಾಳ್ವಿಕೆ ಬರುತ್ತದೆ ಮಾತ್ರವಲ್ಲ ಈ ರೀತಿ ವಿಶೇಷವಾಗಿ ತಯಾರಿಸಿದ ಕಳಸೆಯ ಗುಮಟೆಯು ತೀಕ್ಷ್ಣವಾದ, ಸುಮಧುರವಾದ ಶಬ್ಧವನ್ನು ಹೊರಹೊಮ್ಮಿಸುತ್ತದೆ.

ಕಳಸೆಯ ಚರ್ಮ ಮುಚ್ಚುವ ಬಾಯಿಯ ಕಂಠ ಸ್ವಲ್ಪ ದೊರಗು ಇರಬೇಕಾಗುತ್ತದೆ.

ದೊರಗು ಇರುವ ಕಂಠಕ್ಕೆ ಚರ್ಮವನ್ನು ಮುಚ್ಚುವಾಗ ಹಗ್ಗವನ್ನು ಬಲವಾಗಿ ಬಿಗಿಯಲು ಅನುಕೂಲವಾಗುತ್ತದೆ. ಹಾಗೇ ಆ ಬಾಯಿಯು ಕಂಠದ ಅರು ಬಾಗಿದಂತೆ ಅರ್ಧ ಗೋಳಾಕಾರದಲ್ಲಿ (Half Round) ಇರಬೇಕು. ಆ ಅರು ನೆಟ್ಟಗೆ ಚೂಪಾಗಿ ಇದ್ದರೆ ಚರ್ಮ ಬಿಗಿಯುವಾಗ ಹರಿಯುವ ಅವಕಾಶವಿರುತ್ತದೆ. ಮಾತ್ರವಲ್ಲ, ಗೋಳಾಕಾರದ ಕಂಠವಿರುವ ಗುಮಟೆ ಬಾರಿಸುವಾಗ ಅಂಗೈಗೆ ಪೆಟ್ಟಾಗುವುದಿಲ್ಲ. ಕಳಸೆಯು ಸುಂದರವಾಗಿ ಕಾಣಲು ಕಳಸೆಯ ಹೊರಮೈಯಲ್ಲಿ ವಿವಿಧ ರೀತಿಯಲ್ಲಿ ಚಿತ್ತಾರಕೆಯ ಚಿತ್ರಗಳನ್ನು (Carving Designs) ಕೊರೆಯುವುದೂ ಉಂಟು. ಬಹಳ ದುಃಖಕರ ಸಂಗತಿಯೆಂದರೆ, ಮೇಲೆ ವಿವರಿಸಿದ ರೀತಿಯಲ್ಲಿ ಕಳಸೆ ತಯಾರು ಮಾಡುವ ಕುಂಬಾರರು ಈಗ ಯಾರೂ ಇಲ್ಲವೆನ್ನಬಹುದು. ಇಂತಹ ಸುಂದರವಾದ ಕಳಸೆಗಳನ್ನು ಅಲ್ಲಿ ಇಲ್ಲಿ ಜೋಪಾನವಾಗಿ ಇರಿಸಿರುವುದನ್ನು ಅಪರೂಪಕ್ಕೆ ಕಾಣಬಹುದು.

ಹೀಗೆ ಕುಂಬಾರರು ತಯಾರು ಮಾಡಿದ ಕಳಸೆ ಹಸಿಯಾಗಿರುತ್ತದೆ. ಕಳಸೆ ಬಾಳ್ವಿಕೆ ಬರಬೇಕಾದಲ್ಲಿ ಅದನ್ನು 'ಆವೆ'ಯಲ್ಲಿ (ಕುಂಭಾರರ ಒಲೆ = ಕುಲುಮೆ) ಹಾಕಿ ಬೇಯಿಸಬೇಕು. ಬೇಯಿಸುವಾಗ ಇತರ ಮಡಕೆಗಳ ಒಟ್ಟಿಗೆ ಕಳಸೆಯನ್ನು ಜಾಗರೂಕತೆಯಿಂದ ಪೇರಿಸಿ ಇಡಬೇಕು. ಸ್ವಲ್ಪ ವ್ಯತ್ಯಯವಾದರೂ ಒಟ್ಟಿದ ಕಳಸೆ ಜಾರಿ ಬಿದ್ದು ಒಡೆದುಹೋಗಬಹುದು. ಬೇಯಿಸುವಾಗ ಉರಿಸುವ ಬೆಂಕಿಗೂ ಒಂದು ಅಳತೆ, ಬೇಯಿಸುವ ಸಮಯಕ್ಕೂ ಲೆಕ್ಕವಿರಬೇಕು. ಬೆಂಕಿ ಹೆಚ್ಚಾದರೂ ಕಡಿಮೆಯಾದರೂ ಕಳಸೆಯ ಘಟ್ಟಿತನಕ್ಕೆ ಒಳ್ಳೆಯದಲ್ಲ. ಅಂತಹ ಕಳಸೆ ಬಿರುಕು ಬಿಡುವ, ಒಡೆಯುವ ಸಾಧ್ಯತೆಗಳಿರುತ್ತದೆ.

ಗುಮಟೆಯ ಕಳಸೆ ತಯಾರು ಮಾಡುವ ಕೆಲಸ ಸಾಮಾನ್ಯ ಮಡಕೆ ತಯಾರು ಮಾಡುವುದಕ್ಕಿಂತ ಕಷ್ಟಕರವಾದುದು. ಅದಕ್ಕೆ ಶ್ರಮ ಸಮಯ ಜಾಸ್ತಿ ತಗಲುತ್ತದೆ. ಕಳಸೆ ತಯಾರು ಮಾಡುವ ಕೌಶಲ್ಯ, ನಾಜೂಕುತನ ಮತ್ತು ತಾಳ್ಮೆಗಳಿರಬೇಕು. ಪ್ರಕೃತ ಒಂದು ಕಳಸೆಗೆ ರೂ. 75/- ರಿಂದ ರೂ. 150/- ಕ್ರಯಾವಾಗುವುದಾದರೆ ಅಷ್ಟೇ ಸಮಯ ಮತ್ತು ಮೆಹನತ್ತಿನಿಂದ ಅದಕ್ಕಿಂತಲೂ ಎರಡು ಪಟ್ಟು ಸಂಭಾವನೆ ಗಳಿಸಲು ಸಾಧ್ಯವಾಗುವುದರಿಂದ ಕುಂಬಾರರು ಗುಮಟೆಯ ಕಳಸೆ ತಯಾರು ಮಾಡಲು ಉತ್ಸಾಹ ತೋರುವುದಿಲ್ಲ. ಆದುದರಿಂದ ಈ ಕುಂಬಾರಿಕೆಯ ಕಲೆ ಮರೆತು ಹೋಗಿ ಅಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕಳಸೆ ಖರೀದಿಸಿ ತಂದ ತಕ್ಷಣ ಅದಕ್ಕೆ ಚರ್ಮ ಹೊದೆಸಿ ವಾದನಕ್ಕೆ ಉಪಯೋಗಿಸಲು ಬರುವುದಿಲ್ಲ. ಕಳಸೆ ತಂದು ಸ್ವಲ್ಪ ಬೈಹುಲ್ಲಿನ ಬೆಂಕಿಯಿಂದ ಕರಟಿಸಬೇಕು. ಅದಕ್ಕೆ ಮಚ್ಚೆಗಳಿದ್ದರೆ ಕರಟಿಸಿದಾಗ ಕಪ್ಪಾಗಿ ಒಂದೇ ಬಣ್ಣ ಬರುತ್ತದೆ. ಆವೆಯಲ್ಲಿ ಅರ್ಧರ್ಧ ಬೆಂದ ಕಳಸೆ ಒಡೆಯುವ ಸಂದರ್ಭಗಳಿರುವುದರಿಂದ ಹೊಂಗಾರಕ ಮರದ ಎಲೆ ಅಥವಾ ಮಾವಿನ ಮರದ ಎಲೆಗಳಿಂದ ತಿಕ್ಕಿ ಅದರ ರಸ ತಾಗುವಂತೆ ಮಾಡಿದರೆ ಕಳಸೆಯ ಬಾಳಿಕೆಗೆ

ಒಳ್ಳೆಯದು. ಕೆಲವು ಬಾರಿ ಒಗರು ರಸ ಬರುವ ಇತರ ಮರದ ತೊಗಟೆಗಳನ್ನು ತಿಕ್ಕಿ ರಸ ಸವರುವುದೂ ಇದೆ. ಹೀಗೆ ಮಾಡುವ ಕ್ರಮಕ್ಕೆ ಕಳಸೆ 'ಬೊಳ್ಸುಚೆಂ (ಒಳ್ಸುಚೆಂ) ಎಂದು ಕೊಂಕಣಿಯಲ್ಲಿ ಕೊಳ್ಳುತ್ತಾರೆ. ಈ ರೀತಿ ಒಗರು ಲೇಪನ ಮಾಡಿದ ಕಳಸೆಯ ಗುಮಟೆಗೆ ವಿಶಿಷ್ಟ ತರದ ಶಬ್ದ ಬರುವುದು ಮಾತ್ರವಲ್ಲ ನೋಡಲೂ ಅಂದ ಮತ್ತು ಬಾಳಿಕೆಯೂ ಜಾಸ್ತಿ.

ಗುಮಟೆಯ ಚರ್ಮ : ಕಳಸೆಗೆ 'ಉಡದ' ಚರ್ಮವನ್ನು ಹೊದೆಸುವುದು ಅನಾದಿ ಕಾಲದಿಂದ ಬಂದಿರುವ ಸಂಪ್ರದಾಯವೆನ್ನಬಹುದು. 'ಉಡ' ಅಂದರೇನು? ಉಡ, ಹಾವುರಾಣಿ (ಅರಣೆ) ಜಾತಿಯ, ಗಾತ್ರದಲ್ಲಿ ಮುಂಗುಸಿಯಷ್ಟು ದೊಡ್ಡದಾದ, ಕಾಡಿನಲ್ಲಿ ಬಿಲಗಳಲ್ಲಿ ಮರದ ಪೊಟರೆಗಳಲ್ಲಿ, ಕಲ್ಲುಗಳ ಸಂದುಗಳಲ್ಲಿ ಇರುವೆ ಮುಂತಾದ ಕ್ರಿಮಿಕೀಟಗಳನ್ನು ತಿಂದು ಬದುಕುವ, ಉರಗ ವರ್ಗಕ್ಕೆ ಸೇರಿದ ಜೀವಿ. ಇಂಗ್ಲಿಷಿನಲ್ಲಿ ಇದಕ್ಕೆ 'Monitor Lezard '(Varamus Monitor) ಅಂತ ಹೆಸರು. (ಕೊಂಕಣಿಯಲ್ಲಿ 'ಗಾರ್'). ಉಡದ ಪೈಕಿ ಮುಖ್ಯವಾಗಿ ಎರಡು ಪ್ರಭೇದಗಳಿವೆ. ಒಂದು 'ಕರಿಉಡ' (ಸಾವ್ನೆಂ ಗಾರ್) ಇನ್ನೊಂದು 'ಶ್ವೇತ ಉಡ' (ತುಪೆಂ ಗಾರ್).

ಗುಮಟೆಗೆ ಉಡದ ಚರ್ಮವನ್ನೇ ಯಾಕೆ ಉಪಯೋಗಿಸುತ್ತಾರೆ? ಯಾಕೆಂದರೆ, ಉಡದ ಚರ್ಮಕ್ಕೆ ಹೊರಮೈಯಲ್ಲಿ ಚಿಕ್ಕ ಚಿಕ್ಕ ಚಿಪ್ಪುಗಳ ದೊರಗು ರಚನೆಯಿದೆ. ಈ ಸಹಜ ರಚನೆಯಿಂದಲೇ ಅದು ಕಲ್ಲುಗಳ ಸಂದುಗಳಲ್ಲಿ, ಬಿಲಗಳಲ್ಲಿ ಹೊಕ್ಕು ಜೀವಿಸಲು ಸಾಮರ್ಥ್ಯವನ್ನು ಹೊಂದಿದೆ. ಇತರ ಪ್ರಾಣಿಗಳ ಚರ್ಮಕ್ಕಿಂತಲೂ ಉಡದ ಚರ್ಮ ಬಲಿಷ್ಠವಾಗಿದೆ. ಹಿಂದಿನಕಾಲದಲ್ಲಿ ಬುಡಕಟ್ಟುಜನರು ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದಾಗ ತಮ್ಮ ಗುಮಟೆಯಂತಹ ಮಣ್ಣಿನಿಂದ ಮಾಡಿದ ಸಂಗೀತೋಪಕರಣಕ್ಕೆ ಸುಲಭಲಭ್ಯವಾದ ಮತ್ತು ಉಡದ ಚರ್ಮದ ಪೂರ್ವಾಪರಗಳ ತಿಳುವಳಿಕೆಯಿಂದಾಗಿ ಈ ಚರ್ಮವನ್ನು ಸಹಜವಾಗಿ ಬಳಸಿದರು. ಇತರ ಹೆಚ್ಚಿನ ಸಂಗೀತ ವಾದ್ಯಗಳಿಗೆ ಚರ್ಮವನ್ನು ಹೊದೆಸುವ ಸಂದರ್ಭ 'ಬಿಗಿ' ಹಾಕಿ ಕಟ್ಟುವ ಕ್ರಮವಿದೆ. ಗುಮಟೆ ಮಣ್ಣಿನಿಂದ ತಯಾರಿಸಲಾಗಿ ಒಡೆದು ಹೋಗುವ ಅವಕಾಶ ಹೆಚ್ಚು. ಉಡದ ಚರ್ಮವನ್ನು ಹೊದೆಸಿ, ಚೆನ್ನಾಗಿ ಹಗ್ಗದಿಂದ ಬಿಗಿದು ಕಟ್ಟಿದರೆ, ಚರ್ಮವು ಸುಲಭದಲ್ಲಿ ಸಡಿಲಗೊಳ್ಳುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಗುಮಟೆಗೆ ಉಡದ ಚರ್ಮ ಬಳಸಲಾಯಿತು ಮತ್ತು ಅದೇ ಸಂಪ್ರದಾಯವಾಗಿ ಮುಂದುವರೆಯಿತು ಅನ್ನಬಹುದು. ಗುಮಟೆಯನ್ನು 'ಗುಮಟೆ' ಅನ್ನಬೇಕಾದರೆ ಅದಕ್ಕೆ ಉಡದ ಚರ್ಮ ಹೊದೆಸಿರಲೇಬೇಕು. ಇತರ ಯಾವುದೇ ಚರ್ಮವನ್ನು ಬಳಸಿದರೆ ಗುಮಟೆಯ 'ಭರಮ್ಮ'ಗೆ ಅಗೌರವ ಮಾಡಿದಂತೆ. ಗುಮಟೆ ಹೊರತುಪಡಿಸಿದರೆ ಸಂಗೀತೋಪಕರಣಗಳ ಪೈಕಿ ಟಮ್ಕಿಗೆ (ಖಂಜೀರಾ) ಉಡದ ಚರ್ಮವು ಉಪಯೋಗವಾಗುತ್ತದೆ.

ಉಡದ ಕಾಲು ಹಾಗೂ ಉಗುರುಗಳು ಬಲಿಷ್ಠವಾಗಿವೆ. ನಾಲ್ಕೂ ಕಾಲುಗಳಿಗೆ

ಕೊಕ್ಕೆಯಂತಹ ರಚನೆಯ ಉಗುರುಗಳಿವೆ. ಉಡವು ಈ ಉಗುರುಗಳ ಆಧಾರದಿಂದ ನೆಲ, ಕಲ್ಲು ಯಾ ಮರಗಳನ್ನು ಒಂದು ಬಾರಿ ಹಿಡಿದುಕೊಂಡರೆ ಉದ್ದಕ್ಕೆ ಪೂರ್ತಿ ಬಲದಿಂದ ಎಳೆದರೂ ಅದು ಹಿಡಿತವನ್ನು ಸಡಿಲಗೊಳಿಸುವುದಿಲ್ಲ. ಇದಕ್ಕೆ ಪೂರಕವಾಗಿ ಉಡದ ಬಗ್ಗೆ ಚರಿತ್ರೆಯಲ್ಲಿ ನಮಗೆ ಒಂದು ವಿಚಾರ ಅಧ್ಯಯನಕ್ಕೆ ಸಿಗುತ್ತದೆ. ಮರಾಠಾ ರಾಜ ಛತ್ರಪತಿ ಶಿವಾಜಿ, ವೈರಿಗಳ ಕೋಟೆಗಳ ಮೇಲೆ ಹತ್ತಲು ಈ ಉಡದ ಸೊಂಟಕ್ಕೆ ಹಗ್ಗ ಕಟ್ಟಿ, ಕೋಟೆಯ ಮೇಲ್ಗಡೆ ಬೀಳುವಂತೆ ಎಸೆಯುತ್ತಿದ್ದನು. ಉಡವು ಕೋಟೆಯ ಮೇಲೆ ಸಿಕ್ಕಿದ ವಸ್ತುವನ್ನು ಬಲವಾಗಿ ಹಿಡಿದುಕೊಳ್ಳುತ್ತಿತ್ತು. ಉಡದ ಸೊಂಟಕ್ಕೆ ಬಿಗಿದು ಇಳಿಸಲಾದ ಹಗ್ಗವನ್ನು ನೇತು ಹಿಡಿದುಕೊಂಡು ಸೈನಿಕರು ಕೋಟೆಯನ್ನು ಹತ್ತುತ್ತಿದ್ದರು ಅಂತ ತಿಳಿದು ಬರುತ್ತದೆ. ಉಡದ ಬಾಲ ಸುಮಾರು ಮೂರು ಅಡಿ ಉದ್ದವಿರುತ್ತದೆ. ಉಡ ಹಿಡಿಯಲು ಸಿಕ್ಕ ಕೂಡಲೇ ಬಾಲವನ್ನು ಹಿಡಿದು ಎಷ್ಟು ಬಲದಿಂದ ಎಳೆದರೂ ಎಳೆಯಲಾಗುವುದಿಲ್ಲ. ಬೇರೆ ಎಲ್ಲಿ ಹಿಡಿದರೂ ಕಚ್ಚುತ್ತದೆ ಆದರೂ ಕೆಲವು ಜಾತಿಯ ಉಡಗಳು ಕಚ್ಚುವುದಿಲ್ಲ. ಚತುರ ಶಿಕಾರಿಕಾರ ಉಡದ ಬಾಲವನ್ನು ಹಿಡಿದು, ಒಂದೇ ಬಾರಿಗೆ ಮುಂದಕ್ಕೆ ದೂಡಿ ಉಡವನ್ನು ಎತ್ತಿ ಬಾಲದಲ್ಲಿ ನೇತಾಡಿಸುತ್ತಾನೆ. ಹೀಗೆ ಮಾಡಿ ಎತ್ತಿದಾಗ ಉಡಕ್ಕೆ ಆಧಾರ ತಪ್ಪಿ ಬಲವಿರುವುದಿಲ್ಲ. ಹೆಚ್ಚಾಗಿ ಉಡದ ತಲೆಯನ್ನು ಜಜ್ಜಿ ಸಾಯಿಸಲಾಗುತ್ತದೆ.

ಉಡದ ಬಗ್ಗೆ ಜನಪದರಿಗೆ ಸದ್ಭಾವನೆ ಇಲ್ಲ. ಉಡ ನೋಡಲು ಸಿಕ್ಕಿದರೆ ಅಪಶಕುನ, ಯಾವುದಾದರೂ ಸತ್ಕಾರ್ಯಗಳಿಗೆ ಹೊರಟಾಗ ಎದುರು ಉಡ ಸಿಕ್ಕಿದರೆ ಹೋದ ಕಾರ್ಯ ಕೈಗೂಡುವುದಿಲ್ಲ, ಉಡ ಮನೆಯೊಳಗೆ ಬರಬಾರದು, ಬಂದರೆ ಮಾಟ ಮಾಡಿದಂತೆ, ಉಡ ಹೊಕ್ಕ ಮನೆ ಉದ್ಧಾರವಾಗುವುದಿಲ್ಲ, ಒಂದು ವೇಳೆ ಮನೆಗೆ ಉಡ ಹೊಕ್ಕಲ್ಲಿ ಕೆಲವು ದಿವಸ ಆ ಮನೆಯನ್ನು ತ್ಯಜಿಸಬೇಕು, ಆ ನಂತರ ಪುರೋಹಿತರಿಂದ ಮನೆ ಶುದ್ಧೀಕರಿಸಿ ಮನೆಯಲ್ಲಿ ವಾಸಮಾಡಬಹುದು ಎಂಬ ನಂಬಿಕೆ ಬಲವಾಗಿ ಬೇರೂರಿದೆ. ಕಾಡುಹಂದಿಯ ಬೇಟೆಗೆ ಹೋದಾಗ ಸ್ವಾಭಾವಿಕವಾಗಿ ಕಾಡಿನಲ್ಲಿ ಉಡ ದೃಷ್ಟಿಗೆ ಬಿದ್ದರೂ ಅಪಶಕುನ, ಬೇಟೆಯಾಗುವುದಿಲ್ಲ ಅಂತ ನಂಬುತ್ತಾರೆ. ಮಾತ್ರವಲ್ಲ, ಆ ಸಂದರ್ಭ ಉಡವನ್ನು ಬೇಟೆಯಾಡುವುದಿಲ್ಲ.

ಉಡ ಕಾಡಿನಲ್ಲಿ ಮಣ್ಣಿನ ಬಿಲಗಳಲ್ಲಿ, ಮರದ ಪೊಟರೆಗಳಲ್ಲಿ ಯಾ ಕಲ್ಲುಗಳ ಸಂದುಗಳಲ್ಲಿ ವಾಸ ಮಾಡುತ್ತದೆ. ಉಡವನ್ನು ಹಿಡಿಯಲು ಬಹಳ ಚಾಕಚಕ್ಯತೆ ಇರಬೇಕು. ಉಡವು ಕಾಣಲು ಸಿಕ್ಕ ತಕ್ಷಣ ಹಿಡಿಯಲು ಬೆನ್ನಟ್ಟಿದರೆ, ಹಿಂಬಾಲಿಸಲು ಆಗದಷ್ಟು ವೇಗದಲ್ಲಿ ಓಡುತ್ತದೆ. ಓಡುವಾಗ ಮರ ಸಿಕ್ಕಲ್ಲಿ, ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಮರಹತ್ತಿ ತುದಿ ತಲುಪುತ್ತದೆ. ಒಂದೇ ಮರ ಇರುವುದಾದಲ್ಲಿ ಮರದ ಸುತ್ತ ಬಲೆ ಹಾಕಿ, ಮರವೇರಿ, ಉಡವನ್ನು ಕೆಳಗೆ ಬೀಳಿಸಿ, ಓಡಿಸಿ ಬಲೆಗೆ ಸಿಕ್ಕಿಹಾಕಿಕೊಳ್ಳುವಂತೆ ಮಾಡಿ ಹಿಡಿಯಬಹುದು. ಹೀಗೆ ಉಡವನ್ನು ಕೆಳಗೆ ಬೀಳಿಸಿದಾಗ ಕೆಲವು ಬಾರಿ ಪರಿಣತ ಬೇಟೆ ನಾಯಿಗಳಿದ್ದರೆ ಉಡವನ್ನು

ಹಿಡಿಯುವುದೂ ಉಂಟು. ಬಂದೂಕಿನಿಂದ ಈಡು ಮಾಡಿ ಹೊಡೆಯಲೂ ಸಾಧ್ಯವಿದೆ. ಆದರೆ ಹೆಚ್ಚಾಗಿ, ಹೀಗೆ ನಾಯಿ ಹಿಡಿದ ಅಥವಾ ಬಂದೂಕಿನಿಂದ ಹೊಡೆದ ಉಡದ ಚರ್ಮಕ್ಕೆ ತೂತುಗಳಾಗುವುದರಿಂದ ಅಂತಹ ಚರ್ಮವನ್ನು ಗುಮಟೆಗೆ ಬಳಸಲು ಸಾಧ್ಯವಾಗುವುದಿಲ್ಲ. ತೂತು ಇರುವ ಚರ್ಮವನ್ನು ಗುಮಟೆಗೆ ಕಟ್ಟಿ ಬಾರಿಸುವಾಗ ಗಾಳಿಯು ಹೊರಗೆ ಹೋಗಿ, ಗಾಳಿಯ ಒತ್ತಡದಿಂದ ಉಂಟಾಗುವ ಶಬ್ದವು ಕಳಸೆಯೊಳಗೆ ತಿರುವುದಿಲ್ಲ.

ಉಡವನ್ನು ಬೆನ್ನತ್ತಿದಾಗ ಹತ್ತಿರ ಹತ್ತಿರ ಮರಗಳಿದ್ದರೆ ಮರದಿಂದ ಮರಕ್ಕೆ ಅಥವಾ ಮನುಷ್ಯರು ಏರಲು ಅಸಾಧ್ಯವಾದ ಗೆಲ್ಲಿನಿಂದ ಗೆಲ್ಲಿಗೆ ಹೋಗುತ್ತದೆ. ಉಡದ ಬಣ್ಣವೂ ಮರದ ಅಥವಾ ಮಣ್ಣಿನದ್ದಾಗಿರುವುದರಿಂದ ಫಕ್ಕನೆ ಹುಡುಕುವುದೂ ಕಷ್ಟ. ಮರದ ಗೆಲ್ಲು ಅಲುಗಾಡಿದಲಾಗಷ್ಟೇ ಅದರ ಇರುವಿಕೆ ತಿಳಿಯುತ್ತದೆ. ಓಡಿಸಿದಾಗ ಮಣ್ಣಿನ ಮೊಟೆಯೊಳ ಹೊಕ್ಕರೆ, ಸುತ್ತಲೂ ಬಲೆಹಾಕಿ ಬಿಲವನ್ನು ಅಗೆದು ಬಲೆಗೆ ಸಿಕ್ಕಿಸಿ ಹಿಡಿಯಬಹುದು. ಆದರೆ ಕಲ್ಲು ಯಾ ಪಾದೆಕಲ್ಲುಗಳ ಸಂದುಗಳಲ್ಲಿ ಹೊಕ್ಕರೆ ಹಿಡಿಯುವುದು ಕಷ್ಟ. ಇಂತಹ ಸಂದರ್ಭಗಳಲ್ಲಿ ಮೊಟೆಯೊಳಗೆ ಹೊಗೆ ಹಾಕುವುದೂ ಇದೆ. ಹೊಗೆ ಹಾಕಿದಾಗ ಉಡ ಸ್ಮೃತಿ ತಪ್ಪುತ್ತದೆ, ಅಥವಾ ಬಿಲದಿಂದ ಹೊರಗೆ ಓಡಿ ಬರುತ್ತದೆ. ಈಗ ಸುಲಭದಲ್ಲಿ ಬಲೆ ಹಾಕಿಯೂ ಹಿಡಿಯಬಹುದು. ಉಡವು ಭೂಮಿಯಲ್ಲಿ, ಹಾಗೆಯೇ ನೀರಿನಲ್ಲಿ ಬದುಕಲು ಶಕ್ತವಿರುವ ಉಭಯವಾಸಿ ಜೀವಿ. ಒಂದು ವೇಳೆ ನೀರಿನ ಕೊಳದಲ್ಲಿ ಮುಳುಗಿದರೆ ಬೇಗನೆ ಮೇಲೆ ಬರುವುದಿಲ್ಲ. ನೀರಿನಲ್ಲಿ ಎರಡು ಮೂರು ದಿನ ಮುಳುಗಿರಲು ಅದು ಶಕ್ತವಾಗಿದೆ.

ಉಡದ ಮಾಂಸವು ತಿನ್ನಲು ಉಪಯೋಗವಾಗುತ್ತದೆ. ಮಾಂಸವು ತಿನ್ನಲು ರುಚಿಕರವಾಗಿರುತ್ತದೆ. ಆದರೆ ಸ್ವಲ್ಪ ಮಣ್ಣಿನ ಪರಿಮಳವಿರುತ್ತದೆ. ಕುಡುಬಿಯರು ಉಡವನ್ನು ಬಹಳ ಚಾಕಚಕ್ಯತೆಯಿಂದ ಹಿಡಿಯುತ್ತಾರೆ ಮತ್ತು ಚರ್ಮಕ್ಕೆ ಪೆಟ್ಟಾಗದ ರೀತಿ ಕೊಲ್ಲುತ್ತಾರೆ. ಹಿಡಿಯುವಾಗ ಕೆಲವು ಉಡಗಳು ಕಚ್ಚುವುದೂ ಇದೆ. ಹೀಗೆ ಉಡವು ಕೋಪದಿಂದ ಓಡಿ ಬಂದು ಅಥವಾ ಅಂಗಾತ ಬಿದ್ದು ಕಚ್ಚಿದರೆ ಒಳ್ಳೆಯದು ಎಂಬ ನಂಬಿಕೆಯಿದೆ. ಕೆಲವು ಬಾರಿ ಆಗ ತಾನೇ ಕೊಂದ ಉಡದ ರಕ್ತವನ್ನು ಹೀರಿ ಹಸಿಯಾಗಿಯೇ ಕುಡಿಯುವುದೂ ಉಂಟು. ಈ ರೀತಿ ಉಡದ ಹಸಿ ರಕ್ತ ಹೀರುವುದರಿಂದ ಅಥವಾ ಉಡವು ಕಚ್ಚಿದರೆ ವಿಷವೇರುವುದನ್ನು ಒಂದು ಬಾರಿಗೆ ತಡೆಯುವ ಶಕ್ತಿ ಅದಕ್ಕುಂಟು ಅಂತ ಜನ ನಂಬುತ್ತಾರೆ.

ಉಡದ ಚರ್ಮವು ಚಿಕ್ಕ ಚಿಕ್ಕ ಚಿಪ್ಪುಗಳ ರಚನೆಯ ಪದರಗಳಿಂದ ಕೂಡಿದ್ದು ತುಂಬಾ ಗಟ್ಟಿಯಾಗಿರುತ್ತದೆ. ಕರಿ ಉಡಕ್ಕಿಂತಲೂ ಶ್ವೇತ ಉಡದ ಚರ್ಮವು ಬಲಿಷ್ಠವಾಗಿರುತ್ತದೆ. ಉಡದ ಹೊಟ್ಟೆಯ ಭಾಗದಲ್ಲಿ ರಂಧ್ರಗಳಿಲ್ಲ. ಗುದರಂಧ್ರವು ಬಾಲದ ಬುಡದಲ್ಲಿ ಹೊಟ್ಟೆಯ ಭಾಗದಲ್ಲಿರುತ್ತದೆ. ಉಡದ ಹೊಟ್ಟೆಯನ್ನು ಸೀಳಿ ಬಿಡಿಸಲಾದ ಚರ್ಮವು ಗುಮಟೆಗೆ ಹೊದಿಸಲು ಯೋಗ್ಯವಲ್ಲ. ಉಡದ ಬೆನ್ನ ಮೇಲೆ ಬೆನ್ನೆಲುಬಿನ ಉಬ್ಬಿದಂಥ ತೀಕ್ಷ್ಣ ರಚನೆ

ಇದ್ದು, ಹೊಟ್ಟೆ ಸೀಳಿ, ತೆಗೆದ ಚರ್ಮವನ್ನು ಗುಮಟೆಗೆ ಹೊದೆಸಿದರೆ, ಚರ್ಮದ ಮೇಲೆ ಬಾರಿಸುವಾಗ ಉದ್ದಕ್ಕೆ ಚರ್ಮವು ಸೀಳಿ ಹೋಗುವ ಸಂಭವ ಹೆಚ್ಚು.

ಉಡದ ಬೆನ್ನು ಮೂಳೆಯೊಳಗೆ ಟೊಳ್ಳಾದ ರಚನೆ ಇದೆ. ಬಾಲದ ಕಡೆಯಿಂದ ಬೆನ್ನು ಮೂಳೆಯನ್ನು ಕತ್ತರಿಸಿ ಒಂದು ಹಿಡಿಕಡ್ಡಿಯನ್ನು ಈ ಟೊಳ್ಳುಭಾಗದಿಂದ ತೂರಿಸಿದರೆ ಅದು ತಲೆಯವರೆಗೆ ಸರಾಗವಾಗಿ ಹೋಗುತ್ತದೆ. ಹಿಡಿಕಡ್ಡಿಯ ನೇರಕ್ಕೆ ಚೂರಿಯಿಂದ ಸಿಗಿದು ಚರ್ಮವನ್ನು ಇಬ್ಭಾಗವಾಗಿ ಬಿಡಿಸಿದರೆ ಸಪಾಟಾದ ಹೊಟ್ಟೆಯ ಭಾಗದ ಚರ್ಮವು ಸುಮಾರು ಒಂದೂವರೆಯಿಂದ ಎರಡು ಗೇಣಿನಷ್ಟು, ಗುಮಟೆಯ ಬಾಯಿಗೆ ಮುಚ್ಚಲು ಸಾಕಾಗುವಷ್ಟು ಸುತ್ತಳತೆಯಲ್ಲಿ ಸಿಗುತ್ತದೆ.

ಉಡವನ್ನು ಸಾಯಿಸಿದ ತಕ್ಷಣ ಚರ್ಮವನ್ನು ಪ್ರತ್ಯೇಕಗೊಳಿಸುವುದು ಕಷ್ಟದ ಕೆಲಸ. ಚರ್ಮವು ಮಾಂಸಕ್ಕೆ ಬಲವಾಗಿ ಅಂಟಿಕೊಂಡಿರುವುದರಿಂದ ಹೊಡೆದ ಉಡವನ್ನು ಸುಮಾರು 6 ರಿಂದ 8 ಗಂಟೆ ಬಿಟ್ಟು ನಂತರ ಚರ್ಮ ಪ್ರತ್ಯೇಕಗೊಳಿಸಿದರೆ ಸ್ವಲ್ಪ ಸುಲಭವಾಗುತ್ತದೆ. ಚರ್ಮಕ್ಕಂಟಿದ ಮಾಂಸದ ತುಣುಕುಗಳನ್ನು ಚೂರಿಯಿಂದ ಚೆನ್ನಾಗಿ ಕೆರೆದು ತೆಗೆಯಬೇಕು. ಚರ್ಮದಲ್ಲಿ ಮಾಂಸ ಉಳಿದರೆ ಒಂದೆರೆಡು ವರ್ಷಗಳಲ್ಲಿ ಚರ್ಮಕ್ಕೆ ಹುಳ ಬಿದ್ದು ಹಾಳಾಗುತ್ತದೆ. ಚೆನ್ನಾಗಿ ಶುಚಿಗೊಳಿಸಿದ ಚರ್ಮವು ತುಂಬಾ ವರ್ಷ ಹಾಳಾಗದೆ ಉಪಯೋಗಕ್ಕೆ ಬರುತ್ತದೆ. ಹೀಗೆ ಚೆನ್ನಾಗಿ ಶುಚಿಗೊಳಿಸಿದ ಚರ್ಮವು ತೆಳ್ಳಗಿರುವುದರಿಂದ ಗುಮಟೆ ಬಾರಿಸುವಾಗ ತೀಕ್ಷ್ಣವಾದ ಶಬ್ಧವೂ ಬರುತ್ತದೆ. ಕಾಲುಗಳ ಭಾಗದ ಚರ್ಮವನ್ನು ಕತ್ತರಿಸಿ ಬೇರ್ಪಡಿಸಿದಾಗ ಗುಮಟೆಗೆ ಬೇಕಾದಷ್ಟು ಅಗಲದ ಚರ್ಮವು ಸಿಗುತ್ತದೆ. ಈ ಚರ್ಮವನ್ನು ಒಂದು ಒಡೆದ ಮಡಕೆಯ ಕಂಠಕ್ಕೆ ಅಡಿಮೇಲಾಗಿ (ಮಾಂಸದ ಭಾಗ ಮೇಲಾಗುವಂತೆ), ನಿರಿಗೆ ಬೀಳದ ರೀತಿಯಲ್ಲಿ ಕಟ್ಟಿ ಬಿಸಿಲಿಗೆ ಚೆನ್ನಾಗಿ ಒಣಗಿಸಬೇಕು. ಒಣಗಿಸಿದ ಚರ್ಮವನ್ನು ಒಲೆಯ ಮೇಲ್ಗಡೆ ಹೊಗೆ ತಾಗುವಂತೆ ಕಟ್ಟಿದರೆ ಚರ್ಮವು ಹಾಳಾಗದೆ ತುಂಬಾ ವರ್ಷ ಉಪಯೋಗಿಸಲು ಸಾಧ್ಯ.

ಉಡದ ತಲೆಯಭಾಗ ಮತ್ತು ಉಗುರುಗಳನ್ನು ಕುಡುಬಿಯರು ಎಸೆಯುವುದಿಲ್ಲ. ಬದಲಿಗೆ ಅವುಗಳನ್ನು ಚೆನ್ನಾಗಿ ಒಣಗಿಸಿ ಇಡುತ್ತಾರೆ. ಜಾನುವಾರುಗಳಿಗೆ ಒಂದು ರೀತಿಯ ಹುಳದ ಬಾಧೆಯಿಂದ ರೋಮ ಉದುರುವ ರೋಗ ಬಂದಾಗ ಅವುಗಳು ಏನೂ ತಿನ್ನುವುದಿಲ್ಲ. ಇಂತಹ ಸಂದರ್ಭ ನಾರಿಂಗ ಕಾಯಿಯ ರಸದೊಂದಿಗೆ ಉಡದ ಮಂಡೆ ಮತ್ತು ಉಗುರುಗಳನ್ನು ಅರೆದು ದಿನಕ್ಕೆ ಎರಡು ಮೂರು ಬಾರಿ ಕುಡಿಸಿದರೆ ನಿಧಾನವಾಗಿ ಈ ರೋಗ ಕೆಲವು ದಿವಸಗಳಲ್ಲೆ ಗುಣವಾಗುತ್ತದೆ.

ಚರ್ಮವನ್ನು ಕಳಸೆಗೆ ಕಟ್ಟುವ ಕ್ರಮ : ಹೊಗೆ ತಾಗುವಂತೆ ತೆಗೆದಿರಿಸಿದ ಚರ್ಮವು ತಗಡಿನಂತಿರುತ್ತದೆ. ಈ ಚರ್ಮವು ನಸೆಯಾಗಬೇಕಾದರೆ, ಒಂದು ದಿನ ನೀರಲ್ಲಿ ಅದ್ದಿ

ಇಟ್ಟಿರಬೇಕು. ಸರಿಯಾಗಿ ಅದ್ದಿ ಇಟ್ಟ ಚರ್ಮವನ್ನು ತೊಳೆದು ಸುಗ್ಗಿಯ ಬೈಹುಲ್ಲಿನೊಂದಿಗೆ, ಬೈಹುಲ್ಲು ಹುಡಿಯಾಗುವಷ್ಟು ರುಬ್ಬಿದರೆ ಚರ್ಮವು ನಿರಿಗೆಗಳನ್ನು ಕಳೆದುಕೊಂಡು, ನಸೆಯಾಗಿ ಹದಕ್ಕೆ ಬರುತ್ತದೆ.

ಚರ್ಮವನ್ನು ಕಳಸೆಗೆ ಬಿಗಿಯಲು ಕತ್ತಾಳೆ ನಾರಿನಿಂದ (ಅನಾನಸು ಜಾತಿಯ ಕಾಟು ಸಸ್ಯ) ಕತ್ತಾವು ಗಾತ್ರದ ಹಗ್ಗ ಹೆಣೆಯುತ್ತಾರೆ. ಕತ್ತಾಳೆ ನಾರು ಸುಮಾರು 3-4 ಅಡಿ ಉದ್ದವಾಗಿರುವುದರಿಂದ ಹಗ್ಗ ಹೆಣೆದಾಗ ಕುಚ್ಚುಗಳು ಉಳಿಯುವುದಿಲ್ಲ. ಈ ನಾರಿನಿಂದ ತಯಾರಿಸಿದ ಹಗ್ಗವು ಈಗಿನ ನೈಲಾನ್‌ನಂತೆ ತುಂಬಾ ಸಮಯ ಬಾಳಿಕೆ ಬರುತ್ತದೆ. ಕತ್ತಾಳೆ ಗಿಡ ಅನಾನಸು ಜಾತಿಯ ಕಾಟುಗಿಡ . ಇದರ ಎಲೆಗಳು ಹಾಳೆಯಂತಿದ್ದು ಅನಾನಸು ಎಲೆಗಳಷ್ಟು ಉದ್ದ ಹಾಗೂ ಅನಾನಸು ಎಲೆಗಳ ಎರಡು ಮೂರು ಪಟ್ಟು ದಪ್ಪಗಿರುತ್ತವೆ. ಎಲೆಗಳ ಎರಡೂ ಬದಿಗಳಲ್ಲಿ ಸುಮಾರು ಇಂಚಿಗೊಂದರಂತೆ ಬಾಗಿದ ಮುಳ್ಳುಗಳಿದ್ದು ತುದಿಯಲ್ಲಿ ಮೊನಚಾದ ಮತ್ತು ಬಲಿಷ್ಠವಾದ ಡಬ್ಬಣದಂತಹ ಮುಳ್ಳನ್ನು ಹೊಂದಿರುತ್ತದೆ. ಈ ಗಿಡ ಪೊದೆಯಂತೆ ಬೆಳೆಯುತ್ತದೆ. ಹೆಚ್ಚಾಗಿ ಇದನ್ನು ಬೇಲಿಗಾಗಿ ನೆಡುತ್ತಾರೆ. ಆದರೆ ಇದಕ್ಕೆ ಅನಾನಸು ಅಥವಾ ಕಾಯಿ ಆಗುವುದಿಲ್ಲ. ಬಾಳೆಯಂತೆ ಬುಡದಲ್ಲಿ ಮರಿಗಿಡಗಳು ಹುಟ್ಟುತ್ತವೆ. ಇವುಗಳನ್ನು ಕಿತ್ತು ಪುನಃ ನೆಟ್ಟು ಬೆಳೆಸಲಾಗುತ್ತದೆ. ತುಳುವಿನಲ್ಲಿ ಇದಕ್ಕೆ ದಾಡ್ಪಾಲೆ ಅಂತ ಹೆಸರು. ಇದರ 4-5 ಎಲೆಗಳಿಂದ ಮುಷ್ಟಿಯಷ್ಟು ನಾರು ಸಿಗುತ್ತದೆ. ಹಸಿಯಾಗಿಯೇ ನಾರನ್ನು ತೆಗೆಯಬಹುದು. ತುಂಬಾ ನಾರು ಬೇಕಾದಾಗ ಎಲೆಗಳನ್ನು ಬೇಯಿಸಿದರೆ ಸುಲಭವಾಗಿ ನಾರನ್ನು ಬೇರ್ಪಡಿಸಲು ಸಾಧ್ಯ. ನೈಲಾನಿನಂತೆ ಬಾಳಿಕೆ ಬರುವುದರಿಂದ ದಪ್ಪದ ಹಗ್ಗ ತಯಾರಿಯಲ್ಲೂ ಈ ನಾರನ್ನು ಬಳಸುವುದುಂಟು. ಕುಡುಬಿಯರು ಮೊಲ, ಕಾಡುಹಂದಿ, ಕಣೆಹಂದಿ, ಉಡ, ಬರಿಂಕ-ಮುಂತಾದ ಪ್ರಾಣಿಗಳ ಬೇಟೆಗೆ ಬೇಕಾದ ಬಲೆಗಳು ಹಾಗೂ ಮೀನಿನ ಬಲೆ, ತರಗೆಲೆ ಆಯುವ ಕುರ್ಕಿಲ್, ದಿನನಿತ್ಯದ ಕೆಲಸಗಳಿಗೆ ಬೇಕಾದ ಹಗ್ಗಗಳನ್ನು ಹೆಣೆದು ಬಳಸುತ್ತಾರೆ.

ಕಳಸೆಗೆ ಚರ್ಮ ಹೊದೆಸುವುದಕ್ಕಿಂತ ಮುಂಚಿತವಾಗಿ, ಅದರ ಕಿರುಬಾಯಿಗೆ (ಧುಮ್ಮೊ) ಹಳೆಬಟ್ಟೆಯ ಸೂಡಿ ಮಾಡಿ ಹೊಗಿಸಿ ಮುಚ್ಚುತ್ತಾರೆ. ಹೀಗೆ ಮಾಡುವುದರಿಂದ ಹೊರಗಿನ ಗಾಳಿ ಒಳಗೆ ಹೋಗುವುದಿಲ್ಲ. ಆಗ ಕಳಸೆಯ ಒಳಗೆ ಗಾಳಿಯ ಒತ್ತಡವಿರದುದರಿಂದ ಚರ್ಮವು ಸಡಿಲವಾಗುವ ಸಂಭವ ತಪ್ಪುತ್ತದೆ. ಚರ್ಮವು ಕಳಸೆಯ ಕಂಠಕ್ಕೆ ಸರಿಯಾಗಿ ಅಂಟಿಕೊಳ್ಳುವುದಕ್ಕಾಗಿ ಕಾಡಿನಲ್ಲಿ ಸಿಗುವ 'ತೆಂಬ್ರಾಂ' (Wild Mangosteem, Diospyros Peregrina) ಎಂಬ ಕಾಯಿಯ (ಕನ್ನಡದಲ್ಲಿ ಈ ಕಾಯಿಗೆ 'ಚಂದ್ರಿ' ಮತ್ತು ಮರಕ್ಕೆ 'ಬಾಂದದ ಮರ' ಅಂತ ಹೆಸರು) ಮೇಣವನ್ನು ಕಳಸೆಯ ಕಂಠದ ಹೊರಮೈಗೆ ಸವರುತ್ತಾರೆ. ಈ ಮೇಣವು ಈಗಿನ 'ಫೆವಿಕಾಲ್'ಗಿಂತಲೂ ಬಲವಾಗಿ ಅಂಟುತ್ತದೆ. ಮೇಣ ಸವರುವ ಉದ್ದೇಶ, ಚರ್ಮವು ಕಳಸೆಗೆ ಅಂಟಿ ನಿಲ್ಲುವುದು ಮಾತ್ರವಲ್ಲ, ಈ ಮೇಣಕ್ಕೆ ಹುಳ ಹತ್ತಿರ ಸುಳಿಯುವುದಿಲ್ಲ. ಚರ್ಮವು ಹಾಳಾಗಿ ದುರ್ಬಲವಾಗುವ ಸಂಭವ ಕಡಿಮೆ

ಮತ್ತು ಒಮ್ಮೆ ಅಂಟಿಕೊಂಡ ಚರ್ಮ ಸಡಿಲವಾಗುವುದೂ ಇಲ್ಲ.

ಕಳಸೆಯ ಅಗಲವಿರುವ ಬಾಯಿಯ ಮೇಲೆ, ಚರ್ಮದ ಬೆನ್ನಿನ ಬದಿ ಮೇಲೆ ಇರುವಂತೆ ಹರಡಬೇಕು. ಚರ್ಮದ ಒಳಮೈ ನಸೆಯಾಗಿರುವುದರಿಂದ ಗುಮಟೆ ಬಾರಿಸುವಾಗ ಅಂಗೈ ಜಾರುತ್ತದೆಯಾದುದರಿಂದ ದೊರಗು ಇರುವ ಹೊರಮೈ ವಾದನದ ಪಕ್ಕ ಇರುವುದು ಅವಶ್ಯ ಚರ್ಮವು ಕಳಸೆಯ ಬಾಯಿ ಮೀರಿ ಕಂಠಕ್ಕೆ ಬಿಗಿಯಲು ಒಂದೂವರೆ ಇಂಚಿನಷ್ಟು ಸಿಗಬೇಕು. ಚರ್ಮವನ್ನು ಬಿಗಿಯಲು ನಾಲ್ಕು ಜನರ ಅವಶ್ಯಕತೆಯಿದೆ. ಒಬ್ಬ ಹಗ್ಗದಿಂದ ಬಿಗಿಯಲು ಮತ್ತು ಮೂರು ಜನ ಚರ್ಮವನ್ನು ಎಳೆದು ಹಿಡಿಯಲು. ಹಗ್ಗ ಬಿಗಿಯುವವ ತನ್ನ ತೊಡೆಗಳ ಮೇಲೆ ಕಳಸೆಯನ್ನು ಬಾಯಿ ಮೇಲೆ ಇರುವಂತೆ ಇಟ್ಟುಕೊಳ್ಳುತ್ತಾನೆ. ಕಳಸೆಯ ಹಿರಿಬಾಯಿಗೆ ಬಿಡಿಸಿದ ಚರ್ಮವನ್ನು ಮೂರು ಜನ ಆರು ಕೈಗಳಿಂದ, ಚರ್ಮಕ್ಕೆ ನಿರಿಗೆ ಬೀಳದಂತೆ ಎಳೆದು ಹಿಡಿಯುವಾಗ, ಹಗ್ಗ ಬಿಗಿಯುವವ ಕಳಸೆಯ ಕಂಠಕ್ಕೆ, ಚರ್ಮದ ಮೇಲೆ ಕ್ಷಣಮಾತ್ರದಲ್ಲಿ ಹಗ್ಗ ಬಿಗಿದು ಕಟ್ಟುತ್ತಾನೆ. ಹೀಗೆ ಆಗತಾನೇ ಕಳಸೆಗೆ ಕಟ್ಟಿದ ಚರ್ಮವು ಹಸಿಯಾಗಿರುವುದರಿಂದ ಸ್ವಲ್ಪ ನೆರಳಿರುವ ಬಿಸಿಲಿನಲ್ಲಿ ಒಣಗಿಸಬೇಕಾಗುತ್ತದೆ. 3-4 ದಿನದಲ್ಲಿ ಚರ್ಮವು ಒಣಗುತ್ತದೆ. ತೀಕ್ಷ್ಣವಾದ ಬಿಸಿಲಿನಲ್ಲಿ ಒಣಗಿಸಿದಲ್ಲಿ ಬಿಗಿದ ಚರ್ಮವು ಒಡೆದುಹೋಗುವ ಸಾಧ್ಯತೆಗಳಿವೆ. ಹೀಗೆ ಚರ್ಮವನ್ನು ಕಳಸೆಗೆ ಹೊದೆಸುವ ಕ್ರಿಯೆಗೆ ಕೊಂಕಣಿಯಲ್ಲಿ 'ಗುಮಟೆ' ಸಾಂಧ್ಚೆಂ' ಅನ್ನುತ್ತಾರೆ.

ಈಗ ಗುಮಟೆ ವಾದನಕ್ಕೆ ತಯಾರಾದಂತಾಯಿತು. ಗುಮಟೆ ಬಾರಿಸುವುದಕ್ಕೂ ನಿಶ್ಚಿತ ಕ್ರಮವಿದೆ. ಸಿಕ್ಕ ಹಾಗೆ ಬಾರಿಸಲು ಆಗುವುದಿಲ್ಲ. ಚರ್ಮದ ಮಧ್ಯದಲ್ಲಿ ಬಾರಿಸಿದರೆ ಚರ್ಮವು ಹರಿಯುವ ಅವಕಾಶವಿದೆ. ವಾದನ ಮಾಡುವಾಗ ಅಂಗೈಯು ಗುಮಟೆಯ ಕಂಠದ ಅರುವಿನಲ್ಲಿರಬೇಕು. ಬೆರಳುಗಳು ಚರ್ಮದ ಮೇಲೆ ಆಡುತ್ತಿರಬೇಕು. ಹೆಬ್ಬೆರಳು ಅರುವಿಗಿಂತ ಮುಂದಕ್ಕೆ ಹೋಗಬಾರದು. ಗುಮಟೆಯ ಕಿರುಬಾಯಿ (ಧುಮ್ಕೊ) ಮುಚ್ಚಿ ತೆರೆದು ಮಾಡುವಾಗ ವಿವಿಧ ಶಬ್ದ ಬರುವಂತೆ ಬಾರಿಸಲಾಗುತ್ತದೆ. ಹೀಗೆ ಬಾರಿಸುವಾಗ ಉಂಟಾಗುವ ತೀವ್ರ ಶಬ್ಧ ತರಂಗಗಳು ಕಲಾವಿದನಲ್ಲಿ ಉತ್ಸಾಹದ ಉತ್ಕೃಷ್ಟತೆಯನ್ನು ತಲುಪಿಸುತ್ತದೆ. ಚತುರ ಕಲಾವಿದನು ಆಯಾಯ ರೀತಿಯ ಹಾಡುಗಳಿಗೆ ಅಷ್ಟೇ ತೀವ್ರಗತಿಯಲ್ಲಿ ಗುಮಟೆ ನುಡಿಸಿ ಕುಣಿಯುತ್ತಾನೆ. ಹಲವು ಕಲಾವಿದರು ಆಡುತ್ತಿರುವಾಗ ಗುಮಟೆಗಳು ಒಂದಕ್ಕೊಂದು ತಾಗದಂತೆ ಹೊಟ್ಟೆಯ ಅಡಿಭಾಗಕ್ಕೆ ಬರುವಂತೆ ನೋಡಿಕೊಳ್ಳುವುದು ಅವಶ್ಯ. ಚರ್ಮವು ಥಂಡಿಯಾದರೆ ಬೇಕಾದ ತೀಕ್ಷ್ಣ ಶಬ್ಧವು ಬರಲಾರದು. ಅಂತಹ ಸಂದರ್ಭ ಚರ್ಮವನ್ನು ಸ್ವಲ್ಪ ಬಿಸಿ ಮಾಡಿದರೆ ಸರಿಯಾದ ಶಬ್ಧ ಹೊರಹೊಮ್ಮುತ್ತದೆ.

ಸಾಮಾನ್ಯವಾಗಿ ಗುಮಟೆ ನುಡಿಸುವುದು ಬಲಗೈಯಿಂದ-ಎಡಗೈಯಿಂದ ಬಾರಿಸಲು ಅನುಕೂಲವಾಗುವುದಿಲ್ಲ. ಎಡತೋಳಿಗೆ ಹಗ್ಗ ಅಥವಾ ಬಟ್ಟೆಯ ಪಟ್ಟಿಯಿಂದ ಗುಮಟೆಯನ್ನು ಬಾರಿಸಲು ಅನುಕೂಲವಾಗುವಂತೆ ಸೊಂಟ ಮಟ್ಟಕ್ಕೆ ಬರುವಂತೆ ನೇತಾಡಿಸುತ್ತಾರೆ. ಒಬ್ಬನೇ

ಗುಮಟೆ ಬಾರಿಸುವುದೂ ವಿರಳ. ಇಬ್ಬರು ಅಥವಾ ನಾಲ್ಕೈದು ಜನ ಕಲಾವಿದರು ಸೇರಿಯೇ ಗುಮಟೆ ನುಡಿಸುವುದು ಕ್ರಮ. ಇದರಿಂದಾಗಿ ಯಾರಾದರೂ ಮಾತುಮಾತಿಗೆ ವಿರೋಧವಾಗಿ ಉಲ್ಟಾ ಮಾತಾಡಿದರೆ 'ಉಲ್ಟಾ ಗುಮಟೆ ಬಾರಿಸುತ್ತಾನೆ' ಮತ್ತು ತನ್ನದೇ ಬಡಾಯಿ ಕೊಚ್ಚಿದರೆ 'ತನ್ನದೇ ಗುಮಟೆ ಬಾರಿಸುತ್ತಾನೆ' ಎಂಬ ನಾಣ್ಣುಡಿ ಚಾಲ್ತಿಯಲ್ಲಿದೆ.

ಗುಮಟೆಗೆ ಅದರದ್ದೇ ಆದ 'ತನ್ನತನ' (identity) ಅಥವಾ ಸಮೀಕರಣ ಇದೆ. ಮಣ್ಣಿನ ಕಳಸೆ - ಅದು ಬಿಂದಿಗೆಯಾಕಾರವಾಗಿರಬಹುದು ಅಥವಾ ಚೀನಿಕಾಯಿ ಆಕಾರವೂ ಆಗಿರಬಹುದು, ಅಲ್ಲದಿದ್ದಲ್ಲಿ ಹಾಲಕ್ಕಿ ಒಕ್ಕಲಿಗರು ಉಪಯೋಗಿಸುವ ಸುಮಾರು ನಾಲ್ಕು ಅಡಿ ಉದ್ದದ ಮದ್ದಳೆಯಾಕಾರದ ಕಳಸೆಯಾಗಿರಬಹುದು. ಅದರ ಅಗಲವಿರುವ ಬಾಯಿಗೆ ಉಡದ ಚರ್ಮವನ್ನು ಹೊದೆಸಿದ್ದರೆ ಆ ಸಂಗೀತ ಉಪಕರಣಕ್ಕೆ 'ಗುಮಟೆ' ಅಂತ ಹೆಸರು. ಕಳಸೆ ಮಣ್ಣಿನದ್ದಾಗಿರದೆ ಬೇರೆ ಯಾವುದೇ ಥರದ್ದಾದಲ್ಲಿ ಅಥವಾ ಹೊದೆಸಿದ ಚರ್ಮ ಬೇರೆ ಯಾವುದೇ ಪ್ರಾಣಿಯದ್ದಾದಲ್ಲಿ ಆ ಉಪಕರಣಕ್ಕೆ 'ಗುಮಟೆ' ಎನ್ನಲು ಬರುವುದಿಲ್ಲ.

ಪುರಾತನ ಕಾಲದಿಂದಲೂ ಪ್ರತಿಯೊಂದು ಗಿರಿಜನ (ಬುಡಕಟ್ಟು) ಜನಾಂಗಗಳಲ್ಲಿ ಗುಮಟೆ ಒಂದು ಸಂಗೀತ ಸಾಧನವಾಗಿ ಉಪಯೋಗವಾದದ್ದು ತಿಳಿದು ಬರುತ್ತದೆ. ಗುಮಟೆ ತಾಳವಾದ್ಯಗಳ ಪೈಕಿ ಪ್ರಥಮ ಸಾಧನ ಎನ್ನಬಹುದು. ಇದೊಂದು ಸಮಾಜದ ದುರ್ಬಲ ವರ್ಗದ ಜನರ ಸಂಗೀತವಾದ್ಯ. ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸುಧಾರಣೆ ಹೊಂದಿ ಮುಂದುವರಿದ ಜನಾಂಗದವರು ಹಿಂದಿನಿಂದಲೂ ಗುಮಟೆಯ ಉಪಯೋಗ ಮಾಡಿಲ್ಲ. ಇಡೀ ದಿವಸ ಕಷ್ಟ ಪಟ್ಟು ದುಡಿದು ಆದ ದೈಹಿಕ ಶ್ರಮದ ಪರಿಹಾರಕ್ಕಾಗಿ, ಬಡತನದ ಬೇಸರ ನಿವಾರಣೆಗಾಗಿ ಮತ್ತು ಆತ್ಮ ಸಂತೋಷಕ್ಕಾಗಿ ಜನ ಗುಮಟೆ ಬಾರಿಸಿದರು. ಗುಮಟೆಗಳನ್ನು ಯಾವುದೇ ಕಾಲದಲ್ಲೂ ಶ್ರೀಮಂತ ಸಮಾಜದವರು ಉಪಯೋಗಿಸಿದ ದಾಖಲೆಗಳು ಚರಿತ್ರೆಯಲ್ಲಿ ಅಪರೂಪ. ಹೆಚ್ಚಾಗಿ ಕೊಂಕಣಿ ಮಾತೃಭಾಷೆಯ ಕುಡುಬಿ, ಕ್ರಿಶ್ಚಿಯನ್, ಖಾರ್ವಿ, ಸಿದ್ಧಿ-ಇಂತಹ ದುರ್ಬಲ ವರ್ಗದವರು ಗುಮಟೆಯ ಭರಪೂರ ಉಪಯೋಗ ಮಾಡಿದ್ದಾರೆ, ಮಾಡುತ್ತಿದ್ದಾರೆ, ಹಾಗೂ ಗುಮಟೆ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದು ತಿಳಿದು ಬರುತ್ತದೆ. ಯಾವುದೇ ಸಂದರ್ಭದಲ್ಲೂ ಗುಮಟೆಯು ಸಮಾಜದ ಮೇಲ್ವರ್ಗದವರ ಸಂಗೀತ ವಾದ್ಯವಾಗಿರಲಿಲ್ಲ. ಕೊಂಕಣಿ ಭಾಷೆಯ ನಂತರ ಕೊಂಕಣಿ ಸಂಸ್ಕೃತಿಯ ಒಂದು ಪ್ರತೀಕ 'ಗುಮಟೆ' ಹೌದಾದರೂ ಕೊಂಕಣಿ ಮಾತೃಭಾಷೆಯವರೇ ಆದ ಸಾರಸ್ವತರು ಅಥವಾ ಸಾರಸ್ವತರಿಗೆ ಹತ್ತಿರವಿರುವ ಸಮುದಾಯಗಳಲ್ಲಿ ಗುಮಟೆ ಕಲೆ ಇದ್ದ ದಾಖಲೆ ಇತಿಹಾಸದಲ್ಲೇ ಇಲ್ಲವೆನ್ನಬಹುದು.

ಚಳಿಗಾಲ ಮುಗಿದು 'ವಸಂತ ಕಾಲ' ಪ್ರಾರಂಭವಾಗುವಾಗ ಕೊಯ್ಲು ಮುಗಿದು ಬೆಳೆದ ಬೆಳೆ ಕೈಗೆ ಸಿಕ್ಕಿದಾಗ ಮಣ್ಣಿನ ಮಕ್ಕಳಿಗೆ ಸುಗ್ಗಿಯ ನೆನಪು ತನ್ನಿಂತಾನೇ ಆಗುತ್ತದೆ. ಈ

ಸಂದರ್ಭ ಬರುವ ಹುಣ್ಣಿಮೆಗೆ 'ಸುಗ್ಗಿ ಹುಣ್ಣಿಮೆ' ಅಂತಲೇ ಹೆಸರು. ಕೊಂಕಣಿಯಲ್ಲಿ ಈ ಕಾಲ 'ಶಿಗ್ಮೊ'. ಬಸ್ತಿ ಪುಂಡಲೀಕ ವೆಂಕಟೇಶ ಶೆಣೈಯವರು ತಮ್ಮ 'ಕೊಂಕಣಿ ಮತ್ತು ಮರಾಠಿ -ತುಲನಾತ್ಮಕ ವಿಮರ್ಶೆ' ಎಂಬ ಗ್ರಂಥದಲ್ಲಿ 'ಶೀತಗಮನಾ ಪೂರ್ಣಿಮಾ =ಶಿಗಮೇಚಿ ಪುನವ್' - ಅಂತ ವಿವರ ನೀಡುತ್ತಾರೆ. ಮೀನ ಸಂಕ್ರಾಂತಿಯ ನಂತರ ಬರುವುದು ಸುಗ್ಗಿ ತಿಂಗಳು. ಕೊಂಕಣಿಯಲ್ಲಿ 'ಸುಗ್ಗಿ ಮ್ಹಯಿನೊ'- 'ಶಿಗ್ಮೊ' ಆಗಿರುವ ಸಾಧ್ಯತೆ ಇದೆ. (ಸುಗ್ಗಿ ಮ್ಹಯಿನೊ' ದಲ್ಲಿ ಬರುವ ಹುಣ್ಣಿಮೆ 'ಶಿಗ್ಮ್ಯಾ' ಪುನವ್?) ಸುಗ್ಗಿಯ ಈ ಕಾಲ ಜನಪದರ ವಿರಾಮದ, ಪುರುಸೊತ್ತಿನ ಕಾಲ ಮಾತ್ರವಲ್ಲ, ಇಡೀ ವರ್ಷ ಕಷ್ಟ ಪಟ್ಟು ದುಡಿದು, ಕೃಷಿ ಮಾಡಿ ಫಸಲು ಕೈಗೆ ಸಿಗುವಾಗ ಜನಜೀವನದಲ್ಲೂ ಸುಗ್ಗಿಯ ಸಂತೋಷದ ಉತ್ಸಾಹ ಉಕ್ಕುತ್ತದೆ. ಈ ಆತ್ಮಸಂತೋಷದ ಆವೇಶದಲ್ಲಿ ರಾತ್ರಿ ವೇಳೆ ಗುಮಟೆ ಬಾರಿಸಿ, ಹಾಡಿ, ನರ್ತಿಸಿ ಮನೋರಂಜನೆ ಪಡೆಯುತ್ತಾರೆ. ಇಡೀ ವರ್ಷದ ಶ್ರಮವನ್ನು ಈ ಮುಖಾಂತರ ಮರೆತು ಮುಂದಿನ ಜೀವನಕ್ಕೆ ಉಲ್ಲಾಸಭರಿತರಾಗುತ್ತಾರೆ.

ಯಾವ ಸಮಾಜದ ಧಾರ್ಮಿಕ ಆಚರಣೆ ಹಾಗೂ ಗುಮಟೆ ಕಲೆಗೆ ಅಡೆತಡೆಗಳಿಲ್ಲದ ಸಂಬಧವಿತ್ತೊ, ಆ ಸಮಾಜದವರು ಗುಮಟೆ ಕಲೆಯನ್ನು ಉಳಿಸಿದರು ಮತ್ತು ಯಾವ ಸಮಾಜದ ಧಾರ್ಮಿಕ ಆಚರಣೆಗಳಲ್ಲಿ ಗುಮಟೆಗಳಿಗೆ ಮಹತ್ವ ಕಲ್ಪಿಸಲಾಗಿಲ್ಲವೋ ಆ ಸಮಾಜದವರು ಗುಮಟೆ ಕಲೆಯನ್ನು ರೂಢಿಸಿಕೊಳ್ಳದೆ ಹೋದರು. ಒಂದು ಕಾಲದಲ್ಲಿ ಶ್ರಮಿಕ ಮತ್ತು ದುರ್ಬಲ ಸಮಾಜದ ಪ್ರಧಾನ ಸಂಗೀತ ಸಾಧನವಾಗಿದ್ದಗುಮಟೆ ಪೋರ್ಚುಗೀಸರ ದಬ್ಬಾಳಿಕೆಯ ಭಯದಿಂದ ಅಟ್ಟ ಸೇರಿತಾದರೆ, ಆ ನಂತರ ಆಧುನೀಕರಣದ ನೆಪದಿಂದ ಮತ್ತು ಪಾಶ್ಚಾತ್ತೀಕರಣದ ಅಂಧಾನುಕರಣದಿಂದಾಗಿ ಗುಮಟೆಯನ್ನು ಉಪಯೋಗಿಸುವುದು ತಮ್ಮ ಘನತೆಗೆ ಕುಂದು ಎಂಬ ಕೀಳರಿಮೆಯಿಂದಾಗಿ ಗುಮಟೆ, ಗುಮಟೆ ಸಂಸ್ಕೃತಿ ಅಳಿಯಿತು. ಗುಮಟೆ ಕೊಂಕಣಿ ಸಂಸ್ಕೃತಿಯ ಪ್ರತೀಕ, ಪೂರ್ವಜರ ಅಮೂಲ್ಯ ಕಾಣಿಕೆಯಾಗಿ ಉಳಿಯಬೇಕಾದರೆ, ಪುರಾತನ ಕಾಲದಿಂದ ಯಾವ ಸಮಾಜದವರು ತಮ್ಮ ಧಾರ್ಮಿಕ ಕಾರ್ಯಗಳ ಸಂದರ್ಭಗಳಲ್ಲಿ ಅದನ್ನು ಉಪಯೋಗಿಸಿದ್ದರೊ, ಆ ಸಮಾಜದವರು ಗುಮಟೆಗೆ ಕ್ರಿಯಾತ್ಮಕ ರೀತಿಯಲ್ಲಿ ಅವಕಾಶ ನೀಡುವುದು ಅವಶ್ಯ.

ಇಂದಿನ ಸಮಾಜದಲ್ಲಿ ವಿವಿಧ ಜಾತಿಯ, ವಿವಿಧ ಪಂಗಡಗಳ ಜನಪದರು ಗುಮಟೆಯನ್ನು ತಮ್ಮ ಕಲಾಪ್ರಕಾರಗಳಿಗೆ ಉಪಯೋಗಿಸುತ್ತಾರೆ. ಕೊಂಕಣಿ ಮಾತೃಭಾಷೆಯ ಕುಡುಬಿ, ಕ್ರಿಶ್ಚಿಯನ್, ಸಿದ್ದಿ, ಖಾರ್ವಿ, ಕೊಂಕಣಿ ಕುಂಬಾರರು, ಕೊಂಕಣಿ ಭಂಡಾರಿ - ಹೀಗೆ ರತ್ನಗಿರಿಯಿಂದಲಾಗಿ ಕೊಚ್ಚಿ ಪರ್ಯಂತ ಹಲವು ಸಮುದಾಯದವರು ಗುಮಟೆ ಆಡುತ್ತಾರೆ. ಮರಾಠಿ ಸಮಾಜದವರಲ್ಲಿಯೂ ಗುಮಟೆಯ ಭರಪೂರ ಉಪಯೋಗವಾಗುತ್ತಿದೆ. ನಾಮಧಾರಿ, ಕೋಮಾರಪಂಥ, ಮುಕ್ರಿ, ಬೋವಿ, ಮುಂಬೈಯ 'ಈಷ್ಟ್ ಇಂಡಿಯನ್ ಕೋಲಿ' ಜನಾಂಗದವರೂ ಗುಮಟೆ ಆಡುತ್ತಾರೆ ಅಂತ ತಿಳಿದುಬರುತ್ತದೆ. ಉತ್ತರ ಕನ್ನಡದ ಹಾಲಕ್ಕಿ

ಒಕ್ಕಲಿಗ ಜನಾಂಗದಲ್ಲಿ ಉದ್ದ ಗಮಟೆ ರೂಢಿಯಲ್ಲಿದ್ದು 'ಗಮಟೆ ಫಾಂಗ್' ಎಂಬ ಜಾನಪದ ಕಥನಕಲೆಗೆ ಬಳಸಲ್ಪಡುತ್ತದೆ. ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿ 'ಬುಡಗ ಜಂಗಾಲ' ಬುಡಕಟ್ಟು ಸಮುದಾಯದವರಲ್ಲಿ 'ಬುರ್ರಕಥಾ' ಎಂಬ ಒಂದು ಜಾನಪದ ಪ್ರಕಾರವಿದೆ. ಈ ಕಲಾಪ್ರದರ್ಶನದಲ್ಲಿ ಪ್ರಮುಖವಾಗಿ ಉಪಯೋಗಿಸುವ ಸಂಗೀತ ವಾದ್ಯ 'ಗುಮಟೆ'. ಧನಗರ (Shepherd) ಸಮುದಾಯದ ದಸರಾ ಸಂದರ್ಭ ಪ್ರದರ್ಶಿಸಲ್ಪಡುವ 'ಹೊರ್ಬಾಲಾ' ನೃತ್ಯ ಮತ್ತು ಹೋಳಿ ಹಬ್ಬದ ಸಂದರ್ಭದ 'ಜಪಯ್ ' ನೃತ್ಯ ಪ್ರಕಾರಗಳಲ್ಲಿ ವಿಶೇಷವಾಗಿ ಉಪಯೋಗಿಸಲ್ಪಡುವ ಸಂಗೀತವಾದ್ಯ 'ಗುಮಟೆ'

ಗೋವಾದ ಹಿಂದೂ ದೇವಾಲಯಗಳಲ್ಲಿ (ಉದಾ: ಕಾನಾಕೋನಾ ಮಲ್ಲಿಕಾರ್ಜುನ ದೇವಸ್ಥಾನ) ಪೂಜೆಯಾಗುವಾಗ ಗುಮಟೆ ಬಾರಿಸುತ್ತಾರೆ. ಗೋವಾದ 'ಗಾವ್ಡಿ' ಸಮುದಾಯದವರು 'ಜಾಗೊರ್' ಎಂಬ ಗೀತನಾಟಕದ ಒಂದು ಪ್ರಕಾರವನ್ನು ಆಡುತ್ತಾರೆ. ಕೊಂಕಣಿ ಸಂಪ್ರದಾಯದ ಈ ಜಾನಪದ ಪ್ರಕಾರದಲ್ಲಿ ಉಪಯೋಗಿಸಲ್ಪಡುವ ಪ್ರಮುಖ ವಾದ್ಯಗಳಲ್ಲಿ ಗುಮಟೆಯೂ ಒಂದು ಪ್ರಧಾನವಾದ್ಯ. ಗೋವಾದ 'ಸತ್ತರಿಂ' ಮತ್ತು 'ಸಾಂಗೆಂ' ತಾಲೂಕುಗಳ ಲೋಕನಾಟ್ಯ ಪರಂಪರೆಯ 'ರಣಮಾಲೆ' ಎಂಬ ಒಂದು ಸ್ವತಂತ್ರ ಪ್ರಕಾರವು ಹೋಳಿಹಬ್ಬದ ಸಂದರ್ಭ ಪ್ರದರ್ಶಿತವಾಗುತ್ತದೆ. ರಾಮಾಯಣದ ಪ್ರಸಂಗಗಳ ಸಾದರೀಕರಣದ ಮಧ್ಯೆ ಮಧ್ಯೆ ತರತರದ 'ಧೊಂಗಾ' (ವೇಷ) ಗಳು ಪ್ರವೇಶಿಸಿ ಕುಣಿಯುವುದು ರಣಮಾಲೆ ಪ್ರಕಾರದ ವಿಶೇಷ. ಈ ಕಲಾ ಪ್ರಕಾರದಲ್ಲಿ ದೋಲು, ತಾಸೆ, ಸಮ್ಮೇಳ, ಕಂಸಾಳೆಗಳೊಂದಿಗೆ ಗುಮಟೆಯೂ ಒಂದು ವಾದ್ಯವಾಗಿ ಬಳಸಲ್ಪಡುತ್ತದೆ. ಗೋವಾದಲ್ಲಿ ಶಿಗ್ಮೊ (ಹೋಳಿ) ಸಂದರ್ಭ ಆಡುವ 'ಗೋಫ್' (ಜಡೆಕೋಲಾಟ) ಮತ್ತು ಕೋಲಾಟ ಗಳಲ್ಲೂ ಗುಮಟೆಯನ್ನು ಒಂದು ವಾದ್ಯವಾಗಿ ಉಪಯೋಗಿಸುತ್ತಾರೆ. ಹೋಳಿಹಬ್ಬದ ಸಂದರ್ಭ ಆಡುವ ಮೊರುಲೆ (ನವಿಲು ನೃತ್ಯ) ಸೊಮಯ್, ತಾಲ್ಗಡಿ ನೃತ್ಯ ಪ್ರಕಾರಗಳಲ್ಲೂ ಗುಮಟೆ ಉಪಯೋಗವಾಗುತ್ತದೆ. ಗೋವಾದ ಕ್ರಿಶ್ಚಿಯನ್ ಕುಡುಬಿ ಮಹಿಳೆಯರು ಕುಣಿಯುವ 'ಕುಡುಬಿ ನೃತ್ಯ' ದಲ್ಲೂ ಗುಮಟೆ ಉಪಯೋಗವಾಗುತ್ತದೆ. ಮಡ್ಗಾಂವ್‌ನಲ್ಲಿ 'ಅರ್ಲೆಂ' ಎಂಬ ಊರಿನಲ್ಲಿ ಕ್ರಿಶ್ಚಿಯನ್ ಗಾವ್ಡೆ ಪುರುಷರು 'ದಾಂಡ್ಲಾಂ ಖೆಳ್' (ಉದ್ದ ಕೋಲುಗಳ ನೃತ್ಯ) ಆಡುವಾಗ ಘುಂಜ್ ಮತ್ತು ಮದ್ದಳೆಗಳೊಂದಿಗೆ ಗುಮಟೆಯನ್ನೂ ಬಾರಿಸುತ್ತಾರೆ. ಫಾಲ್ಗುಣ ಮಾಸದಲ್ಲಿ ಗೋವಾದ 'ಚಾಂದೊರ್' ಎಂಬಲ್ಲಿ ಕಾರ್ನಿವಾಲ್ ಉತ್ಸವ ನಡೆಯುವಾಗ ಕ್ರಿಶ್ಚಿಯನ್ ಚಾರ್ಡೆ ಸಮುದಾಯದವರು 'ಮುಸಳಾಂ ಖೇಳ್' (ಮುಸಲ ನೃತ್ಯ) ಕುಣಿಯುವಾಗ ಇತರ ವಾದ್ಯಗಳೊಂದಿಗೆ ಗುಮಟೆಯನ್ನೂ ಬಾರಿಸುತ್ತಾರೆ. ಹಿಂದಿನ ಕಾಲದಲ್ಲಿ ಗೋವಾದ ಪ್ರಖ್ಯಾತ 'ಮಾಂಡೊ' ಎಂಬ ಸಂಗೀತನೃತ್ಯ ಸಂಸ್ಕೃತಿಯ ಕಲಾಪ್ರಕಾರದಲ್ಲಿ ಗುಮಟೆ ಪ್ರಮುಖ ಸಂಗೀತವಾದ್ಯವಾಗಿ ಸ್ಥಾನ ಪಡೆಯುತ್ತಿತ್ತು ಅಂತ ತಿಳಿದು ಬರುತ್ತದೆ.

ಇಷ್ಟೆಲ್ಲಾ ಕಲಾ ಪ್ರಕಾರಗಳಲ್ಲಿ ಗುಮಟೆಯನ್ನು ಸಂಗೀತವಾದ್ಯವಾಗಿ ಬಳಸುತ್ತಾರಾದರೂ,

ಗುಮಟೆಯ ಉಪಯೋಗ ಕೊಂಕಣಿ ಮಾತೃಭಾಷೆಯ ಸಮುದಾಯಗಳಲ್ಲಿ ಇದ್ದಷ್ಟು ಇತರ ಜನಾಂಗಗಳಲ್ಲಿ ಇಲ್ಲ ಎನ್ನುವುದು ಸ್ಪಷ್ಟ. ಆದುದರಿಂದಲೇ ಕೊಂಕಣಿ ಭಾಷೆಯ ನಂತರ 'ಗುಮಟೆ' ಯು ಕೊಂಕಣಿ ಸಂಸ್ಕೃತಿಯ ಒಂದು 'ಬಲಿಷ್ಟ ಸಂಕೇತ' ಅಂತ ಗೌರವ ಪಡೆದಿದೆ.

ಕುಡುಬಿ ಸಮುದಾಯದಲ್ಲಿ ಗುಮಟೆ :

ಅನಾದಿ ಕಾಲದಿಂದಲೂ ಗುಮಟೆಯನ್ನು ಉಪಯೋಗಿಸಿ ತನ್ನ ಸಂಸ್ಕೃತಿಯ ಧಾರ್ಮಿಕ ರೀತಿ ರಿವಾಜುಗಳಲ್ಲಿ ಗುಮಟೆಗೆ ಗೌರವದ ಸ್ಥಾನವನ್ನು ನೀಡಿದ ಕೊಂಕಣಿ ಮಾತೃಭಾಷೆಯ ಒಂದು ದೊಡ್ಡ ಸಮುದಾಯ ಕುಡುಬಿ ಜನಾಂಗ. ಕರಾವಳಿ ಪಟ್ಟಿಯಲ್ಲಿ ಕುಡುಬಿಯರು ಗುಮಟೆಗೆ, ಗುಮಟೆ ಹಾಡುಗಳಿಗೆ ಮತ್ತು ಗುಮಟೆ ನೃತ್ಯಕ್ಕೆ ತಮ್ಮ ಧಾರ್ಮಿಕ ವ್ಯವಸ್ಥೆಯಲ್ಲಿ ಪವಿತ್ರವಾದ ಸ್ಥಾನವನ್ನು ನೀಡಿದ್ದಾರೆ. ಈ ಕಲೆಯು ಕುಡುಬಿ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಉಳಿದುಕೊಂಡಿದೆ. ಮುಸ್ಲಿಂ ದಾಳಿಕೋರರ ಆಕ್ರಮಣ ಹಾಗೂ ಆಳ್ವಿಕೆಯ ಕಾಲದಲ್ಲಿ, ಆನಂತರ ಪೋರ್ಚುಗೀಸರ ಕಠಿಣ ದಬ್ಬಾಳಿಕೆಯ ಕಾಲದಲ್ಲಿ, ಇತರ ಧರ್ಮೀಯರು ಈ ಕಲೆಗೆ ಅಡಚಣೆ, ಅನಾದರಗಳನ್ನು ತಂದೊಡ್ಡಿದ ಸಂದರ್ಭಗಳಲ್ಲಿ, ತಾಂತ್ರಿಕ ನಗರ ನಾಗರೀಕತೆಯ ಆಧುನೀಕರಣದ ಪ್ರಭಾವಕ್ಕೆ ಒಳಗಾಗದೇ ಕುಡುಬಿಯರು, ಸ್ಥಿತ್ಯಂತರದಲ್ಲೂ ಸ್ಥಿತಪ್ರಜ್ಞರಾಗಿ ಪರಂಪರಾಗತವಾಗಿ ಈ ಗುಮಟೆ ಕಲೆಯ ವಿದ್ಯೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಕುಡುಬಿಯರು ಬಹಳ ನಿಷ್ಠೆ ಹಾಗೂ ಅಭಿಮಾನದಿಂದ ಆಚರಿಸಿಕೊಂಡು ಬರುತ್ತಿರುವ ಧಾರ್ಮಿಕ ಆಚರಣೆ 'ಹೋಳಿ'. ಈ ಹಬ್ಬಕ್ಕೆ ಗಮಟೆ ನೃತ್ಯ ಆಡಲೇಬೇಕೆಂಬ ನಿಯಮ ಖಡ್ಡಾಯವಾಗಿರುವುದರಿಂದ, ಗುಮಟೆ ಕುಣಿತ ತಮ್ಮ ಜಾತಿಯ ಪ್ರತಿಷ್ಠೆಗೆ ಕಡಿಮೆ ಎನ್ನುವ ಕೀಳರಿಮೆಯ ಭಾವನೆಗೆ ಒಳಗಾಗದುದರಿಂದ ಈ ಕಲೆಯು ಕುಡುಬಿ ಸಮಾಜದಲ್ಲಿ ಪರಂಪರಾಗತವಾಗಿ ಜೀವಂತವಾಗಿ ಉಳಿದುಕೊಂಡಿದೆ. ಕುಡುಬಿ ಜನಾಂಗದಲ್ಲಿ ಈ ಕಲೆಯು ಉಳಿದುಕೊಂಡಿರುವುದರಿಂದಲೇ ಇವರನ್ನು 'ಕುಡುಬಿಯರು' ಅಂತ ಗುರುತಿಸಲು ಸುಲಭಸಾಧ್ಯವಾಗಿದೆ. ಪ್ರಸ್ತುತ ಬಹುಶಃ ಕುಡುಬಿಯರಲ್ಲಿ ಇರುವಷ್ಟು ಗುಮಟೆಗಳು, ಗುಮಟೆ ಹಾಡುಗಳು ಹಾಗೂ ನೃತ್ಯ ವೈವಿಧ್ಯಗಳು ಇಂದಿನ ಸಮಾಜದಲ್ಲಿ ಇತರ ಯಾವುದೇ ಜಾತಿ ಯಾ ಪಂಗಡಗಳವರಲ್ಲಿ ಕಾಣಲು ಸಿಗುವುದಿಲ್ಲ ಎಂದರೆ ಅತಿಶಯವಾಗಲಿಕ್ಕಿಲ್ಲ.

ಗೋವಾದ ಮೂಲನಿವಾಸಿಗಳಾಗಿದ್ದ ಕುಡುಬಿಯರು ತಮ್ಮ ತಾಯ್ನೆಲ, ಮನೆಮಾರು, ಆಸ್ತಿ ಬದುಕು, ಎಲ್ಲವನ್ನು ಬಿಟ್ಟು ಇತರ ಪ್ರದೇಶಗಳಿಗೆ ದೇಶಾಂತರ ವಲಸೆ ಹೋಗಲು ಗುಮಟೆ ಕಲೆಗೆ ಅಡ್ಡಿಆತಂಕಗಳು ಏರ್ಪಟ್ಟಿರುವುದು ಖಚಿತ. ಸಾಮಾನ್ಯವಾಗಿ ಹೀಗೆ ವಲಸೆ ಬಂದಾಗ, ವಲಸೆ ಬಂದವರು ನೆಲೆನಿಂತು ಈ ಊರಿನವರೇ ಆಗಿಹೋಗುವಾಗ, ಆ ಊರಿನ ಈಗಾಗಲೇ ಬಲಿಷ್ಠವಾಗಿದ್ದ 'ಪ್ರಧಾನ ಸಂಸ್ಕೃತಿ' ಹೊಸತಾಗಿ ಬಂದ 'ಅಧೀನ ಸಂಸ್ಕೃತಿಯ' ಮೇಲೆ ಪ್ರಭಾವ ಬೀರುವುದು ಸಹಜ ಸ್ವಾಭಾವಿಕ. ಒಂದು ಜನಾಂಗವು ಬಹಳ ಕಾಲ

ಬೇರೊಂದು ಸಂಸ್ಕೃತಿಯ ಜನರೊಂದಿಗೆ ಸಾಮಾಜಿಕವಾಗಿ ಹೊಂದಿಕೊಂಡು ಬಾಳಬೇಕಾದ ಪರಿಸ್ಥಿತಿ ಬಂದೊದಗಿದಾಗ ಅನಿವಾರ್ಯವಾಗಿ ಹೊಸ ಸಂಸ್ಕೃತಿಯ ಸಂವರ್ಧನೆಯಾಗುತ್ತದೆ ಎಂಬುದಾಗಿ ಸಮಾಜಶಾಸ್ತ್ರ ಪಂಡಿತರು ಅಭಿಪ್ರಾಯ ಪಡುತ್ತಾರೆ. ಆದರೆ ಈ ರೀತಿಯ ಎಳ್ಳಷ್ಟು ಪ್ರಭಾವವೂ ತಮ್ಮ ಈ ಕಲಾ ಸಂಸ್ಕೃತಿಯ ಮೇಲೆ ಆಗದಿರುವಂತೆ ಕುಡುಬಿಯರು ಕಾಯ್ದುಕೊಂಡು ಬಂದಿರುವುದು ಕುಡುಬಿಯರ ಹೆಗ್ಗಳಿಕೆ.

ಕುಡುಬಿಯರು ತಮ್ಮ ಧಾರ್ಮಿಕ ಹಿನ್ನೆಲೆಯ ಜಾನಪದ ಕಲೆಗೆ ಗುಮಟೆಯನ್ನು ಉಪಯೋಗಿಸುವ ಹಬ್ಬ ಹೋಳಿ (ಫಾಲ್ಗುಣ ಪ್ರತಿಪದಾ). ಹೋಳಿಯ ಈ ಉತ್ಸವವು ಕೊನೆಗೊಳ್ಳುವ ಮಾಸ 'ಶಿಗ್ಮೊ ಮಾಸ್'. ಶಿವರಾತ್ರಿಯಿಂದ ಪ್ರಾರಂಭವಾಗಿ ಸಂವತ್ಸರ ಪಾಡ್ಯ ' (ಸಂವ್ಸಾರ್ ಪಾಡ್ವೊ = ಗುಡಿಪಾಡ್ವಾ = ಚಾಂದ್ರಮಾನ ಯುಗಾದಿ) ವರೆಗಿನ ಕಾಲ 'ಶಿಗ್ಮೊ ಮಾಸ್'. ಹಿಂದಿನ ವರ್ಷ ಚಾಂದ್ರಮಾನ ಯುಗಾದಿಯಂದು ತೆಗೆದಿರಿಸಿದ ಗುಮಟೆಗಳನ್ನು ಕಾರ್ತೀಕ ಏಕಾದಶಿ `(ತುಳಸೀ ಪೂಜೆ) ವರೆಗೆ ಉಪಯೋಗಿಸಲು ಸಮಾಜದ ಧಾರ್ಮಿಕ ನಿಯಮ ಪ್ರಕಾರ ನಿರ್ಬಂಧವಿದೆ. ವೈಚಾರಿಕ ದೃಷ್ಟಿಯಿಂದ ನೋಡಿದರೆ ದೈಹಿಕ ಶ್ರಮದ ಕೃಷಿ ಮಾಡಿ ಜೀವನ ಸಾಗಿಸುವ ಕುಡುಬಿಯರಿಗೆ ಯುಗಾದಿಯಿಂದ ಪ್ರಾರಂಭಿಸಿ ಶಿವರಾತ್ರಿ ಪರ್ಯಂತ ಕೃಷಿ ಸಂಬಂಧ ಕೆಲಸಗಳಿಂದಾಗಿ ಬಿಡುವು ಇಲ್ಲದಿರುವುದು, ಗುಮಟೆ ಕಲೆಗೆ ಗಮನ ಹರಿಸಿದರೆ ಅನ್ನಕೊಡುವ ಕೃಷಿ ಕಾಯಕಕ್ಕೆ ತೊಂದರೆಯಾಗುವುದು ಇದಕ್ಕೆ ಕಾರಣವಾಗಿರಬಹುದು. ತುಳಸೀ ಪೂಜೆಯ ನಂತರ ಬೆಳೆ ಕೊಯ್ಲು ಮುಗಿದು ಸ್ವಲ್ಪ ಬಿಡುವು ಸಿಗುವುದರಿಂದ, ಹಿಂದಿನ ವರ್ಷ ಮನೆಯ ಮಾಡಿಗೆ ಕಟ್ಟಿ ತೆಗೆದಿರಿಸಿದ ಗುಮಟೆಗಳನ್ನು ತುಳಸೀಪೂಜೆಯ ದಿನ ತೆಗೆಯಬಹುದು, ಯಾ ತೆಗೆಯಬೇಕೆಂಬ ಕಟ್ಟುಕಟ್ಟಳೆಯನ್ನು ಮಾಡಿಕೊಂಡು ಪಾಲಿಸುತ್ತಾ ಬಂದಿದ್ದಾರೆ. ಆ ದಿವಸ ಕುಟುಂಬಸ್ತರು, ನೆಂಟರಿಷ್ಟರು ಸೇರಿ, ದೇವರ ಸ್ಮರಣೆಗಾಗಿ 'ನೊಮೊನ್' (ಪ್ರಾರ್ಥನೆ, ನಮನ) ಹಾಡು ಹಾಡಿ, ಗುಮಟೆ ಬಾರಿಸಿ ನೃತ್ಯಾಭ್ಯಾಸಕ್ಕೆ ನಾಂದಿ ಹಾಡುತ್ತಾರೆ.

ತುಳಸೀಪೂಜೆಯ ನಂತರ ಶಿವರಾತ್ರಿವರೆಗೆ ಪ್ರತಿದಿನವೂ ಗುಮಟೆ ಕುಣಿತ ಮತ್ತು ಹಾಡುಗಳ ಅಭ್ಯಾಸ ಮಾಡಲು ಹಾಗೂ ಪರಿಣತಿ ಹೊಂದಲು, ಧಾರ್ಮಿಕ ರಿವಾಜು ಪ್ರಕಾರ ಅನುಮೋದನೆಯಿದೆ. ಈ ಅಭ್ಯಾಸ ಯಾ ಪರಿಣತಿ ಪಡೆಯುವ ಜಾಗ ವಾಡೆಯ (ಕೂಡುಕಟ್ಟಿನ) ಗುರಿಕಾರನ ಮನೆಯಂಗಳ ಅಥವಾ ಹತ್ತು ಸಮಸ್ತರು ಸೇರಿ ಹೋಳಿಯ ಕ್ರಮಬದ್ಧ ಆಚರಣೆಗಳು ಜರಗುವ ಜಾಗ 'ಮಾಂಡ್' ಹೊರತು ಪಡಿಸಿ, ಜಾತಿಯ ಕೂಡುಕಟ್ಟಿನ ಯಾವುದೇ ಮನೆಯ ಅಂಗಳವೇ ಆಗಿರಬಹುದು ಅಥವಾ ಗದ್ದೆ ಯಾ ಬಯಲು ಜಾಗವೂ ಆಗಬಹುದು, ಆದರೆ ಶಿವರಾತ್ರಿಯ ಅಮಾವಾಸ್ಯೆಯ ರಾತ್ರಿ 'ರಾಯಭಾರಿ' (ಒತ್ತು ಗುರಿಕಾರ) ಅಥವಾ 'ಮಾಂಡ್' ನಲ್ಲಿ ಕನಿಷ್ಠ ಮನೆಗೊಬ್ಬ ಪುರುಷರು ತಪ್ಪದೇ ಒಟ್ಟು ಸೇರಿ ಗುಮಟೆ ಆಡುವುದು ಸಂಪ್ರದಾಯ.

ಕುಡುಬಿಯರು 'ವಾಡೆ' (A Kudubi council or authority) ಎಂಬ

ಸಂಘಟನೆಗಳಲ್ಲಿ ವ್ಯವಸ್ಥಿತ ರೀತಿಯಲ್ಲಿ ಜೀವನ ನಡೆಸುತ್ತಾರೆ. ನಿರ್ದಿಷ್ಟ ಪ್ರಾದೇಶಿಕ ವ್ಯಾಪ್ತಿಯೊಳಗೆ ಸ್ವಜಾತಿಯ ವಿವಿಧ 'ಕುಳಿ' (ಬೆಡಗು, ಗೋತ್ರ) ಗಳಿಗೆ ಸೇರಿದ ಕುಡುಬಿಯರು ಒಂದೇ 'ಮಾಂಡ್' ನಲ್ಲಿ ಒಟ್ಟು ಸೇರಿ ಧಾರ್ಮಿಕ ಮುಖಂಡ 'ಗುರಿಕಾರನ' ಮುಂದಾಳ್ತನದಲ್ಲಿ, ತಮ್ಮ ಸಮುದಾಯದ ರೀತಿ ರಿವಾಜುಗಳನ್ನು ನಡೆಸಿಕೊಡು ಹೋಗುವ ಸಂಸ್ಥೆಗೆ 'ವಾಡೆ' ಎಂದು ಹೆಸರು. ಗುರಿಕಾರನ ಅನುಪಸ್ಥಿತಿಯಲ್ಲಿ ಆತನಿಗೆ ಸಹಾಯಕನಾಗಿ 'ರಾಯಭಾರಿ' ಅಥವಾ ಒತ್ತು ಗುರಿಕಾರ'ಯೂ ಸಮುದಾಯದ ಜನತೆಯಿಂದ ನೇಮಿಸಲ್ಪಟ್ಟ ಜವಾಬ್ದಾರಿಯ ವ್ಯಕ್ತಿ ರೀತಿ ರಿವಾಜುಗಳನ್ನು ನಡೆಸಿಕೊಂಡು ಹೋಗಲು ಅಧಿಕಾರಸ್ಥನಾಗಿರುತ್ತಾನೆ. ಗುರಿಕಾರ ಮತ್ತು ರಾಯಭಾರಿ ಭಿನ್ನ ಬೆಡಗುಗಳವರು ಆಗಿರುವುದರಿಂದ, ಹೊಲೆಸೂತಕಗಳು ಬಂದ ಸಂದರ್ಭದಲ್ಲಿ ಒಂದಿಲ್ಲೊಂದು ಬೆಡಗಿನ ವ್ಯಕ್ತಿ ಧಾರ್ಮಿಕ ಕಾರ್ಯ ಮತ್ತು ರೀತಿ ರಿವಾಜುಗಳನ್ನು ಬಾಕಿ ಇಡದೆ, ಕ್ರಮಪ್ರಕಾರ ನಡೆಸಿಕೊಂಡು ಬರಬೇಕು ಎಂಬ ಉದ್ದೇಶದಿಂದ ಈ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ.

ಕುಡುಬಿ ಸಮುದಾಯದಲ್ಲಿ ಗುಮಟೆ ಕಲೆಯನ್ನು ಹೊಂದಿದ ಎರಡು ದೊಡ್ಡ ಪಂಗಡಗಳೆಂದರೆ, 'ಕೊಡಿಯಾಲ್ ಕುಡುಬಿ' ಮತ್ತು ಗೊಂಯ್ಕಾರ್ ಕುಡುಬಿ' ಶಿವರಾತ್ರಿಯ ಅಮಾವಾಸ್ಯೆ ದಿವಸ ರಾತ್ರಿಗೆ ರಾಯಭಾರಿಯ ಮನೆಯಂಗಳದಲ್ಲಿ ಗುಮಟೆ ಕುಣಿತಕ್ಕೆ ಸೇರುವುದು (ವಾಡೆವಾರು ಆಚರಣಾ ಭೇದಗಳಿರಬಹುದು) ಕೊಡಿಯಾಲ್ ಕುಡುಬಿಯರು. ಹೀಗೆ ಅಲ್ಲಿ ಪ್ರಾರಂಭವಾದ ಗುಮಟೆ ನೃತ್ಯ, ಕೋಲಾಟದೊಂದಿಗೆ ಹೋಳಿಯ ಹಿಂದಿನ ದಿನದ (ತ್ರಯೋದಶಿ) ವರೆಗೆ ಅಲ್ಲಿಯೇ ಮುಂದುವರಿಯಬಹುದು. ಆದರೆ ಹೋಳಿಯ ದಿನ (ಚತುರ್ದಶಿ) ರಾತ್ರಿ ಗುರಿಕಾರನ ಅಂಗಳ ಅಥವಾ 'ಮಾಂಡ್' ನಲ್ಲಿ ವಾಡೆಯ ಎಲ್ಲಾ ಕಲಾಕಾರರೂ ಸೇರಿ ಗಮಟೆ ಬಾರಿಸಿ ಆಡುವುದು ಖಡ್ಡಾಯವಾಗಿದೆ. ಈ ಕ್ರಮಕ್ಕೆ 'ಮಾಂಡಾರ್ ಮೆಳ್ಚೆಂ' (ಮಾಂಡ್‌ನಲ್ಲಿ ಸೇರುವುದು) ಅನ್ನುತ್ತಾರೆ. ಈ ರೀತಿ ಹೋಳಿ ಹುಣ್ಣಿಮೆಯಿಂದ ಮುಂದಿನ ಅಮಾವಾಸ್ಯೆವರೆಗೆ ಆಚರಿಸಲ್ಪಡುವ ಹೋಳಿ ಉತ್ಸವವು ಗೋವಾದಲ್ಲಿ 'ವ್ಹಡ್ಲೊ ಶಿಗ್ಮೊ' ಅಂತ ಪ್ರಸಿದ್ಧ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಕಾರ್ಕಳ, ಬಂಟ್ವಾಳ ತಾಲೂಕುಗಳಲ್ಲಿರುವ ಸುಮಾರು 25 ವಾಡೆಗಳಿಗೆ 'ಕೊಂಪದವು' ಊರಿನಲ್ಲಿರುವ ವಾಡೆಯೇ ಒಂದನೇ ಸ್ಥಾನದ ಗೌರವವನ್ನು ಹೊಂದಿದ ವಾಡೆ. ಈ ವಾಢೆಯ ಗುರಿಕಾರನಿಗೆ, ಬಾರಾ ವಾಡ್ಯಾಂಚೊ ಗುರ್ಕಾರ್, (ಹನ್ನೆರಡು ವಾಡೆಗಳ ಗುರಿಕಾರ) ಎಂಬ ಹೆಸರು ಇದೆ. ಕೊಂಪದವು ವಾಡೆಯಲ್ಲಿ ಮಾತ್ರ ಹೋಳಿ (ಫಾಲ್ಗುಣ ಪ್ರತಿಪದಾ) ಯಂದು ಮುಂಜಾನೆ ಸೂರ್ಯೋದಯಕ್ಕೆ ಸರಿಯಾಗಿ ಕಂಗು (Arecanut tree - Areca Catechu) ಸುಟ್ಟು ಕಾಮದಹನದ ಕ್ರಮವನ್ನು ಜರಗಿಸುತ್ತಾರೆ. ಗೋವಾದ ಹಲವು ಊರುಗಳಲ್ಲಿ ಈ ರೀತಿ ಕಂಗುಸುಟ್ಟು ಮಾಡುವ ಕಾಮದಹನದ ಕ್ರಮವನ್ನು ಸಾರ್ವತ್ರಿಕವಾಗಿ ಆಚರಿಸುತ್ತಾರೆ. ಕಂಗು ಕಡಿಯುವಾಗ ಗುಮಟೆ

ಬಾರಿಸಿ 'ನೊಮೊನ್' ಎಂಬ ಪ್ರಾರ್ಥನಾಗೀತೆ ಹಾಡುವುದು, ಕಂಗು ಸುಟ್ಟು ಆದ ನಂತರ ಅದರ ಸುತ್ತ ಗುಮಟೆ ಬಾರಿಸಿ ಕುಣಿಯುವುದು ಹಿಂದಿನಿಂದ ಪಾಲಿಸಿಕೊಂಡು ಬಂದ ಸಂಪ್ರದಾಯ. ಈ ಆಚರಣೆಯ ಸಂದರ್ಭ ಎಲ್ಲಾ ವಾಡೆಗಳ ಕೊಡಿಯಾಲ್ ಕುಡುಬಿ ಜನ ಸೇರುತ್ತಾರೆ. ಆ ದಿವಸ ಹೋಳಿ ಹುಣ್ಣಿಮೆಯದು. ಹೋಳಿಯ ದಿವಸ ಆಯಾಯ 'ಮಾಂಡ್' ನಲ್ಲಿ ಸೇರಲು ಅನನುಕೂಲವಾದವರೂ ಹುಣ್ಣಿಮೆ ರಾತ್ರಿ ತಂತಮ್ಮ ಮಾಂಡ್‌ನಲ್ಲಿ ತಪ್ಪದೇ ಸೇರುತ್ತಾರೆ. ಇದು ಕೊಡಿಯಾಲ್ ಕುಡುಬಿಯರಲ್ಲಿ ಮಾತ್ರ ಕಂಡು ಬರುವ ಆಚರಣೆ. ಹುಣ್ಣಿಮೆಯ ರಾತ್ರಿ ಹೊರಟ ಗುಮಟೆ ಮೇಳವು ಐದು ದಿನ ವಾಡೆಯ ಪ್ರತಿಯೊಂದು ಮನೆಗೆ ಭೇಟಿ ನೀಡಿ ಗುಮಟೆ ಮತ್ತು ಕೋಲಾಟ ಆಡುವುದು ರೂಢಿಯಲ್ಲಿದೆ. ಗುಮಟೆ ನೃತ್ಯದೊಂದಿಗೆ ಕೋಲಾಟವನ್ನೂ ಆಡುತ್ತಾರಾದರೂ ಗುಮಟೆಗೇ ಪ್ರಾಧಾನ್ಯ ಹೆಚ್ಚು. ಐದನೇ ದಿವಸ ಮೇಳವು ಮಾಂಡ್‌ಗೆ ಹಿಂದಿರುಗುತ್ತದೆ. ಅದು ಆಚರಣೆಯ ಕೊನೆಯ ದಿನ

ಮೇಳವು (Dance troupe) ಮಾಂಡ್ ಪ್ರವೇಶಿಸುವಾಗಲಾಗಲೀ, ನೊಮೊನ್ ಹಾಡುವಾಗಲಾಗಲೀ ಅಥವಾ ದೇವರನ್ನು 'ಹೊರಾಂವ್ಚೆಂ' 'ಹೊಗಳ್ಸುಂಚೆಂ' (ಸ್ತುತಿಸುವುದು) ಈ ಸಂದರ್ಭಗಳಲ್ಲಿ ಗುಮಟೆ ಬಾರಿಸುವುದೇ ಸಂಪ್ರದಾಯ. ಮೇಳವು ಹೊರಟು ಊರಿನಲ್ಲಿ ತಿರುಗುವಾಗ ದೇವಸ್ಥಾನ, ದೈವಸ್ಥಾನ, ಬಸದಿ ಅಥವಾ ಗುತ್ತಿನ ಮನೆಗೆ ಗೌರವ ಸಲ್ಲಿಸಲು ಗುಮಟೆಯಲ್ಲೆ 'ಥಾಗ್' ಎಂಬ ಹಾಡನ್ನು ಹಾಡುವುದು ಕ್ರಮ. ಈ ಆಚರಣೆಗಳು ಗುಮಟೆ ನುಡಿಸುವುದರ ವಿನಃ ಜರಗುವುದಿಲ್ಲ. ಕೊನೆಯ ರಾತ್ರಿ ಮಂಗಳ ಹಾಡುವ ಆಚರಣೆ ಇಡೀ ರಾತ್ರಿ ಜರುಗತ್ತದೆ. ಗುಮಟೆ ನೃತ್ಯದಲ್ಲಿ ದೇವರನ್ನು ಹೊಗಳುವುದು (ಹೊಗೊಳ್ಸುಚೆಂ, ಹೊರಾಂವ್ಚೆ) ಕೊನೆಯ ಕಾರ್ಯಕ್ರಮ. ಇದಕ್ಕೆ 'ದಂಡವತ್ ಘಾಲ್ಚೆಂ' (ಮಾಂಡ್ ಮೊಡ್ಚೆಂ) ಅಂತಲೂ ಹೇಳುತ್ತಾರೆ. ಈ ಕಾರ್ಯಕ್ರಮದ ನಂತರ ಗುಮಟೆ ಬಾರಿಸುವುದು ಕಟ್ಟುನಿಟ್ಟಾಗಿ ನಿಷೇಧಿಸಲ್ಪಟಿದೆ. ದೇವರನ್ನು ಹೊಗಳುತ್ತಾ ಗುಮಟೆ ಬಾರಿಸುವಾಗ ನೇಮಿಸಲ್ಪಟ್ಟ 'ಘಡೊ' (ದೇವಿಪಾತ್ರಿ) ದೇವಿಯ ಆವೇಶಭರಿತನಾಗಿ ವಾಡೆಯ ಜನರಿಗೆ ಅಭಯದಾನ ನೀಡುತ್ತಾನೆ. ನಂತರ ಗುಮಟೆಗಳಿಗೆ ಪೂಜೆ ನಡೆಯುತ್ತದೆ. ತೆಂಗಿನ ಕಾಯಿ ಒಡೆದು, ಅದರ ನೀರನ್ನು ಮಾಂಡ್‌ಮೇಲೆ ಚುಮುಕಿಸಿ, ಒಡೆದ ತೆಂಗಿನಕಾಯಿ ಹೋಳುಗಳನ್ನು ಗುಮಟೆಗಳ ಮುಂದಿರಿಸಿ, ಆರತಿ ಬೆಳಗಿ ಪೂಜಿಸುವ ಈ ಕ್ರಮಕ್ಕೆ 'ಥಳ್ ಥಂಡ್ ಕರ್ಚೆಂ' ಅನ್ನುತ್ತಾರೆ.

ಗೊಂಯ್ಕಾರ್ ಕುಡುಬಿಯರು ತುಳಸೀ ಪೂಜೆಯ ದಿವಸವೇ ಗುಮಟೆಗಳನ್ನು ತೆಗೆದು ಅಭ್ಯಾಸದಲ್ಲಿ ನಿರತರಾಗುತ್ತಾರೆ. ಆದರೆ ಇವರ ಅಭ್ಯಾಸವನ್ನು ಶಿವರಾತ್ರಿ ಅಮಾವಾಸ್ಯೆಯ ಮೊದಲು ಬರುವ ನವಮಿ ಪರ್ಯಂತ ನಡೆಸಬಹುದು. ಇವರು ದಶಮಿಯ ರಾತ್ರಿ 'ಮಾಂಡ್' ನಲ್ಲಿ ಸೇರಿ ಏಕಾದಶಿಯಂದು ಗುಮಟೆ ಮೇಳ ಹೊರಹೊರಟು ಐದು ದಿವಸ ವಾಡೆಯ ಹಾಗೂ ಊರಿನ ಪ್ರತಿಷ್ಠಿತ ಮನೆಗಳಲ್ಲಿ ಆಡಿ, ಹುಣ್ಣಿಮೆಯ ರಾತ್ರಿ ಕೊನೆಗೊಳಿಸುತ್ತಾರೆ. ಈ ರೀತಿ ಹೋಳಿ ಹುಣ್ಣಿಮೆಯ ಮುಂಚಿನ ಐದನೇ ದಿನದಿಂದ ಪ್ರಾರಂಭಿಸಿ ಹುಣ್ಣಿಮೆಯಂದು

ಕೊನೆಗೊಳ್ಳುವ ಹೋಳಿ ಉತ್ಸವಕ್ಕೆ ಗೋವಾದಲ್ಲಿ 'ಧಾಕ್ಟೊ ಶಿಗ್ಮೊ' ಎನ್ನುತ್ತಾರೆ.

ಈ ಆಚರಣೆಯನ್ನು ಕೊನೆಗೊಳಿಸಲು 'ಶಿಗ್ಮೊ' ಮಾಸದ ಅಮಾವಾಸ್ಯೆವರೆಗೆ ಮಾತ್ರ ವಾಯಿದೆ. ಅಮಾವಾಸ್ಯೆ ಕಳೆದರೆ ಆ ವರ್ಷದ ಮಟ್ಟಿಗೆ ಪುನಃ ಈ ಉತ್ಸವವನ್ನು ಆಚರಿಸುವಂತಿಲ್ಲ. ಯುಗಾದಿಯಂದು ಗುಮಟೆಗಳನ್ನು ತೆಗೆದಿರಿಸಿದರೆ, ಮುಂದಿನ ತುಳಸೀ ಪೂಜೆವರೆಗೆ ಗುಮಟೆಗಳನ್ನು ಬಳಸುವಂತಿಲ್ಲ. ಹಾಡು ಕುಣಿತಗಳಿಗೂ ಕಟ್ಟುನಿಟ್ಟಾಗಿ ಅವಕಾಶವಿಲ್ಲ. ಎಲ್ಲಾ ಧಾರ್ಮಿಕ ಆಚರಣೆಗಳಂತೆ ಕುಡುಬಿಯರ ಹೋಳಿಯ ಆಚರಣೆಯೂ ಕೆಲವು ವಿಧಿ ನಿಷೇಧಗಳಿಗೆ ಒಳಪಟ್ಟಿದೆ.

ಇವರ ಕಲಾವಿದರು ತಮ್ಮದೇ ಆದ ವಿಶೇಷ ರೀತಿಯಲ್ಲಿ ಶೃಂಗರಿಸಿಕೊಳ್ಳುತ್ತಾರೆ. ತಲೆಗೆ ದೊಡ್ಡ ರುಮಾಲು. ರುಮಾಲು, ಮುಚ್ಚುವಂತೆ ಮುಡಿದು ಸೊಂಟ ಮಟ್ಟಕ್ಕೆ ಇಳಿಬಿಟ್ಟ 'ಕನಕಾಂಬರ' (ಅಬ್ಬಲಿಗೆ- Unarmed orange nail dye = crossandra undulaefolia) ಹೂವಿನ ಮಾಲೆಗಳು, ರುಮಾಲಿನ ಮುಂಭಾಗದಲ್ಲಿ ಹಣೆಯ ಅಂಚುಗಳಲ್ಲಿ ಕಿವಿಯವರೆಗೆ ಮತ್ತು ಬೈತಲೆಗೆ 'ಸುರಗಿ' (Alexandrian Laurel = mammea suriga), 'ರಂಜೆ' (west indian medler = mimusops elengi), 'ಮಲ್ಲಿಗೆ' (Jasmine = Jasminum Pubescens), ಹೂವುಗಳ ದಂಡೆ, ತುರಾಯಿ, 'ಇಡೀ ಅಂಗಿ' (ನಿಲುವಂಗಿ) ಧರಿಸಿ ಅದರ ಮೇಲ್ಗಡೆ ರಂಗಿನ ಪಟ್ಟೆ ಕತ್ತರಿ ಶಾಲು, ಸೊಂಟಕ್ಕೆ ಸೊಂಟಪಟ್ಟಿಯ ಮೇಲ್ಗಡೆ ಬೆಳ್ಳಿಯ ನೇವಳ, ಕಚ್ಚೆ ಬಿಗಿದು ಕಾಲ್ಗಳಿಗೆ ಗೆಜ್ಜೆ ಕಟ್ಟಿ, ತೋಳಿಗೆ ಇಳಿಬಿಟ್ಟ ಗುಮಟೆ - ಇವಿಷ್ಟು ಅವರ ವೇಷಭೂಷಣಗಳು. ಕೆಲವು ವಾಡೆಗಳಲ್ಲಿ ಇಡೀ ಅಂಗಿಯ ಬದಲಿಗೆ 'ಸೊಗೊ' (ಘಾಗ್ರೊ)ಎಂಬ ಯಕ್ಷಗಾನದಲ್ಲಿ ಬಳಕೆಯಾಗುವಂತಹ ರೂಪದ ತೊಡುಗೆಯನ್ನು ಧರಿಸುವುದೂ ವಾಡಿಕೆಯಲ್ಲುಂಟು (ಉದಾ : ಮೂಡಬಿದಿರೆ ಹತ್ತಿರದ ಪುತ್ತಿಗೆ ಶಕ್ತಿಪುರ, ಪುತ್ತಿಗೆ ಪದವು, ಮರಕಡ ಮೈಂದೇರಿ ವಾಡೆಗಳು) ಈ ರೀತಿಯ ತೊಡುಗೆ ಮರಾಠಿಗರಲ್ಲಿ ಹೆಚ್ಚಾಗಿ ಕಾಣಬಹುದು. ಗೊಂಯ್ಕಾರ್ ಕುಡುಬಿಯರು ರುಮಾಲಿನ ಮೇಲ್ಗಡೆ, ಹಣೆಯ ಮಧ್ಯ ಭಾಗದಲ್ಲಿ ' ಮೊದ್ಣಿ' (ಹಟ್ಟಿಮುದ್ದ = The indian paradise = terpsiphone paradise) ಎಂಬ ಹಕ್ಕಿಯ ಬಾಲದ ಗರಿಗಳನ್ನು ಗೊಂಡೆಯ ತುರಾಯಿಯಂತೆ ಧರಿಸುತ್ತಾರೆ.

ಗುಮಟೆ ನೃತ್ಯ ಪುರುಷರು ಮಾತ್ರ ಆಡುವ ನೃತ್ಯ. ಮಹಿಳೆಯರಿಗೆ ಗುಮಟೆ ನೃತ್ಯಕ್ಕೆ ಅವಕಾಶವಿಲ್ಲ. ಮಹಿಳೆಯರ ದೈಹಿಕ ಪ್ರಕೃತಿ ಈ ನೃತ್ಯಕ್ಕೆ ಅನುಕೂಲವಲ್ಲದುದರಿಂದ ಸ್ತ್ರೀಯರಿಗಿಂತ ಹೆಚ್ಚು ತಾಕತ್ತುಳ್ಳ ಗಂಡಸರು ಮಾತ್ರ ಗುಮಟೆ ಆಡುವುದು ರೂಢಿಯಾಗಿ ಹೋಗಿದೆ. ಹೋಳಿ ಹಬ್ಬಕ್ಕೆ ಈ ಕಲೆಯನ್ನು ಬಲ್ಲ ಪ್ರತಿಯೊಬ್ಬ ಕುಡುಬಿ ಪುರುಷನೂ ಆಡಬೇಕೆಂಬ ನಿಯಮವನ್ನು ಪಾಲಿಸಿಕೊಂಡು ಬಂದಿರುವುದರಿಂದ, ಚಿಕ್ಕ ಪ್ರಾಯದ

ಹುಡುಗರಿಂದ ಹಿಡಿದು ನಡೆದಾಡಲು ಶಕ್ತರಾದ ಮುದುಕರವರೆಗೆ ಈ ಕಲೆಯನ್ನು ಅಭ್ಯಾಸ ಮಾಡುತ್ತಾರೆ ಮತ್ತು ಹೋಳಿಯ ಉತ್ಸವದಲ್ಲಿ ಆಡುತ್ತಾರೆ. ಕುಡುಬಿಯರು ಉಡುಪಿ ಜಿಲ್ಲೆಯ ಗೋಳಿ ಅಂಗಡಿಯಲ್ಲಿ 22.-03-2005 ರಲ್ಲಿ ಹೋಳಿ ಸಮಾವೇಶ ಮತ್ತು ಕಲಾಪ್ರದರ್ಶನವನ್ನು ಬೃಹತ್ ರೀತಿಯಲ್ಲಿ ಆಯೋಜಿಸಿದ್ದರು. ಈ ಸಮಾವೇಶದಲ್ಲಿ ಸುಮಾರು 1000 ಕುಡುಬಿ ಗುಮಟೆ ನೃತ್ಯ ಕಲಾವಿದರು ಆಡಿದ್ದರು. ಮತ್ತು ಈ ಕಲಾವಿದರು ಉಡುಪಿ ಹಾಗೂ ಕುಂದಾಪುರ ತಾಲೂಕುಗಳವರು ಮಾತ್ರ ಆಗಿದ್ದರು. ಇಲ್ಲಿ ಒಂದೊಂದು ವಾಡೆಯಲ್ಲೂ ನೂರಕ್ಕೂ ಮೇಲ್ಪಟ್ಟು ಗುಮಟೆಗಳಿವೆ. ಕುಡುಬಿಯರ ಜಾನಪದದ ಇತಿಹಾಸದಲ್ಲಿ ಇದೊಂದು ಹೆಮ್ಮೆಯ ಚಾರಿತ್ರಿಕ ದಾಖಲೆಯ ಮೈಲುಗಲ್ಲಾಗಿ ಉಳಿಯುತ್ತದೆ. ಕುಡುಬಿಯರಲ್ಲಿ ಗುಮಟೆಗೆ ಎಷ್ಟು ಪ್ರಾಧಾನ್ಯತೆಯಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಗುಮಟೆ ಮೇಳ ಊರಿನಲ್ಲಿ ಆಡಲು ಹೊರಟರೆ ಪ್ರಥಮವಾಗಿ ಆಯಾಯ ಊರುಗಳ ದೇವಸ್ಥಾನ, ದೈವಸ್ಥಾನಗಳ ಎದುರು ಸೇವಾರೂಪದಲ್ಲಿ ಆಡಬೇಕು. ಹಾಗೇ, ಊರಿನ ಕೆಲವು ನಿರ್ದಿಷ್ಟ ಜಾಗಗಳಲ್ಲಿ, ಪ್ರತಿಷ್ಠಿತ ಮನೆಗಳಲ್ಲಿ ಆ ಮನೆಯವರು ಕರೆಯಲಿ ಕರೆಯದಿರಲಿ, ಗೌರವಾರ್ಥವಾಗಿ ಗುಮಟೆ ನೃತ್ಯವಾಡುವುದು ಸಂಪ್ರದಾಯ. ಹೆಚ್ಚಾಗಿ ಗುಮಟೆ ಮೇಳದವರನ್ನು ಆಮಂತ್ರಿಸಿಯೇ ಆಡಿಸುತ್ತಾರೆ. ಹೀಗೆ ಆಡುವುದರಿಂದ ಆಡಿದ ಮನೆಯ ಕಷ್ಟಸಂಕಷ್ಟಗಳು ಪರಿಹಾರವಾಗಿ ಸುಖ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆಯಿದೆ. ಆಡಿದ ಮನೆಗಳಲ್ಲಿ ಮೇಳದವರಿಗೆ 'ತಳಿಗೆ' (ಅಕ್ಕಿ , ತೆಂಗಿನಕಾಯಿ, ಬೆಲ್ಲ, ವೀಳ್ಯ) ಮತ್ತು ಆರ್ಥಿಕ ರೂಪದಲ್ಲಿ ಗೌರವ ಧನ ಕಾಣಿಕೆಯಾಗಿ ನೀಡುತ್ತಾರೆ. ಈ ದಾನರೂಪದ ವಸ್ತು ಮತ್ತು ಹಣವು ಹೋಳಿಯ ಕೊನೆಯ ದಿವಸದ ಧಾರ್ಮಿಕ ಕಾರ್ಯಗಳಿಗೆ ಮತ್ತು ವಾಡೆಯ ಸಾಮೂಹಿಕ ಭೋಜನದ ಖರ್ಚುಗಳಿಗೆ ವ್ಯಯಿಸಲ್ಪಡುತ್ತದೆ.

ವಾಡೆಯೊಳಗಿನ ಕುಡುಬಿಯರ ಮನೆಗಳಲ್ಲಿ ಮೇಳದವರು ತಪ್ಪದೇ ಆಡಲೇ ಬೇಕು. ಮೇಳದವರನ್ನು ಕೈಮುಗಿದು, ಕಾಲುತೊಳೆದು ಸ್ವಾಗತಿಸಿ ಅಂಗಳದಲ್ಲಿ ಜಾಪೆ ಹಾಕಿ ಕೂರಿಸಿ ಬೆಲ್ಲ ನೀರು, ಕವಳ (ಎಲೆಅಡಿಕೆ) ನೀಡಿ ಉಪಚರಿಸುತ್ತಾರೆ. ಗುಮಟೆ ಆಡಲು ಪ್ರಾರಂಭಿಸಿದಾಗ ಮೇಳದವರಿಗೆ ಅಕ್ಕಿ, ತೆಂಗಿನಕಾಯಿ ಗಂಧ, ವೀಳ್ಯ, ಕಾಣಿಕೆ, ಹೂವಿನ ಮಾಲೆಗಳು ಮತ್ತು ಬಿಳಿಯ ಗೋಸಂಪಗೆ ಹೂಗಳಿಂದ ಗೌರವ ನೀಡುತ್ತಾರೆ. ಖಡ್ಡಾಯವಾಗಿ ಪಾಲಿಸುವ ಈ ಕ್ರಮಕ್ಕೆ 'ತಳಿ ಕರ್ಚೆಂ' (ತಳಿಗೆ ಮಾಡುವುದು) ಅಂತ ಹೆಸರು. ಕೊಡಿಯಾಲ್ ಕುಡುಬಿಯರಲ್ಲಿ ಮನೆಯ ಯಜಮಾನ ಹಾಗೂ ಗೊಂಯ್ಕಾರ್ ಕುಡುಬಿಯರಲ್ಲಿ ಮನೆಯಜಮಾನ್ತಿ ತಳಿಗೆ ಮಾಡುವುದು ರೂಢಿಯಲ್ಲಿದೆ ಕಷ್ಟ ಕೋಟಲೆಗಳು ಬಂದಾಗ ಪರಿಹಾರಾರ್ಥವಾಗಿ, ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ವಾಡೆಯ 'ಹತ್ತು ಸಮಸ್ತರಿಗೆ ಭೋಜನ ನೀಡುತ್ತೇನೆ' ಅಂತ ಹರಕೆ ಹೇಳಿಕೊಳ್ಳುವುದು ಕುಡುಬಿಯರಲ್ಲಿ ಸರ್ವಸಾಮಾನ್ಯ ವಾಡಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಗುಮಟೆ ಮತ್ತು ಗುಮಟೆ ನೃತ್ಯಕ್ಕೆ ಹೆಚ್ಚು ಪ್ರಾಧಾನ್ಯತೆ.

ಗುಮಟೆ ನೃತ್ಯಕಾರರು ಕುಣಿಯುತ್ತಿರುವಾಗ, ಆ ಮನೆಯ ಚಿಕ್ಕಮಕ್ಕಳನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಕುಣಿಯುವ ಕ್ರಮವಿದೆ. ಹೀಗೆ ಆಡುವುದರಿಂದ ಮಗುವಿನ ಆರೋಗ್ಯ ಸುಧಾರಿಸುತ್ತದೆ, ಪ್ರೇತಬಾಧೆ, ಕೆಟ್ಟಶಕ್ತಿಯ ದೃಷ್ಟಿ, ವಾಮಾಚಾರದ ಪರಿಣಾಮಗಳು ಆಗುವುದಿಲ್ಲ ಎಂದು ನಂಬುತ್ತಾರೆ. ಸಾಮಾನ್ಯವಾಗಿ ಗುರುತು ಪರಿಚಯವಿಲ್ಲದ ಅಪರಿಚಿತರನ್ನು ಅಥವಾ ಅಸ್ವಾಭಾವಿಕ ತೊಡುಗೆಗಳಲ್ಲಿ ಇರುವವರನ್ನು ಕಂಡ ತಕ್ಷಣ ಚಿಕ್ಕಮಕ್ಕಳು ಸಹಜವಾಗಿ ಹೆದರಿಕೊಳ್ಳುತ್ತವೆ. ಇಂತಹ ಮಕ್ಕಳ ಅಂಜಿಕೆ ನಿವಾರಣೆ ಇದರ ಮುಖ್ಯ ಉದ್ದೇಶವಿರಬೇಕು. ಹೀಗೆ, ಗುಮಟೆ ನೃತ್ಯದಲ್ಲಿ ಮಕ್ಕಳನ್ನು ಹೆಗಲ ಮೇಲೆ ಕೂರಿಸಿಕೊಂಡು ಆಡುವ ನೃತ್ಯಕ್ಕೆ ಉಡುಪಿ ತಾಲೂಕಿನ ಕೆಲವು ಪ್ರದೇಶಗಳಲ್ಲಿ ವಿಶೇಷ ಪ್ರಾಶಸ್ತ್ಯ ನೀಡುತ್ತಿದ್ದಾರೆ.

ತಾವೇ ಸೃಷ್ಟಿ ಮಾಡಿದ ಕಲೆಯಾದರೂ ಆ ಕಲಾಸೃಷ್ಟಿಗೆ ದೇವರ ಅನುಗ್ರಹವೇ ಕಾರಣ ಅಂತ ನಂಬುವ ಜನಾಂಗ ಕುಡುಬಿ. ನಂಬಿಕೆ ಆಚರಣೆಗಳೇ ನಮ್ಮ ಜನಪದ ಬದುಕಿನ ಜೀವಾಳ. ಅವು ಜನಪದರ ದೈನಂದಿನ ಜೀವನದೊಂದಿಗೆ ಹಾಸು ಹೊಕ್ಕಾಗಿ ಬಂದ ಮೌಲ್ಯಗಳು. ಜನಪದ ಬದುಕು ನಿಂತಿರುವುದೇ ಈ ನಂಬಿಕೆ, ಆಚರಣೆಗಳ ಅಡಿಪಾಯದ ಮೇಲೆ ತನ್ನ ಆರಾಧ್ಯ ದೈವಕ್ಕೆ ಮೂರ್ತರೂಪ ನೀಡಿ ಆ ಮೂರ್ತಿಯನ್ನು ಅಲಂಕರಿಸಿ, ಫಲ ಪುಷ್ಪ , ಜಲ, ಆಹಾರ, ಪಾನೀಯ ಸಮರ್ಪಿಸಿ, ಧೂಪ ದೀಪಾರತಿ ಬೆಳಗಿ ಗಂಧ ಕುಂಕುಮಗಳಿಂದ ಅರ್ಚಿಸಿ ಸ್ತುತಿಸುವ ಪದ್ಧತಿಯೊಂದಾದರೆ, ತಾನು ಆರಾಧಿಸುವ ದೈವಕ್ಕೆ ಒಂದು ರೂಪವನ್ನು ಕಲ್ಪಿಸಿ ಅದಕ್ಕನುಗುಣವಾಗಿ ವೇಷಭೂಷಣಗಳನ್ನು ತೊಟ್ಟು ಆಭರಣಗಳನ್ನು ಧರಿಸಿ ದೈವವನ್ನು ಶರೀರದಲ್ಲಿ ಆವಾಹನೆ ಮಾಡಿ, ತಾನೇ ದೈವಮಾಧ್ಯಮ ವ್ಯಕ್ತಿಯಾಗಿ ಆರಾಧಿಸಲ್ಪಡುವುದು ಇನ್ನೊಂದು ಆರಾಧನಾ ವಿಧಾನ. ಕುಡುಬಿಯರು ಗುಮಟೆಗಳಲ್ಲಿ ಆದಿಶಕ್ತಿ ಮಹಾದೇವಿಯ ಸಾನಿಧ್ಯ ಪ್ರತಿಷ್ಠಾಪಿಸಿ ಆರಾಧಿಸುವುದು ಒಂದು ಪದ್ಧತಿ. ಇನ್ನೊಂದು ಪದ್ಧತಿಯಲ್ಲಿ, ಕೋಡಿಯಾಲ್ ಕುಡುಬಿಯರು ತಮ್ಮಲ್ಲೆ ಒಬ್ಬ ಪರಿಣತ ಕಲಾಕಾರ ಬ್ರಹ್ಮಚಾರಿ ಬಾಲಕನನ್ನು ಆರಿಸಿ, ಮೇಳ ಹೊರಡುವ ಸಂದರ್ಭದಲ್ಲಿ 'ಭಾಂಗಾರ್ ಕಾಪಡ್' (ಭಂಗಾರ ಪಟ್ಟೆ ಸೀರೆ) ಕೊಟ್ಟು ಸಾಂಕೇತಿಕ ರೀತಿಯಲ್ಲಿ ಆದಿಶಕ್ತಿಯ ರೂಪದಲ್ಲಿ ಆತನನ್ನು ಶೃಂಗರಿಸುತ್ತಾರೆ. ಆತನು ಕೊನೆಯ ದಿವಸದ ಆಚರಣೆವರೆಗೂ ಶುದ್ಧಾಚಾರಗಳನ್ನು ಪಾಲಿಸುತ್ತಾ, ಸ್ನಾನಾದಿಗಳನ್ನು ಮಾಡಿ ದಿನಕ್ಕೊಂದು ಬಾರಿ ಮಧ್ಯಾಹ್ನ ಮಾತ್ರ ಊಟ ಮಾಡಬೇಕು. ಹತ್ತು ಸಮಸ್ತರಿಗೆ ಹರಕೆಯ ಅನ್ನದಾನ ಇದ್ದಲ್ಲಿ ಈತನಿಗೆ ವಿಶೇಷ ಸ್ಥಾನಮಾನವಿದೆ. ಈ ತರದ ಆಚರಣೆಗೆ 'ಮಾಯಿಕ್ ಫುಲಾಂ ಮಾಳ್ಚೆಂ' (ದೇವಿಗೆ ಹೂ ಮುಡಿಸುವುದು) ಅನ್ನುತ್ತಾರೆ. ನೃತ್ಯಕಾರರು ಗುಮಟೆ ಆಡುವಾಗ ಆತನೂ ಅವರೊಟ್ಟಿಗೆ ಕುಣಿಯಬೇಕು. ಇದರಿಂದ ದೇವಿಯೇ ತಮ್ಮೊಂದಿಗೆ ಭಾಗವಹಿಸಿರುವ ದೈವೀಕ ಅನುಭವವನ್ನು ಕಲಾಕಾರರು ಹೊಂದುತ್ತಾರೆ. ಇಂತಹ ಆಚರಣೆ ಶಿಗ್ಮೋತ್ಸವ ಸಂದರ್ಭದಲ್ಲಿ ಗೋವಾದಲ್ಲಿಯೂ ಕಂಡುಬರುತ್ತದೆ. ಈ ಹರಕೆಯುನ್ನು ಇತರ ಸಮಾಜದವರೂ

ಹೇಳಿಕೊಳ್ಳುವುದಿದೆ. ಈ ಹರಕೆಯಿಂದ ಪ್ರಾಮುಖ್ಯವಾಗಿ ಸಂತಾನಭಾಗ್ಯವಿಲ್ಲದವರಿಗೆ ಮಕ್ಕಳಾಗುತ್ತದೆ, ಕಷ್ಟ ಸಂಕಷ್ಟಗಳು ಪರಿಹಾರವಾಗಿ ಸುಖಲಭಿಸುತ್ತದೆ ಎಂಬ ನಂಬಿಕೆಯಿದೆ.

ಗುಮಟೆ ಮೇಳವು ಹೊರಟನಂತರ, ಕೊನೆಯ ದಿವಸದವರೆಗೆ ನೃತ್ಯಕಾರ ಶುದ್ಧಾಚರಣೆಯಲ್ಲಿರಬೇಕು. ಮೀನು ಮಾಂಸ ಸೇವನೆ, ಸ್ತ್ರೀ ಸಂಪರ್ಕ, ಹೊಲೆ ಸೂತಕ ಇದ್ದವರ ಸಹವಾಸ - ಇಂತಹ ಲೌಕಿಕ ಸುಖಭೋಗಗಳಿಂದ ದೂರವಿರಬೇಕು. ವಾಡೆಯ ಯಾವುದೇ ಮನೆಯಲ್ಲಿ ಇತರ ಯಾವುದೇ ಶುಭಕಾರ್ಯ, ಹಬ್ಬ, ಪೂಜೆ, ವಿವಾಹ, ಪ್ರಸ್ತ, ಶೋಭನ, ನಿಶೇಕಶಾಸ್ತ್ರ ಮುಂತಾದವುಗಳ ಆಚರಣೆ ನಿಷಿದ್ಧ. ಕುಟುಂಬದಲ್ಲಿ ಹೊಲೆಸೂತಕಗಳು ಬಂದಲ್ಲಿ ನೃತ್ಯಕಾರನಿಗೆ ಅವುಗಳು ಅನ್ವಯವಾಗುವುದಿಲ್ಲ. ನೃತ್ಯಕಾರನಿಗೆ ಅಸೌಖ್ಯವಾದರೂ ಔಷಧೋಪಚಾರ ಮಾಡುವ ಕ್ರಮವಿಲ್ಲ. ಜನನ ಮರಣಗಳು ಸಂಭವಿಸಿದಾಗಲೂ ಅದರ ಹೊಲೆ ನೃತ್ಯಕಾರನಿಗೆ ತಟ್ಟುವುದಿಲ್ಲ.

ಗೊಂಯ್ಕಾರ್ ಕುಡುಬಿಯರಲ್ಲಿ ಗುಮಟೆ ಮೇಳ ಹೊರಡುವ ಮುಂಚಿನ ದಿವಸ ಪನ್ನೆ (ಕೂದಲು, ಗಡ್ಡ ಮೀಸೆ ಬೋಳಿಸುವುದು) ಮಾಡಿಕೊಂಡರೆ, ಹೋಳಿಯ ಮಂಗಳದ ದಿನದವರೆಗೆ ಪುನಃ ಪನ್ನೆ ಮಾಡಿಕೊಳ್ಳಲಿಕ್ಕಿಲ್ಲ. ಕಾಲುಗಳಿಗೆ ಚಪ್ಪಲಿ ಧರಿಸುವಂತಿಲ್ಲ. ಆ ಐದು ದಿವಸಗಳಲ್ಲಿ ಸ್ನಾನಾದಿಗಳನ್ನು ಮಾಡುವಂತಿಲ್ಲ. ಮುಡಿದ ಹೂವುಗಳನ್ನು ಬದಲಾಯಿಸುವಂತಿಲ್ಲ. ಐದು ದಿನ ಮೊದಲು ಮನಬಿಟ್ಟರೆ, ಐದು ದಿನಗಳವರೆಗೆ ಪುನಃ ಮನೆಯೊಳಗೆ ಹೋಗುವಂತಿಲ್ಲ. ಐದು ದಿನವೂ ಆಡುತ್ತಲೇ ಇರಬೇಕು. ಒಂದು ವಾಡೆಗೆ ಸೇರಿದ ಕಲಾಕಾರ ಆ ವಾಡೆಯಲ್ಲಿ ಮಾತ್ರ ಆಡಬೇಕು, ಇರಬೇಕು. ವಾಡೆಯಲ್ಲಿ ಮರಣ ಸಂಭವಿಸಿದಲ್ಲಿ ಕಲಾಕಾರರಿಗೆ ಸುದ್ದಿ ಮುಟ್ಟಿಸಲಿಕ್ಕಿಲ್ಲ. ಮರಣದ ಸುದ್ಧಿ ಸಿಕ್ಕಿದರೂ ಅಂತ್ಯ ಸಂಸ್ಕಾರಕ್ಕೆ ಕಲಾಕಾರನು ಹೋಗಬೇಕಾಗಿಲ್ಲ.

ಸಾಮಾನ್ಯವಾಗಿ ಜನಪದ ಸಮುದಾಯಗಳಲ್ಲಿ ಮನೋರಂಜನೆಗಾಗಿ ಸೃಷ್ಟಿಯಾಗುವ ಆಚರಣಾತ್ಮಕ ಕಲೆಗಳು ಧಾರ್ಮಿಕ ಲೇಪನ ಪಡೆದುಕೊಳ್ಳುವುದನ್ನು ಸ್ವಾಭಾವಿಕವಾಗಿ ಕಾಣಬಹುದು. ನೃತ್ಯ, ಸಂಗೀತ, ಸಾಹಿತ್ಯದಂತಹ ಸಂಗತಿಗಳಲ್ಲಿ ಮಿಳಿತವಾದ ಕುಡುಬಿಯರ ಗುಮಟೆ ನೃತ್ಯ ಧಾರ್ಮಿಕ ಚೌಕಟ್ಟಿನೊಳಗೆ ತನ್ನ ಅಸ್ತಿತ್ವವನ್ನು ಸಂಭಾಳಿಸಿಕೊಂಡು ಬಂದಿರುವುದು ನಿಜಕ್ಕು ಮಹತ್ವದ್ದು. ಗುಮಟೆ ನೃತ್ಯದಲ್ಲಿ ಮನೋರಂಜನೆ ಮಾತ್ರವಲ್ಲ, ಮನೋರಂಜನೆಗೆ ಪೂರಕವಾದ ಆಚರಣೆಯಲ್ಲಿ ಬಂದಿರುವ ಗುಮಟೆ ಪೂಜೆಯಲ್ಲಿ ಒಂದು ನಂಬಿಕೆ ಮಿಳಿತವಾಗಿರುವುದರಿಂದ ಧಾರ್ಮಿಕ ಆಚರಣೆ ರೂಪುಗೊಂಡಿರುವುದು ವ್ಯಕ್ತವಾಗುತ್ತದೆ. ಈ ಆಚರಣೆಯನ್ನು ಬಾಕಿ ಮಾಡಿದರೆ ಕಷ್ಟ ನಷ್ಟಗಳಿಗೆ ಒಳಗಾಗುತ್ತೇವೆ ಅಂತ ಕುಡುಬಿಯರು ಬಲವಾಗಿ ನಂಬುತ್ತಾರೆ. ಆದುದರಿಂದ ಎಂತಹ ಕಠಿಣ ಸಮಸ್ಯೆಗಳು ಎದುರಾದರೂ ಪ್ರತಿವರ್ಷ ತಪ್ಪದೇ ಈ ಗುಮಟೆ ನೃತ್ಯವನ್ನು ಆಡುತ್ತಾರೆ.

ನೃತ್ಯದಲ್ಲಿ ದೈಹಿಕ ಚಲನವಲನಗಳು ಸೀಮಿತವಾದರೂ, ಗುಮಟೆ ನೃತ್ಯಕಾರ ಗುಮಟೆಯ ತಾಳಕ್ಕೆ ಸರಿಯಾಗಿ ಕುಣಿಯುತ್ತಾನೆ. ಇಲ್ಲಿ - ಹಾಡಿನ ಲಯ, ಗುಮಟೆಯ ತಾಳ ಮತ್ತು ನೃತ್ಯದ ಹೆಜ್ಜೆಗಾರಿಕೆಗಳು ಒಂದಕ್ಕೊಂದು ಪೂರಕವಾಗಿ ಒಂದು ರೀತಿಯ ಅವಿನಾಭಾವ ಸಂಬಂಧ ಸೃಷ್ಟಿಯಾಗುತ್ತದೆ. ಗುಮಟೆ ನೃತ್ಯ ನೇರ ಸಾಲುಕಟ್ಟಿ, ಎದುರೆದುರು ನಿಂತು, ವರ್ತುಲಾಕಾರದಲ್ಲಿ, ಏಕಪಾದದಲ್ಲಿ, ಒಂದೂವರೆ ಕಾಲಿನಲ್ಲಿ, ಗಿರ್ಗಿಟ್ಟಿಯಂತೆ, ಪ್ರದಕ್ಷಿಣ ಅಪ್ರದಕ್ಷಿಣವಾಗಿ ತಿರುಗಿ, ಕುಳಿತು ಎದ್ದು, ಒಬ್ಬನಿಗೊಬ್ಬ ಸುತ್ತು ಬಳಸಿ, ಮುಂದೆ ಹಾರಿ, ಹಿಂದಿ ತಿರುಗಿ, ಮೊಣಕಾಲೂರಿ,ತಲೆಯಲ್ಲಾಡಿಸಿ - ವಿವಿಧ ರೀತಿಗಳಲ್ಲಿ ಆಕರ್ಷಕವಾಗಿ ಕುಣಿಯುತ್ತಾರೆ. ಇದರೊಂದಿಗೆ ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳಿಂದ ಮಾತ್ರವಲ್ಲ, ಸಾಮಾಜಿಕ, ಇತಿಹಾಸಿಕ, ವಿನೋದಿತ, ವ್ಯಕ್ತಿಗೀತೆ, ವಿಧಿಗೀತೆ, ಶ್ರಮಗೀತೆ, ಶಿಶುಗೀತೆ, ಋತುಗಾನ, ಸಂಸ್ಕಾರಗೀತೆ, ಉತ್ಸವಗೀತೆ, ವಿವಾಹ ಗೀತೆ, ಲಾವಣಿಗೀತೆ, ಪ್ರೇಮಗೀತೆ, ವಿಳಾಪ ಗೀತೆಗಳಿಂದ ಕೂಡಿದ ಹಾಡುಗಳನ್ನು ಕೊಂಕಣಿಯಲ್ಲಿ ಹಾಡುತ್ತಾರೆ. ಈ ಹಾಡುಗಳಲ್ಲಿ ಶೃಂಗಾರ, ಪ್ರಣಯ, ಭಾವಾವೇಶ, ಸುಖ ದುಃಖ, ಆಚಾರ ವಿಚಾರ, ಕೋಪ ತಾಪ, ವ್ಯವಹಾರ, ಜಾನಪದ ಘಟನೆಗಳ ಸಂಗತಿಗಳಿಂದ ಕೂಡಿ ಲೋಕಾನುಭವದ ಕಣಜವೇ ಆಗಿರುತ್ತದೆ. ಗುಮಟೆ ನೃತ್ಯದ ಪ್ರಾರಂಭ, ವಿಸ್ತರಣೆ ಮತ್ತು ಮುಕ್ತಾಯಗಳಿಗೆ ನಿರ್ದಿಷ್ಟ ನಿಯಮಾವಳಿಗಳಿವೆ. ಹಾಡಿನ ಪ್ರಾರಂಭ, ಮಧ್ಯ ಅಥವಾ ಕೊನೆಯಲ್ಲಿ ಗಾ, ಗೇ, ಓ, ಯಾ, ಹೋ, ರೇ.. ಇತ್ಯಾದಿ ಉದ್ಗಾರದ ಧ್ವನಿ ತೆಗೆಯುವುದು ತಾಳಕ್ಕೆ, ನರ್ತನಕ್ಕೆ ಮತ್ತು ಹಾಡಿಗೆ ಪೂರಕವಾಗಲು ಹಾಗೂ ಈ ಶಬ್ದಗಳು ಹಾಡಿಗೆ, ಕಲಾಕಾರನಿಗೆ, ಒಟ್ಟಾರೆಯಾಗಿ ಕಲೆಗೆ ಗೌರವ ಸೂಚಕವಾಗಿ ಬಳಕೆಯಾಗುತ್ತವೆ. ಆಯಾಯ ಕುಣಿತಗಳಿಗೆ ಸರಿಯಾಗಿ ಹಾಡುಗಳ ವೇಗ, ತಾಳದ ಭಾರ ವ್ಯತ್ಯಾಸವಾಗುತ್ತದೆ. ಒಂದೇ ಹಾಡನ್ನು ಬೇರೆ ಬೇರೆ ಕುಣಿತಗಳಿಗೆ ಉಪಯೋಗ ಮಾಡಲು ಆಗುವುದಿಲ್ಲ. ಕುಡುಬಿಯರ ಈ ಗುಮಟೆ ವಾದನ, ನರ್ತನ ಮತ್ತು ಹಾಡುಗಳಲ್ಲಿ ಪ್ರಾದೇಶಿಕ ಪ್ರಾತಿನಿಧಿತ ವೈವಿಧ್ಯತೆಗಳಿರಬಹುದು. ಆದರೆ ಪ್ರಮುಖವಾಗಿ ಲಳಿತ್, ಉಡ್ತೆಂ, ತೆಂಗೆಂ, ಥಾಗ್, ಸಮ್ಡಿಗಾಂ, ನೊಮೊನ್ - ಹೀಗೆ ವಿವಿಧ ಪ್ರಕಾರಗಳಿವೆ. ಇದರ ವಿವರ ಈ ಕೆಳಗಿನಂತೆ ಕೊಡಬಹುದು.

ಲಳಿತ್ :

ಗ ಯಮುಚೆಂ ನೋಮೊನ್ ಸೂರುಯಾ ವಂಶೇ । ರಾಮು ಜೊಲುಮೊಲೊ ಕೌಸಲ್ಯಾ ಕೂಸೇ

ಗ ನಾರೇ ಸುಮಿತ್ರೇಚಾ ಕೋಸೇ ದೇವು । ಲಗ್‌ಸಿಮೀನ್ ಜೊಲುಮೊಲಾ

ಗ ದೇವೇ ಕೈಕೇಚಾ ಊದರ,। ಭರೋತು ಶರತು ಬೊಲುಮೊಲ್ಯಾ

ಗ ರಾಯಾ ದೊಸೊರೊಂತಲೇ ಕುಳೇ । ಸೂಗು ವೀರ್ ಪುತುರು ಜೊಲುಮೊಲ್ಯಾ

ಗ ವರತಾಂ ಆಯಿಕೊನಿಯಾ....

ಗ ವರತಾಂ ಆಯಿಕೋನಿ ಸಗ್ಳೇಕಾ ರುಷಿ ದೇವುಗಾ ಆನಂದಾಲ್ಯಾ

ಗ ತೇತ್ತೀಸ್ ಕೊಟೇ ಓ.....

ಗ ತ್ರೇತ್ತೀಸ್ ಕೋಟೇರೆ ದೇವಾಗಣ | ರಾಮಾಲ್ಯಾ ಭರ್ಷಾಕ್ ಯಾಲ್ಯಾ

ಗ ರಾಮನ್ ಭಾವೆಂ ಓ.....

ಗ ರಾಮನ್ ಭಾವೆಂ ಪೂಜೆಲ್ಯಾ ವುಯಿರ್ ಭೇಟೊಂ ಯಾಲೆಗಾ ದೊಸೊರೊಂತಾ

ಗ ದಯಿತ್ಯಾ ವೊಧೇವೊಯಾ.....

ಗ ದಯಿತ್ಯಾಂ ವೊಧೇವೊಯಂ ಕಾರಣ್ | ಜೊಲುಮೊ ಯಾಲೊಬಾ ನಾರಾಯಣ್

ಈ ಹಾಡು 'ಲಳಿತ್' ಪ್ರಕಾರಕ್ಕೆ ಉದಾಹರಣೆ. 'ಲಳಿತ್' ನಲ್ಲಿ ಮುಖ್ಯ ಘಟನೆ ವಿವರಿಸಲ್ಪಡುತ್ತದೆ. ಹಾಡು ನಿಧಾನಗತಿಯಲ್ಲಿ ಸಾಗಿ ತಾಳವೂ ನಿಧಾನವಾಗಿರುತ್ತದೆ. ಹಾಡಿಗೆ ತಕ್ಕಂತೆ ಕುಣಿತವೂ ನಿಧಾನವೇ ಆಗಿರುತ್ತದೆ. ಮಧ್ಯೆ ಬರುವ ಅರ್ಧ ಚರಣಕ್ಕೆ 'ಕೀರ್ತನ್' ಅನ್ನುತ್ತಾರೆ. 'ಕೀರ್ತನ್' ವಾದನ ಆಗುವಾಗ ತಾಳದ ಪೆಟ್ಟುಗಳು 'ಲಳಿತ್' ಗಿಂತ ವೇಗವಾಗಿ ಬಾರಿಸಲ್ಪಡುತ್ತವೆ ಮತ್ತು ವಾದನದ ಪೆಟ್ಟುಗಳು 'ಲಳಿತ್'ನ ತಾಳಕ್ಕಿಂತ ಭಿನ್ನವಾಗಿರುತ್ತವೆ. ಈ ಸಂದರ್ಭದ ಕುಣಿತವೂ ತಿರುಗುವಿಕೆಯ ರೂಪ ಪಡೆದು ವೇಗವಾದ ಚಲನೆಯೊಂದಿಗೆ ನಾಲ್ಕೈದು ಬಾರಿ ಬುಗರಿಯಂತೆ ತಿರುಗುತ್ತಾರೆ. ಹಾಡಿನಲ್ಲಿಯು ಘಟನೆಯನ್ನು ಮುಂದುವರಿಸಿಕೊಂಡು ಹೋಗಲು ಕಲ್ಪಿಸಿದ ಇದೊಂದು ಅವಕಾಶ. ಮೇಲಿನ 'ಲಳಿತ್' ಹಾಡಿನಲ್ಲಿ ರಾಮಾಯಣದ, ದಶರಥ ಚಕ್ರವರ್ತಿಗೆ ಶ್ರೀ ರಾಮ ಸಹಿತ ನಾಲ್ಕು ಜನ ಮಕ್ಕಳು ಜನಿಸುವ ಸಂದರ್ಭದ್ದಾಗಿದೆ. ಈ ಘಟನೆಗೆ ಪೂರ್ಣವಿರಾಮ ನೀಡಬೇಕಾದರೆ 'ಉಡ್ತೆಂ' ಹಾಡನ್ನು ಹಾಡಬೇಕು. 'ಲಳಿತ್'ನಲ್ಲಿ ವಿವರಿಸಲ್ಪಟ್ಟ ಮುಖ್ಯ ಘಟನೆಯ ಉತ್ತರಾರ್ಧವೇ ಉಡ್ತೆಂ.

'ಉಡ್ತೆಂ'ಯ ಚರಣಗಳು 'ಲಳಿತ್' ಗಿಂತ ಹ್ರಸ್ವವಾಗಿದ್ದು ಇದರ ಹಾಡುಗಾರಿಕೆ ಮತ್ತು ಕುಣಿತಕ್ಕೆ ಕಡಿಮೆ ಸಮಯ ಸಾಕಾಗುತ್ತದೆ. ಇದರ ತಾಳಗಳು ಹ್ರಸ್ವ ವೇಗದವಾಗಿದ್ದುದರಿಂದ ಕುಣಿತದ ಹೆಜ್ಜೆಗಳೂ ಚುರುಕುತನದ್ದಾಗಿರುತ್ತವೆ. 'ಲಳಿತ್' ನಲ್ಲಿ ಕಥೆಯ ಘಟನೆಗೆ ಹೆಚ್ಚಿನ ಮಹತ್ವವಾದರೆ 'ಉಡ್ತೆಂ'ಯಲ್ಲಿ ಕುಣಿತಕ್ಕೆ ಪ್ರಾಮುಖ್ಯತೆ ಹೆಚ್ಚು. ಲಳಿತ್ ಹಾಗೂ ಉಡ್ತೆಂ - ಎರಡೂ ಹಾಡುಗಳು ನೇರ ಸಾಲುಗಳಲ್ಲಿ ನಿಂತು ಕುಣಿಯುವ ಗುಮಟೆ ನೃತ್ಯದ ಪ್ರಕಾರಗಳು. ಕೆಳಗೆ ಕಾಣಿಸಿದ ಹಾಡು ಮೇಲೆ ವಿವರಿಸಿದ 'ಲಳಿತ್' ಹಾಡಿನ 'ಉಡ್ತೆಂ.'

ರಾಮು ಜೊಲುಮೊಲೊ ಅಯೋಧ್ಯೆಯ ನಗಾರಾ... (2)

ದಯಿತ್ಯಾಂ ವಧೇಯೇಚಾ ರಾಮು ಜೊಲುಮೋಯಾಲೊ... (2)

ತೆಂಗೆಂ : ಈಶ್ವರಾಚ್ಯಾ ಹಾತಿಂತಲೆಂ ಸಂಧಾನ್ ಸೂಟಲಾಂ | ಸಂಧಾನ್ ಸೂಟಲಾಂ

ಸಿರ್ ಭಾಯ್ರ್ ಸೇಸ್‌ಲಾಂಬಾ ಗನೇಸಾಚೆಂ | ಸ್ವಾಮಿ

ಸಿರ್ ಭಾಯ್ರ್ ಸ್ಸೇಸ್‌ಲಾಂ ಗನೇಸಾಚೆಂ

ಇದು ಎರಡೇ ಚರಣದ ಹಾಡಾದರೂ ಸ್ವಲ್ಪದರಲ್ಲೆ ಒಂದು ಘಟನೆಯನ್ನು ವಿವರಿಸುತ್ತದೆ. ಸಂದರ್ಭ ಶಿವಪುರಾಣದ್ದು. ಶಿವನು ಗೌರೀಪುತ್ರ ವಿನಾಯಕನ ಶಿರಚ್ಛೇದ ಮಾಡಿದ ಸಂದರ್ಭದ್ದು. 'ತೆಂಗೆಂ' ಹಾಡು 'ಉಡ್ತೆಂ' ಗಿಂತಲೂ ವೇಗಗತಿಯಲ್ಲಿ ಹಾಡುವ ಹಾಡು. ತಾಳಕ್ಕೆ ತಕ್ಕ ಕುಣಿತ ಮತ್ತು ತಿರುಗುವ ಸುತ್ತುವಿಕೆಗಳು ಹೆಚ್ಚು ಮತ್ತು ತೀವ್ರ ವೇಗಗತಿಗಳನ್ನು ಹೊಂದಿರುತ್ತದೆ. ಈ ಪ್ರಕಾರದಲ್ಲೂ ಕುಣಿತಕ್ಕೇ ಹೆಚ್ಚಿನ ಪ್ರಾಮುಖ್ಯತೆಯಿದ್ದು ನೇರ ಸಾಲುಕಟ್ಟಿ ಕುಣಿಯುವಂಥಾದ್ದಾಗಿದೆ. ನೃತ್ಯದ ನೋಟ ಲಳಿತ್ ಮತ್ತು ಉಡ್ತೆಂ ಗಳಿಗಿಂತ ಆಕರ್ಷಕವಾಗಿರುತ್ತದೆ.

ಥಾಗ್ :

ದೇವುಳಾ ಭೊವುಂತ್ಯೇ ಪ್ರದಕ್ಷಿಣಂ ಯಾತೇ... (2)

ಕಳ್ಯಾ ನೀಳ್ಯಾ ವುಸ್ತುರಾಂಚೊ ವೊಳ್‌ಳ್ಯೋ ವಾತೀ... (2)

ಥಳಾಚ್ಯಾ ದೇವಾಂಚ್ಯಾ ಫುಡಾಂ ಜೊಳುತ್ಯೋ ವಾತೀ... (2)

ಈ ಹಾಡು, ತಾಳ ಮತ್ತು ಕುಣಿತ, ಮೇಲೆ ವಿವರಿಸಿದ 'ಉಡ್ತೆಂ' ಯದ್ದೇ ಇನ್ನೊಂದು ರೂಪ. ಆದರೆ, ಎಲ್ಲಾ ಸ್ಥಳಗಳಲ್ಲಿ ಹಾಗೂ ಸಂದರ್ಭಗಳಲ್ಲಿ ಈ ಹಾಡನ್ನು ಹಾಡುವಂತಿಲ್ಲ. ನಿಶ್ಚಿತ ಕೆಲವು ಸ್ಥಳಗಳಲ್ಲಿ, ದೇವಸ್ಥಾನ - ದೈವಸ್ಥಾನಗಳ ಮುಂದುಗಡೆ, 'ಮಾಂಡ್'ನಲ್ಲಿ ದೇವರನ್ನು ಸ್ತುತಿಸುವಾಗ ಮಾತ್ರ ಹಾಡಬೇಕಾಗದುದು. 'ಗುಮಟೆ' ಯ ಉಪಯೋಗದ ಪ್ರಕಾರಗಳಲ್ಲಿ 'ಥಾಗ್' ಆಧ್ಯಾತ್ಮಿಕ ಭಾವನೆಯ ಲೇಪನವನ್ನು ಪಡೆದಂತಹ ಒಂದು ಪ್ರಕಾರ.

ಸಮ್ಡಿಗಾಂ :

ಯಾದಿಂರೆ ನೊಮೊನ್ ಯೆಂತ್‌ರಂಗಾ, | ನಾಮಾಗೆಚ್ಯಾ ದೇವಾಂದೊ (2)

ಜಳ್‌ಮೆಳೆ ವಯ್ರ್ ಯಾಲೊ ಸೂರ್ಯು | ದಾಲೊ ರೊಂಗು ಮಾಳಾರೇ (2)

ಸಮ್ಜಿಗಾಂ ವ್ಹಾಜವ್ನ್ ದಯಿತ್ಯಾಂ ಮಾರೇ | ಯಾದಿಂರೆ ನೊಮನ್ ಗನೇಸಾ (2)

ಗನೇಸಾಚ್ಯೊ ದಾಲ್ಯಾ ರಾನಿಯೊ | ಶಿಗ್‌ಮೊ ಖೆಳೊಂ ಮಾಟ್ವಾ ಥಳೇ (2)

ಸೂಗಿ ಆಯೊ ಸೂಗಿ ಬಾಯೊ, | ಸೇಸ್ ಭೊರುಲ್ಯೊ ಪಾಂಯ್‌ಂದಾನೀ (2)

ಈ ಹಾಡು ಗಣಪತಿಯನ್ನು ಸ್ತುತಿಸಿ ಹಾಡುವ ಹಾಡು. ಸಾಮಾನ್ಯವಾಗಿ ಒಂದು ಹಂತದಲ್ಲಿ ಗುಮಟೆ ನೃತ್ಯವನ್ನು ಅಂತ್ಯಗೊಳಿಸಿ, ಕೋಲಾಟ ಪ್ರಾರಂಭಕ್ಕೆ ಮುಂಚಿತವಾಗಿ ಆಡುತ್ತಾರೆ. ಗುಮಟೆ ನೃತ್ಯಕಾರರು ಮಧ್ಯೆ ಒಂದು ತೆಂಗಿನಕಾಯಿ ಅಥವಾ ದೀಪವಿಟ್ಟು, ಸುತ್ತ ತನ್ನ 'ಘಡೊ' (ಜೊತೆ ನೃತ್ಯಕಾರ) ಸಂಗಾತಿಯೊಂದಿಗೆ ನಿಲ್ಲುತ್ತಾರೆ. ಹೀಗೆ ಆಡುವಾಗ ವರ್ತುಲಾಕಾರದಲ್ಲಿ ನಿಲ್ಲುತ್ತಾರೆ. ಪ್ರಾರಂಭದಲ್ಲಿ ಕೈ ಮುಗಿದು, ದೇವರನ್ನು ನೆನೆದು ಸಾವಕಾಶವಾಗಿ ಹಾಡಲು ಮತ್ತು ಹೆಜ್ಜೆ ಹಾಕಲು ಪ್ರಾರಂಭಿಸುತ್ತಾರೆ. ನಿಧಾನಗತಿಯಲ್ಲಿ ಹಾಡು ಮುಗಿದ ನಂತರ ಉತ್ತರಾರ್ಧದ ಎರಡು ಚರಣಗಳನ್ನು ಮಾತ್ರಾ ಹಾಡುತ್ತಾ ಪುನಃ ಎತ್ತುಗಡೆ ಮಾಡುತ್ತಾ, ತನ್ನ 'ಘಡೊ' ಸಂಗಾತಿಯನ್ನು ಹಿಂದಕ್ಕೆ ಬಿಟ್ಟುಕೊಂಡು ಆಡುತ್ತಾ ಆಡುತ್ತಾ ಕುಣಿತದ ರೀತಿ, ಹಾಡಿನ ವೇಗ ತೀವ್ರಗತಿಯನ್ನು ಪಡೆಯುತ್ತದೆ. ಭಕ್ತಿಗೆ ಹೆಚ್ಚಿನ ಪ್ರಾಧಾನ್ಯತೆಯಿರುವ ಈ ಪ್ರಕಾರದಲ್ಲಿ ಕಲಾಕಾರರು ತೆಂಗಿನಕಾಯಿ, ದೀಪ ಹಾಗೂ ಹಾಡು ನೃತ್ಯಗಳಲ್ಲಿ ದೈವೀಕ ಸಾಕ್ಷಾತ್ಕಾರದ ಅನುಭವವನ್ನು ಹೊಂದುತ್ತಾರೆ.

ನೊಮೊನ್ :

ಗ ಪ್ರಥಮ್ ನೊಮೊನ್ ಭೂಮಿಗೇ | ಮಾಯೇ, | ತೂಝ್ಯಾ ಧರಿನ್ ಚರಣ್ ಪಾಯೇ

ಗ ಶಿಗ್‌ಮೊ ಮಾಸ್ ಓ....

ಗ ಶಿಗ್‌ಮೊ ಮಾಸ್ ಆನೊಂದು ದಾಲಾ, | ಸೋಭಾಗೇ ಖೇಳುರೆ ಖೇಳು ದೇಂವಾಲಾ

ಗ ಖೇಳೇ ಯಾಲೇ ಓ..

ಗ ಖೇಳೇಯಾಲೇ ತೂಮಚಾ ಸಯಾಂ, | ಖೇಳೇಯಾಂ ನಿರೂಪ್ ಯೇಕ್ ದಿಯಾಂ

ಗ ಖೇಳೆಯಾಂ ನಿರೂಪ್ ಯೇಕ್ ದಿಯಾಂ | ಆನೊಂದು ಶಿಗ್‌ಮೊ ಖೇಳ್‌ಯಾಂ

ಗುಮಟೆ ನೃತ್ಯ ಪ್ರಾರಂಭ ಮಾಡುವ ಮೊದಲು 'ಲಳಿತ್' ರೂಪದಲ್ಲಿರುವ ಈ ಹಾಡನ್ನು ಹಾಡಲಾಗುತ್ತದೆ. ಪ್ರಕೃತಿಯನ್ನೆ ಆರಾಧಿಸುವ ಕುಡುಬಿಯರು ಈ ಹಾಡಿನ ಮೂಲಕ ಭೂದೇವಿಯನ್ನು ಸ್ಮರಿಸಿ, ವಂದಿಸಿ, ಹಾಡಿ ಹೊಗಳುತ್ತಾರೆ. ತಾನೇ ಕಲಿತು ಅಭ್ಯಸಿಸಿ ರೂಢಿ ಮಾಡಿಕೊಂಡ ಕಲೆಯಾದರೂ ಇದಕ್ಕೆ ಮಾನವನ ಅಸ್ತಿತ್ವವನ್ನು ನಿಯಂತ್ರಿಸುವ ಪ್ರಕೃತಿಯ ಅವ್ಯಕ್ತ ಶಕ್ತಿಯೇ ಕಾರಣ ಅಂತ ನಂಬುವ ಕುಡುಬಿಯರು ಭೂಮಿ ತಾಯಿಗೆ ಈ ಮೂಲಕ ಪ್ರಥಮ ಗೌರವ ಸಲ್ಲಿಸುತ್ತಾರೆ.

ಮೇಲೆ ವಿವರಿಸಿದ ಗುಮಟೆ ಹಾಡುಗಳ ನೃತ್ಯಗಳ ಪ್ರಕಾರಗಳು ಮಂಗಳೂರು, ಕಾರ್ಕಳ ಮತ್ತು ಬಂಟ್ವಾಳ ಪರಿಸರದಲ್ಲಿ ಕಂಡುಬರುವ ಕೆಲವು ಉದಾಹರಣೆಗಳು ಮಾತ್ರಾ. ಬೇರೆ ಬೇರೆ ಸಂದರ್ಭಗಳಲ್ಲಿ, ಪ್ರದೇಶಗಳಲ್ಲಿ, ವಿವಿಧ ಮಾಡೆಗಳಲ್ಲಿ, ಹಾಡು ಹಾಗೂ ಕುಣಿತಗಳ

ವೈವಿಧ್ಯತೆಗಳಿವೆ. ಪ್ರತಿಯೊಂದು ಹಾಡಿನ ಭಾವಾವೇಶದ ಪ್ರಕಾರ, ಹಾಡುಗಳಲ್ಲಿ ವ್ಯಕ್ತವಾಗುವ ಘಟನಾವಳಿಗಳಿಗೆ ಸರಿಯಾಗಿ ಗುಮಟೆಯ ತಾಳ ಹಾಗೂ ನೃತ್ಯಗಾರಿಕೆಯ ಸೊಬಗು ಕೂಡಾ ಬದಲಾಗುತ್ತದೆ.

ಗುಮಟೆ ನೃತ್ಯ ಆಡುವ ಕೊಡಿಯಾಲ್ ಕುಡುಬಿ ವಾಡೆಗಳು :

ಮಂಗಳೂರು ತಾಲೂಕು : 1. ಪರಿಯೆಗಳ್ (ಹರೇಕಳ =ಕಂಡ್ಲ) 2. ಕುತ್ತಾರು 3. ಕೊಣಾಜೆ (ಬೊಂಳ್ಳ) 4. ಕಾನಡ್ಕ 5. ಬಜ್ಪೆ ಸ್ವಾಮಿಲಪದವು 6. ಪೆರ್ಮುದೆ 7. ಮೂಡುಪೆರಾರ್ 8. ಕೊಂಪದವು 9. ಮುಚ್ಚೂರು ಕಾನಾ 10. ಕನ್ನೊರಿ A ಎಡಪದವು 11. ಕನ್ನೋರಿ B. ಎಡಪದವು 12. ಮಿಜಾರು ಕಿಂಡೇಲು 13. ಕಿಂಡೇಲು ಸಮಾಜ ಮಂದಿರ 14. ಕಿಂಡೇಲು ಅಂಚೆಕಟ್ಟೆ 15. ಪಯ್ಯರಬೆಟ್ಟು

ಕಾರ್ಕಳ ತಾಲೂಕು : 1. ಪೂಮಾವರ 2. ವಂಟಿಮಾರ್ (ಅಶ್ವತ್ ಪುರ) 3. ಮೈಂದೇರಿ ಮರಕಡ 4. ಪುತ್ತಿಗೆ ಪದವು 5. ಪುತ್ತಿಗೆ ಬೀಡು (ಶಕ್ತಿಪುರ) 6.ಕಡಂದಲೆ

ಬಂಟ್ವಾಳ ತಾಲೂಕು : ಸಿದ್ಧಕಟ್ಟೆ

ಉಡುಪಿ ತಾಲೂಕು : 1. ಸೂರಾಲು (ಕೆಂಜೂರು ಬಾಳೆಗುಂಡಿ) 2. ಬಾರಾಡಿ (ಕೊಂಡೆಜಡ್ಡು) 3. ಮುಳ್ಳಾಡ (ಕುಚ್ಚೂರು) 4. ಬುಕ್ಕಿಗದ್ದೆ 5.ಹನಿಯಾಲು (ಪೆರ್ಡೂರು) 6. ಕಡಂಬಳೆ ಇರ್ವತ್ತೂರು (ಪೆರ್ಡೂರು) 7. ದೇವಸ (ಪೆರ್ಡೂರು) 8. ಶಿವಪುರ (ಹೆಬ್ರಿ)

ಗುಮಟೆ ನೃತ್ಯ ಆಡುವ ಗೊಂಯ್ಕಾರ್ ಕುಡುಬಿ ವಾಡೆಗಳು :

ಉಡುಪಿತಾಲೂಕು 1. ಕ್ಯಾದಗೆರೆ, 2. ನಡಿಗೇರಿ 3. ಕೇಶವಾಪುರ 4. ಹೆಗ್ಗುಂಜೆ (ಮಂದರ್ತಿ) 5. ಗೋಳಿಅಂಗಡಿ 6. ಹೀಲಿಯಾಣ 7. ಒಳಬಯ್ಲ್ 8. ನಿಂಜೂರುಬೆಟ್ಟು 9. ಕೋಟಂಬಯ್ಲ್ 10. ಯಡ್ತಾಡಿ 11. ನಂಚಾರು (ನಾಲ್ಕೂರು) 12. ಕಜಕೆ 13. ಕಂಡಿಕೆ (ಮಂದರ್ತಿ) 14. ಕಲ್ಬುರ್ಗಿ 15. ಬೀಳಂಜೆ (ಬೀದಿಬೆಟ್ಟು) 16. ಕೂಡ್ಲಿ

ಕುಡುಬಿ ಜಾನಪದ ಕಲಾವೇದಿಕೆ (ರಿ) ಎಡಪದವು : ಕುಡುಬಿ ಸಮುದಾಯದಲ್ಲಿ ಮೇಲೆ ವಿವರಿಸಿದಂತೆ ನಿಶ್ಚಿತ ಸಂದರ್ಭಗಳನ್ನು ಹೊರತು ಪಡಿಸಿದರೆ, ಇತರ ಸಂದರ್ಭ ಗುಮಟೆ ಪ್ರಕಾರವನ್ನು ಪ್ರಸ್ತುತ ಪಡಿಸುವುದಕ್ಕೆ ಸಮಾಜದ ರೀತಿ ರಿವಾಜುಗಳ ಕಟ್ಟುನಿಟ್ಟಿನ ಪಾಲನೆಯಿಂದಾಗಿ ಅವಕಾಶವಿಲ್ಲ. ಇಂತಹ ಅಪರೂಪದ ವಿಶಿಷ್ಟ ಕಲೆಯನ್ನು ಹೊರಗಿನ ಸಮಾಜಕ್ಕೆ ಪರಿಚಯಿಸಿ ಕುಡುಬಿಯರ ಅಸ್ತಿತ್ವವನ್ನು ಪ್ರಸಾರ ಮತ್ತು ಪ್ರಚಾರ ಮಾಡಿದ ಕೀರ್ತಿ ಮಂಗಳೂರು ತಾಲೂಕಿನ ಎಡಪದವು ಗ್ರಾಮದ 'ಕುಡುಬಿ' ಜಾನಪದ ಕಲಾವೇದಿಕೆ' ಇವರದ್ದಾಗಿದೆ.

ಕುಡುಬಿಯರ ಪೈಕಿ ಎಡಪದವಿನ ಅಭಿಜಾತ ಗುಮಟೆ ಕಲಾಕಾರ ಗೋಪಾಲ ಗೌಡರ ನೇತೃತ್ವದಲ್ಲಿ 1973-74 ರಲ್ಲಿ ಒಂದು ಕಲಾತಂಡ ರಚಿತವಾಯಿತು. ಕಳೆದ ಮೂರು ದಶಕಗಳಲ್ಲಿ ಈ ತಂಡವು ದೇಶದ ಉದ್ದಗಲ ರಾಜ್ಯಹಾಗೂ ರಾಷ್ಟ್ರಮಟ್ಟದ ಪ್ರತಿಷ್ಠಿತ ವೇದಿಕೆಗಳಲ್ಲಿ ಇನ್ನೂರಕ್ಕೂ ಮಿಕ್ಕ ಪ್ರದರ್ಶಗಳನ್ನು ಸಾದರಪಡಿಸಿದ್ದಾರೆ. ಆಕಾಶವಾಣಿ, ದೂರದರ್ಶನದಂತಹ ಮಾಧ್ಯಮಗಳಲ್ಲಿ ಇವರ ಕಲೆ ಪ್ರಸಾರವಾಗಿದೆ. ಕೇಂದ್ರ ಸರಕಾರದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಯಿಂದ ಇವರಲ್ಲೊಬ್ಬ ಕಲಾವಿದನಿಗೆ ವಿದ್ಯಾರ್ಥಿ ವೇತನ (ಸ್ಕಾಲರ್ ಶಿಪ್) ಸಿಕ್ಕಿದೆ. ಗೋಪಾಲ ಗೌಡರ ಸಂಗ್ರಹದ 'ಗುಮ್ಮಾಂ ಅನಿ ತೋಣಿಯಾಂ ಪದಾಂ' ಎಂಬ ಗುಮಟೆ ಮತ್ತು ಕೋಲಾಟ'ದ ಹಾಡುಗಳನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿ ಅವರಿಗೆ 2002ನೇ ವರ್ಷದ ಅಕಾಡೆಮಿಯ 'ಗೌರವ "ಜಾನಪದ ಪ್ರಶಸ್ತಿ" ನೀಡಿ ಗೌರವಿಸಿರುತ್ತಾರೆ. ಕಲಾವೇದಿಕೆಯ ಕಲಾವಿದರು ಅಕಾಡೆಮಿಯ ಸದಸ್ಯರಾಗಿ ಕೂಡಾ ನೇಮಕವಾಗಿದ್ದಾರೆ. ಕುಡುಬಿಯರ ಬಗ್ಗೆ ಸಂಶೋಧನೆ, ಅಧ್ಯಯನ ನಡೆಸುವವರಿಗೆ ಸಂಪನ್ಮೂಲ ಸಂಸ್ಥೆಯಾಗಿ ಮಾಹಿತಿ ನೀಡಿದ ಸಂದರ್ಭಗಳಿವೆ. ಪ್ರಸ್ತುತ ಕುಡುಬಿ ವಾಡೆಗಳನ್ನು ಹೊರತು ಪಡಿಸಿದರೆ ಸ್ವತಂತ್ರ ರೀತಿಯಲ್ಲಿ ನೃತ್ಯ ಪ್ರದರ್ಶನವನ್ನು ಪ್ರದೇಶ, ಕಾಲಗಳ ನಿರ್ಬಂಧವಿಲ್ಲದೆ ನೀಡುತ್ತಿರುವ ನೋಂದಾಯಿತ ತಂಡ ಕುಡುಬಿ ಜಾನಪದ ಕಲಾವೇದಿಕೆ ಮಾತ್ರ.

ಕೊಂಕಣಿ ಕ್ರಿಶ್ಚಿಯನ್ ಸಮುದಾಯದಲ್ಲಿ ಗುಮಟೆ :

ಹಿಂದಿನ ಕ್ರಿಶ್ಚಿಯನ್ ಸಮಾಜದಲ್ಲಿ ಸುಗ್ಗಿಯ ಕಾಲದಲ್ಲಿ ಗದ್ದೆತೋಟಗಳ ಕೆಲಸಗಳನ್ನು ಮುಗಿಸಿ ಆದ ಮೇಲೆ ದೈಹಿಕ ಶ್ರಮದ ವಿಶ್ರಾಂತಿ ಸಮಯದಲ್ಲಿ ಶ್ರಮ ಪರಿಹಾರ್ಥವಾಗಿ ಗುಮಟ್ ಬಾರಿಸುವುದು ರೂಢಿಯಾಗಿತ್ತು. ತಂತಮ್ಮ ದೈನಂದಿನ ಕಷ್ಟದ ಕೆಲಸಗಳು ಮುಗಿದಂತೆ ಮನೆಯೆದುರಿನ ಅಂಗಳದಲ್ಲಿ ಕುಳಿತು ಗುಮಟೆ ಬಾರಿಸಿ ಹಾಡುತ್ತಿದ್ದರು. ವಿವಾಹ, ವಿವಾಹದ ಮರು ಔತಣ, ಹಬ್ಬ ಹುಣ್ಣಿಮೆ ದಿವಸಗಳಲ್ಲಿ ಅಲ್ಲದೆ ತಂತಮ್ಮ ಮನೆಗಳಲ್ಲಿ ಜರಗುವ ಪ್ರತಿಯೊಂದು ಶುಭಕಾರ್ಯಗಳ ಸಂದರ್ಭ ಗುಮಟೆ ಬಾರಿಸುತ್ತಿದ್ದರು. ನಿರ್ದಿಷ್ಟ ದಿನ, ನಿರ್ದಿಷ್ಟ ಜಾಗದಲ್ಲಿ ಗುಮಟೆ ಮೇಳ ಸೇರುತ್ತದೆ ಅಂತ ತಿಳಿದ ತಕ್ಷಣ ತನ್ನ ಗುಮಟೆ ತೆಗೆದುಕೊಂಡು, ಆಮಂತ್ರಣವಿಲ್ಲದಿದ್ದರೂ ಅಲ್ಲಿಗೆ ತಲುಪುತ್ತಿದ್ದರು ಮತ್ತು ಅಲ್ಲಿ ಅವರಿಗೆ ಗೌರವದೊಂದಿಗೆ ಸ್ವಾಗತವೂ ಇತ್ತು. ಮದುಮಗಳ ಮದುವೆ ಚಪ್ಪರದಲ್ಲಿ 'ರೋಸ್' (ರೋಸ್ = ತೆಂಗಿನಹಾಲು = An act symboling purification of the bride and bridegroom prior to marriage) ಪೂಸುವ ರಾತ್ರಿ ಗುಮಟೆ ಬಾರಿಸಲ್ಪಡುತ್ತಿದ್ದವು. ಅಡುಗೆ ತಯಾರಿ ಮಾಡುವಾಗ, ತರಕಾರಿ ಹಚ್ಚುವಾಗ, 'ಸನ್ನಾಂ' (ಇಡ್ಲಿಯಂಥಾ ತಿಂಡಿ)ಬೇಯಿಸುವಾಗ, ಹಂದಿಯ ಮಾಂಸ ಮಾಡುವಾಗ ಇಡೀ ರಾತ್ರಿ ಗುಮಟೆ ಬಾರಿಸುತ್ತಿದ್ದುದರಿಂದ ನಿದ್ರೆಯಿಂದ ತೂಕಡಿಸುತ್ತಿರಲಿಲ್ಲ. ಗುಮಟೆಯ ನಾದಕ್ಕೆ, ಮತ್ತು ಎತ್ತರದ

ಸ್ವರದಲ್ಲಿ ಹಾಡುಗಾರಿಕೆಗೆ ಪುರುಷ ಮಹಿಳೆಯರು, ಯುವಕ - ಯುವತಿಯರು, ಮಕ್ಕಳು - ಹಿರಿಯರು ಮುಂತಾಗಿ ಎಲ್ಲರೂ ರಾತ್ರಿ ಇಡೀ ಕುಣಿಯುತ್ತಿದ್ದರು.

ಶಿಕಾರಿ ಮಾಡಿ 'ಬೆರು ' (ಕಳ್ಳುಬೆಕ್ಕು) ಅಥವಾ ಕಡವೆ ಹೊಡೆದು ಬಂದ ದಿವಸ ಒಂದು ಮನೆಯಿಂದ ಗುಮಟೆಯ ಶಬ್ದ ಕೇಳಿತೂಂದ್ರೆ ನೆರೆಕರೆಯವರೆಲ್ಲಾ ಅಲ್ಲಿ ಸೇರುತ್ತಿದ್ದರು. ಇಡೀ ರಾತ್ರಿ ಹಳ್ಳಿಯ ಯುವಕರು, ಹಿರಿಯರಿಂದ ಕಲಿಯುವಾಗ ತರತರದ ಹಾಡುಗಳನ್ನು ಹಾಡುತ್ತಿದ್ದರು. ಈ ಹಾಡುಗಳಲ್ಲಿ ಹೆಚ್ಚಾಗಿ ಜಾನಪದ ಕಥೆಗಳ ವಿವರಣೆಯಿರುತ್ತಿತ್ತು. ಈ ಹಾಡುಗಳೊಂದಿಗೆ 'ಕಂತಿಗೊ' ಎಂಬ ಧಾರ್ಮಿಕ ಹಾಡುಗಳೂ ಹಾಡಲ್ಪಡುತ್ತಿದ್ದವು. ಬೇರೆ ಬೇರೆ ರೀತಿಯ ತಮಾಶೆಯ, ವಿನೋದಾವಳಿಗಳ ಹಾಡುಗಳು ಇರುತ್ತಿದ್ದವು. ಈ ಕಥನಕಾವ್ಯಗಳಲ್ಲಿ ದುರಿತ್ ರಾಯನ ಕಥೆ, ಕದಂಬಾ ಕುವರಿಯ ಕಥೆ, ಅತ್ತಿಯ ಕಥೆ, ಅಭಿಂಗಾ ಕುವರನ ಕಥೆ, ಗೌಡನ ಕಥೆ, ಇಸ್ರೇಲ್ ರಾಜನ ಕತೆ, ಅಬ್ರಾಂವ್‌ನ ಕಥೆ, ಮೇರಿಯ ಜನನದ ಕಥೆ, ಹೀಗೆ ಅನೇಕ ಕಥೆಗಳು ಉಪಲಬ್ಧವಿವೆ.

ಕ್ರಿಶ್ಚಿಯನ್ನರ ಗುಮಟೆ ಪದಗಳನ್ನು ಮೂರು ವಿಭಾಗ ಮಾಡಬಹುದು. ಪ್ರಥಮವಾಗಿ ಸಾಮಾಜಿಕ ಹಾಡುಗಳು. ಸಮಾಜದಲ್ಲಿನ ರೀತಿ ರಿವಾಜುಗಳು, ವಿಧಿ ನಿಷೇಧಗಳಂತಹ ಸಾಮಾಜಿಕ ಸಂಗತಿಗಳನ್ನು ಆಧರಿಸಿದ ಪದಗಳು. ಸೋಭಿನಾಚ್ಯಾ ಮಾಂವಾಚೆಂ ಕಾರ್ಭಾರ್ (ಸೊಭಿನಾಳ ಮಾವನ ಕಾರುಬಾರು), ಮಾಂಯ್ ಸುನೆ ಮದ್ಲೆಂ ಝುಗ್ಡೆಂ (ಅತ್ತೆ - ಸೊಸೆಯರ ನಡುವಿನ ಜಗಳ), ಕಾಜಾರ್ ಕರ್ನ್ ದಿಲ್ಲ್ಯಾ ಚೆಡ್ವಾನ್ ಅಪ್ಲ್ಯಾ ಕುಳಾರಾವೆಚೆಂ (ಮದುವೆ ಮಾಡಿಕೊಟ್ಟ ಹೆಣ್ಣು ತನ್ನ ತವರಿಗೆ ಹೋಗುವುದು), ಹೊಕ್ಲೆಚ್ಯಾ ಭಾವಾಂನಿ ಹೊಕ್ಲೆಕ್ ರೆಸ್ಪೆರಾಕ್ ಹಾಡ್ಚೆಂ (ವಧುವನ್ನು ಸಹೋದರರು ವಿವಾಹಕ್ಕೆ ಕರೆತರುವುದು), ತೆಂಡ್ಲ್ಯಾಚೆಂ ಕಾಜಾರ್ (ತೊಂಡೆಯ ಮದುವೆ), ಉಂದಿರ್ ಮಾಮ್ (ಇಲಿಮಾವ), ಅಡ್ಕುಲೊ - ಬುಡ್ಕುಲೊ, ಖಿಡ್ವಾನ್ ಖಿಡಾಪ್ ಭೊಂವ್‌ರೆ ಪಾಲ್ವಾ, ಭೊವ್‌ಚ್ ಫಾಂತ್ಯಾರ್ ಉಠಯಾಂ (ಬೆಳ್ಳಂಬೆಳಗ್ಗೆ ಏಳುವ), ಕಾಜಾರಾಜೊ ಮಾಟೊವ್ (ಮದುವೆಯ ಚಪ್ಪರ) ಇಂತಹ ವಿಷಯಗಳ ಮೇಲೆ ಈ ಹಾಡುಗಳು ರಚಿತವಾದವುಗಳು.

ದ್ವಿತೀಯವಾಗಿ ಧಾರ್ಮಿಕ ಪದಗಳು. ಕೆಲವು ಧಾರ್ಮಿಕ ಘಟನಾವಳಿಗಳ ಉಲ್ಲೇಖ ಮಾಡಿ, ತತ್ಕಾಲೀನ ಸಮಾಜದ ರೀತಿ ರಿವಾಜುಗಳಿಗೆ ಅನುಗುಣವಾಗಿ ಕೆಲವು ಬದಲಾವಣೆ ಮಾಡಿ ಹಾಡುಗಳನ್ನು ರಚಿಸಲಾಗುತ್ತಿತ್ತು. ದಾವೀದ್ ರಾಯಾಚಿ ಕಥಾ, (ದಾವೀದ ರಾಜನ ಕಥೆ), ಬುದ್ವಂತ್ ಸಾಲ್ಮಾಂವ್ ರಾಯಾಚಿ ಕಥಾ (ಬುದ್ಧಿವಂತ ಸಾಲ್ಮಾಂವ್ ರಾಜನ ಕಥೆ), ಜೆಜುಜೊ ಜಲ್ಮ್ (ಯೇಸುವಿನ ಜನನ), ಮರಿಯೆಚೆಂ ಕಾಜಾರ್ (ಮೇರಿಯ ವಿವಾಹ), ಜೆಜು ಸತೆವಂತ್ (ಯೇಸು ಸತ್ಯವಂತ), ಸಾಂ ಫ್ರಾನ್ಸಿಸ್ ಸಾವೆರ್ (ಸಂತ ಫ್ರಾನ್ಸಿಸ್ ಸಾವೆರಾ), ಸಾಂ ಲೊರೆಸ್ ಭಕ್ತ್ (ಸಂತ ಲೊರೆನ್ಸ್ ಭಕ್ತ), ಸಾತ್ ಸಾಕ್ರಾಮೆಂತ್ (ಏಳುಸಂಸ್ಕಾರಗಳು),

ಆಮೊರೆಚ್ಯಾ ವೆಳಿಂ, ಗೊಂಯ್ ಸಾಂಡುನ್ ಆಯ್ಲಿ ಮಾಯ್, ಜೊಕಿ ಸಂತಾನಾಲ್ಯೆ ಘುರಿ, ಬಾರ್ದೆಸ್ಕಾಂಚಿ ಶಿರ್ ಇಂತಹ ವಿಷಯುಗಳಿರುತ್ತಿದ್ದವು

ತೃತೀಯವಾಗಿ ಚಾರಿತ್ರಿಕ ಘಟನೆಗಳ ಹಾಡುಗಳು. ಟಿಪ್ಪು ಸರದಾರ, ಶತ್ರುಗಳ ಉಪಟಳ, ಕ್ರಿಶ್ಚಿಯನ್ನರ ಧೈರ್ಯ ಸಾಹಸಗಳ ವಿಷಯುಗಳಿಂದ ಈ ಹಾಡುಗಳು ತುಂಬಿರುತ್ತಿದ್ದವು.

ವರ್ತುಲಾಕಾರದಲ್ಲಿ ಕುಳಿತು ನಾಲ್ಕೈದು ಜನರು ಗುಮಟೆ ಬಾರಿಸಿ ಹಾಡುವಾಗ ಉಳಿದವರು ಉಲ್ಲಾಸಭರಿತರಾಗಿ ಚಪ್ಪಾಳೆ ತಟ್ಟುತ್ತಾ ಭಾಗವಹಿಸುತ್ತಿದ್ದರು. ತಾಸು ಗಟ್ಟಲೆ ದೊಡ್ಡ ಸ್ವರದಲ್ಲಿ ಪದಗಳನ್ನು ಹಾಡುತ್ತಾ, ಗುಮಟೆ ಬಾರಿಸುತ್ತಾ ಆಗುವ ಶ್ರಮ ಪರಿಹಾರಕ್ಕೆ ಕಳ್ಳು ಕುಡಿಯುವುದು ಸಾಮಾನ್ಯವಾಗಿತ್ತು. ಪ್ರತಿಯೊಂದು ಚರಣವನ್ನು ಎರಡೆರಡು ಬಾರಿ ಹಾಡಲಾಗುತ್ತಿತ್ತು. ಮೂರು ಅಥವಾ ನಾಲ್ಕು ಚರಣಗಳ ಬಳಿಕ ಹಾಡಿನ ಸ್ವರ ತಾರಕಕ್ಕೇರುತ್ತಿತ್ತು. ಆ ಸಂದರ್ಭ ಗುಮಟೆಗಳ ನಾದವೂ ಉಚ್ಚ ಸ್ಥಾಯಿಗೇರುತ್ತಿತ್ತು. ಒಂದೊಂದು ಘಟನೆಯ ಹಾಡು ಹಾಡಲು ಇಡೀ ರಾತ್ರಿ ವ್ಯಯಿಸುತ್ತಿದ್ದರು ಅನ್ನುವಾಗ ಸಾಹಿತ್ಯದ ವಿಶಾಲತೆ, ಕಾಲ್ಪನಿಕ ಘಟನೆಗಳು ತುಂಬಿರುವ ಈ ಹಾಡುಗಳಲ್ಲಿ ಪೂರ್ವಜರ ಬುದ್ಧಿವಂತಿಕೆ, ಜಾಣ್ಮೆಗಳು ವ್ಯಕ್ತವಾಗುತ್ತವೆ. ಗುಮಟೆ ಪದಗಳು ಪೂರ್ವಿಕರು ಅವರ ಆಳವಾದ ಜ್ಞಾನದಿಂದ ತಯಾರು ಮಾಡಿದ ಪಕ್ವಾನ್ನವೇ ಆಗಿವೆ. ಕೊಂಕಣಿ ಸಂಸ್ಕೃತಿಯ ಸ್ವಾದ, ಅಲಂಕಾರ, ವಿವಿಧತೆಗಳಿಂದ ಮಾತುಗಳ ಶೃಂಗಾರ ಮುಂತಾದ ವೈಶಿಷ್ಟ್ಯಗಳಿಂದ ಈ ಹಾಡುಗಳು ತುಳುಕುತ್ತಿವೆ. ಪೂರ್ವಿಕರು ಅಶಿಕ್ಷಿತರಿದ್ದರಾದರೂ ಅಜ್ಞಾನಿಗಳಾಗಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮೇ 1983 ರ 'ಜಿವಿತ್' ನಾಮಾಂಕಿತ ಕೊಂಕಣಿ ಪತ್ರದ 30-31 ನೇ ಪುಟದಲ್ಲಿ ಕೊಂಕಣಿಯ ಪ್ರಸಿದ್ಧ ಸಾಹಿತಿ ಮತ್ತು ಕವಿ ಚಾ.ಫ್ರಾ.ದೆ' ಕೊಸ್ತಾರವರು 'ಸಮಾಜಿಂತ್ ಆಳ್ವಾಲ್ಲೆ ಗುಮ್ಮಾಂಗಾರ್' (ಸಮಾಜದಲ್ಲಿ ಅಳಿದುಹೋದ ಗುಮಟೆ ಕಲಾವಿದರು) ಎಂಬ ಲೇಖನದಲ್ಲಿ ಕ್ರಿಶ್ಚಿಯನ್ನರಲ್ಲಿ ಸಮಕಾಲೀನ ಶ್ರೇಷ್ಠ ಗುಮಟೆ ಕಲಾಕಾರ ಮಂಗಳೂರಿನ ಬಿಜೈಯ ಶ್ರೀ ಜೋಕಿಮ್ ಪಿರೇರಾರವರ ಬಗ್ಗೆ ಬರೆಯುವಾಗ ಗುಮಟೆ ಹಾಗೂ ಗುಮಟೆ ಪದಗಳ ಬಗ್ಗೆ ನೀಡಿದ ವಿವರ ಹೀಗಿದೆ-

ಗುಮಟೆಯ ವಿದ್ಯೆ ಪುರಾತನ ಕಾಲದಿಂದ ಕೊಂಕಣಿ ಸಮುದಾಯದಲ್ಲಿ ಸೃಷ್ಟಿಯಾಗಿದ್ದು, ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ, ಮೊಮ್ಮಗನಿಂದ ಮರಿಮಗನಿಗೆ, ಮರಿ ಮಕ್ಕಳಿಗೆ ಪೂರ್ವ ಪರಂಪರೆಯಿಂದ ಹರಿದು ಬಂದಿರುವಂಥಾದ್ದು. ಕೇವಲ ಮೌಖಿಕವಾಗಿ ಅಪ್ರತಿಮ ನಾಜೂಕು ಮಾತುಗಳಿಂದ ಸಾಹಿತ್ಯಭರಿತವಾಗಿ, ತಾಳ ಲಯ ಬದ್ಧವಾದ ಕವಿತೆಗಳಿಂದ ಪೋಣಿಸಲ್ಪಟ್ಟ ಹಾಡುಗಳು ಕಾವ್ಯ ಸೌಂದರ್ಯದ ಕಣಜವಾಗಿ ಕವಿತಾ ಸಂಸಾರದ ಯಾವುದೇ ಜಾನಪದ ಕಲಾ ಪ್ರಕಾರವನ್ನು ತಲೆಬಾಗುವಂತೆ ಮಾಡುವಂಥಾದ್ದಾಗಿದೆ. ಗುಮಟೆಯ ಸಂಗೀತದ ಮೋಡಿಯ ರೀತಿ ಗಮನಿಸಿದರೆ, ಇದು ಶಾಸ್ತ್ರೀಯ ಸಂಗೀತದ ಮಾತೃಮೂಲ ಎಂಬ ವಿಚಾರವು

ಯಾರಿಗೇ ಆದರೂ ಅರ್ಥವಾದೀತು.

ಆದರೂ ಈ ಜಾನಪದ ಸಂಗೀತ ತುಂಬಾ ಸರಳ ಹಾಗೂ ಹಿರಿತನದ ಘನತೆಯನ್ನು ಹೊಂದಿದೆ. ಈ ಸಂಗೀತದಲ್ಲಿ ನಾಲ್ಕು ವಿವಿಧ ತಾಳಗಳಿವೆ. ಒಂದೇ ಮಾಲಿಕೆಯಲ್ಲಿ ಚತುರ ಗುಮಟೆ ವಾದಕ ಮೂರು ತಾಳಗಳನ್ನು ಸೇರಿಸಿ, ವಾದನಮಾಡಿ ದುಡಿಸಿಕೊಳ್ಳುತ್ತಾನೆ. ಚಲಾವಣೆಯಲ್ಲಿರುವ ಬಹಳ ಸ್ವಾದಭರಿತ ತಾಳ 'ಲಳಿತ್'

ಓಗಾ ವ್ಹಡ್ಲೆಂ ಗೋಯಿಂಚ್ ಬಾ

ವ್ಹಡ್ಲ್ಯಾಂ ಗೊಯಾಂ ಶಹ್ರಾ ಮಾಜರಿ

ಕದ್ಮಾರಾಯ್ ರಾಜ್ ಕರಿವ್ಹೋ

ತಾಗೇರಿ ಕನ್ಯಾ ಆಯ್ ಸುಂದರಿ

ದಿವ್ಸಾ ತೀನ್ ವೆಳಾ ಮರ್‌ದಾನ್ ಕರಿ

ಕನ್ಯಾಕ್ ಪಿರಾಯ್ ಭರ್ತೀ ಜಾಲಿವ್ಹೋ

ಕನ್ಯಾ ಕಾಯ್ ರಗ್ತಾನ್ ಭರ್‌ಲೀ ವ್ಹೋ

ಆವಯ್ಕ್, ಬಾಪಾಯ್ಕ್ , ಭಾವಾಕ್ ತಾಚ್ಯಾ

ತಿಚ್ಯಾ ಲಗ್ನಾಚಿ ಚಿಂತ್ತಾ ಲಾಗ್‌ಲಿ

ನಾಜೂಕು ತಾಳದ ಪೈಕಿ 'ಶೀದಾ ಥಾಪ್' ಅಂತ ಇನ್ನೊಂದು ತಾಳವಿದೆ. 'ಲಳಿತ್' ನಿಂದ ಅದೇ ಹಾಡು ಮುಂದುವರೆಯುತ್ತದೆ.

ಬಾಪಯ್ ಸೋಧಿತ್ ಕುಳಿಯೆವಂತ್‌ವ್ಹೋ

ಆವಯ್ ಸೋಧಿತ್ ಧನವಂತ್

ಭಾವ್ ಸೋಧಿತ್ ಮರ್ಜೆವಂತ್...

ಅದೇ ಸ್ವಾದಭರಿತ ತಾಳದಲ್ಲಿ ಈ ಕಥೆ ಮುಂದುವರೆಯುತ್ತದೆ

ಅಭಿಂಗಾ ತೊ ರಾಯಿಚ್ ಮೂ

ಅಭಿಂಗಾ ರಾಯಾ ತುಜೊ ಕುಂವರ್ ವ್ಹೊ

ಪೊವ್ಯಾ ಶಹ್ರಾಲೊ ನಾತುವ್ಹೋ

ತಾಚೆಂ ಕಾಂಯ್ ಬಾ ನಾಂವ್ ದೂರುತು

ಈಗ ಇದೇ ಹಾಡಿನಲ್ಲಿ ಕಲಿಸುವಾತ ಲಯವನ್ನು ಬದಲಿಸುತ್ತಾನೆ. ನಾಜೂಕು ರೂಪದಲ್ಲಿದ್ದ ತಾಳಗಳು ' ಉಡ್ತೆಂ' ಯ ಶಬ್ದ ತರಂಗಗಳಾಗಿ ಬದಲಾಗುತ್ತದೆ.

ದುರುತಾಚೆಂ ಕಾಮ್ ಸದಾಂ

ಶಿಕಾರೆಕ್ ವೆಚೆಂ

ಧೊಣು ಭಾಲೊ ಘೆವುನು ದೂರುತ್

ಭಾಯ್ರ್ ಸರ್‌ಲೊ

ಆನಿ ಭಾಯ್ರ್ ಸರ್‌ಲೊ ದೂರುತು

ರಾನಾಕ್ ಪಾವುಲೊ

ಇದಲ್ಲದೆ ತಾಳಗಳ ರೀತಿ ಇನ್ನೊಂದು ಪ್ರತ್ಯೇಕವಿದೆ. ಇಲ್ಲಿ ಗುಮಟೆಯ ಶಬ್ದ ತರಂಗಗಳೊಂದಿಗೆ ಚಪ್ಪಾಳೆಗಳ ಶಬ್ದವೂ ಕೇಳುತ್ತದೆ.

ಸಾಂ ಫ್ರಾನ್ಸಿಸ್‌ಗಾ ಸಾವೇರಾ

ಕಾಂಯ್ ಕುರ್ಪೆ ಭರಿತಾ

ದೆವಾ ಸಾಂಗಾತಾ

ಸದಾಂ ಕಾಳ್‌ಗಾ ಸುಖ್ ಭೋಗೀತಾ

ಗೋವಾದಲ್ಲಿ ಪೋರ್ಚುಗೀಸರ ಆಗಮನಕ್ಕಿಂತ ಮೊದಲು ದೇವಸ್ಥಾನಗಳಲ್ಲಿ ಉತ್ಸವಾದಿ ಸಂದರ್ಭಗಳಲ್ಲಿ ಗುಮಟೆ ಬಾರಿಸಲ್ಪಡುತ್ತಿತ್ತು. ಗುಮಟೆಯ ಎರಡೂ ಬಾಯಿಗಳಿಗೆ ಹಗ್ಗ ಕಟ್ಟಿ, ಕುತ್ತಿಗೆಗೆ ನೇತು ಹಾಕಿ, ಗುಮಟೆ ಬಾರಿಸಿ, ಹಾಡುಗಳನ್ನು ಹಾಡುತ್ತಾ ಕುಣಿಯುತ್ತಿದ್ದರು. ಪೋರ್ಚುಗೀಸರು ಗುಮಟೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳದೆ ಧರ್ಮದ ನೆಪದಲ್ಲಿ ಗುಮಟೆ ವಿದ್ಯೆಯನ್ನು ಪೈಶಾಚಿಕ ಕಲೆ ಎಂದು ತಡೆಯೊಡ್ಡಿದ ಕಾರಣ, ಪೋರ್ಚುಗೀಸರ ಭಯದಿಂದ ಕುಣಿತವನ್ನು ಬಿಟ್ಟು ಬಿಡಲಾಯಿತು. ಕ್ರಿಶ್ಚಿಯನ್ನರು ಕುಳಿತು ಗುಮಟೆ ವಾದನಕ್ಕೆ ಪ್ರಾರಂಭಿಸಿದರು. ಮುಂದಕ್ಕೆ ಇವರಲ್ಲಿ ಕುಳಿತುಕೊಂಡೇ ಗುಮಟೆ ಬಾರಿಸುವ ವಾಡಿಕೆ ಚಾಲ್ತಿಯಲ್ಲಿ ಬಂತು. ಕುಡುಬಿ, ಖಾರ್ವಿ, ಸಿದ್ಧಿ – ಈ ಸಮುದಾಯಗಳಲ್ಲಿ ಗುಮಟೆ ಕುಣಿತ ಚಾಲ್ತಿಯಲ್ಲಿರುವುದರಿಂದ ಅವರ ಗುಮಟೆಗಳು ಕುಣಿಯುವುದಕ್ಕೆ ಅನುಕೂಲವಾಗುವಂತೆ ಆಕಾರದಲ್ಲಿ ಚಿಕ್ಕವು. ಕ್ರಿಶ್ಚಿಯನ್ನರ ಗುಮಟೆಗಳು ಕುಳಿತು ಬಾರಿಸುವಂಥವುಗಳು ಆದುದರಿಂದ ಇವರ ಗುಮಟೆಗಳು ಆಕಾರದಲ್ಲಿ ದೊಡ್ಡವುಗಳಾಗಿವೆ.

ಧರ್ಮ, ಮಾನವ ಜೀವನದ ಒಂದು ಕೇಂದ್ರ. ಈ ಕೇಂದ್ರದಲ್ಲಿ ಅದರ ಕವಿತೆ ಅಥವಾ

ಸಂಗೀತೋಪಕರಣಗಳಿಗೆ ಅವಕಾಶ ಇಲ್ಲದಿದ್ದಲ್ಲಿ ಅವುಗಳು ಆ ಸಮಾಜದಲ್ಲಿ ತಿರಸ್ಕಾರಗೊಳ್ಳುತ್ತವೆ. ಯಾವ ಸಮಾಜದಲ್ಲಿ ಧರ್ಮ ಮತ್ತು ಜಾನಪದ ಸಂಸ್ಕೃತಿಗೆ ಅವಿನಾಭಾವ ಸಂಬಂಧವಿರುವುದಿಲ್ಲವೋ ಆ ಸಮಾಜದ ಜಾನಪದ ಕಲೆ ಸ್ವಾಭಾವಿಕವಾಗಿ ಅಳಿಯುತ್ತಾ ಬರುವುದನ್ನು ಕಾಣಬಹುದು. ಕ್ರಿಶ್ಚಿಯನ್ನರಲ್ಲಿ ಗುಮಟೆ ಕಲೆ ಅಳಿಯುತ್ತಾ ಬಂದಿರುವುದಕ್ಕೆ ಪೋರ್ಚುಗೀಸರು ಅಡೆತಡೆಗಳನ್ನು ಒಡ್ಡಿದುದು ಒಂದು ಕಾರಣವಾದರೆ, ಕ್ರಿಶ್ಚಿಯನ್ನರ ಧಾರ್ಮಿಕ ಆಚರಣೆಗಳ, ವ್ಯಾಪ್ತಿಯೊಳಗೆ ಗುಮಟೆಗೆ, ಗುಮಟೆ ಹಾಡುಗಳಿಗೆ, ಒಟ್ಟಾರೆಯಾಗಿ ಗುಮಟೆ ಕಲೆಗೆ ಅವಕಾಶವನ್ನೇ ಒದಗಿಸದಿದ್ದುದು ಪ್ರಬಲವಾದ ಎರಡನೇ ಕಾರಣ. ಮೂರನೇ ಕಾರಣ ಆಧುನೀಕರಣದ ಪ್ರಭಾವ ಹಾಗೂ ಪಾಶ್ಚಾತ್ತೀಕರಣದ ಕುರುಡು ಅನುಕರಣೆ. ಟಿಪ್ಪುವಿನ ಕಾಲದಲ್ಲಿ (1784-1799) ಭಯಂಕರ ಕಷ್ಟ ಕಾರ್ಪಣ್ಯಗಳಿಗೆ ಸಿಲುಕಿದ್ದರೂ ಕ್ರಿಶ್ಚಿಯನ್ನರು ಗುಮಟೆ ವಿದ್ಯೆಯನ್ನು ಮರೆತಿರಲಿಲ್ಲ. ಆದರೆ ಪಾಶ್ಚಾತ್ಯ ಆಧುನಿಕ ಸಂಗೀತ ಸಾಧನಗಳ ಉಪಸ್ಥಿತಿಯಲ್ಲಿ ಗುಮಟೆಯಂಥ ಕೇವಲ ಮಣ್ಣಿನಿಂದ ತಯಾರಿಸಲ್ಪಟ್ಟ ಸಂಗೀತ ಸಾಧನವನ್ನು ಉಪಯೋಗಿಸುವುದು ಅಲ್ಪತನವೆಂಬ ಭಾವನೆಯಿಂದಾಗಿ ಕ್ರಿಶ್ಚಿಯನ್ ಸಮಾಜದಲ್ಲಿ ಗುಮಟೆಗಳೂ ಅಳಿದವು, ಗುಮಟೆ ಕಲೆಯೂ ಅಳಿಯಿತು.

ಕ್ರಿಶ್ಚಿಯನ್ ಸಮುದಾಯದಲ್ಲಿ ಗುಮಟೆ ಕಲೆಯನ್ನು ಜೀವಂತವಾಗಿರಿಸಿದವರ ಪಯ್ಕಿ ಮಂಗಳೂರಿನ ಬಿಜೈ ನೋಡಾ ಎಂಬಲ್ಲಿಯ ಪ್ರಸಿದ್ಧ ಕಲಾಕಾರ ಶ್ರೀ ಜೋಕಿಮ್ ಪಿರೇರಾ ಮತ್ತು ಅವರ ಕುಟುಂಬ ದೊಡ್ಡ ಹೆಸರು. ಗುಮಟೆ ಕಲಾ ಪರಂಪರೆಯನ್ನು ಅವರು ಪೀಳಿಗೆಯಿಂದ ಪೀಳಿಗೆಗೆ ಹಿರಿಯರ ದೇಣಿಗೆಯಾಗಿ ಉಳಿಸಿಕೊಂಡು ಬಂದವರಲ್ಲಿ ಖ್ಯಾತನಾಮರು. ಅವರ ಈ ಪ್ರತಿಭೆ ಹಾಗೂ ಸೇವೆಯನ್ನು ಪರಿಗಣಿಸಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು 1998ರ 'ಗೌರವ ಜಾನಪದ ಪ್ರಶಸ್ತಿ' ನೀಡಿ ಗೌರವಿಸಿದೆ. ಮಾತ್ರವಲ್ಲ ಅವರ ಗುಮಟೆ ಹಾಡುಗಳ ಸಂಗ್ರಹವನ್ನು 2000ನೇ ವರ್ಷದಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಶ್ರೀ ಜೋಕಿಮ್ ಪಿರೇರಾರವರು ಇತ್ತೀಚೆಗಷ್ಟೇ ನಿಧನರಾಗಿದ್ದು ಅವರ ಕುಟುಂಬಸ್ಥರು ಈ ಕಲೆಯನ್ನು ಮುಂದುವರಿಸುತ್ತಿದ್ದಾರೆ.

2003 ರಲ್ಲಿ ಪ್ರಕಟವಾದ, ಪ್ರಸಿದ್ಧ ಸಂಗೀತಗಾರ ಹಾಗೂ ಮಂಗಳೂರಿನ ಸಂತ ಎಲೋಶಿಯಸ್ ಕಾಲೇಜಿನ ಪ್ರಾಧ್ಯಾಪಕ ದಿ| ಬೆನೆಟ ್ ಪಿಂಟೊರವರು ತನ್ನ 'Konkani Bards and Musicians of Kanara' ಎಂಬ ಗ್ರಂಥದಲ್ಲಿ ಕ್ರಿಶ್ಚಿಯನ್ ಗುಮಟೆ ಕಲಾವಿದರ ಸವಿಸ್ತಾರವಾದ ಪಟ್ಟಿ ನೀಡಿದ್ದಾರೆ. ಅದು ಹೀಗಿದೆ (ಪುಟ 338-347)

ಮಂಗಳೂರು :

ಬೊಂದೆಲ್ : ದಾಮಿಯಾ ನ್ ಸಾಲ್ವದೊರ್ ನೊರೊನ್ಹಾ, ಅವರ ಮಕ್ಕಳು ರೊಮಾನ್, ಸಂತಾನ್ ಮತ್ತು ಲಾರೆನ್ಸ್.

ಬೆಂದೂರ್ : ಡೆನಿಸ್ ಅಲ್ಬ್ಪುಕರ್ಕ್ (Asst. H.M. Sac High school) ಅವರ ಮಗ ಆರ್ಚಿ ಅಲ್ಬುಕರ್ಕ್. ಇವರೊಂದಿಗೆ ಸಾಲ್ವದೊರ್ ಗೊವಿಯಸ್ ಆಡುತ್ತಿದ್ದರು.

ಬಿಜೈ : ಸೆಬಾಸ್ಟಿಯನ್ ಪಿಂಟೊ, ಅವರ ಸಹೋದರ ಪಾವ್ಲ್, ಸೆಬಾಸ್ಟಿಯನರ ಮಗ ಜೋಸೆಫ್ ಪಿಂಟೊ, ಜೊಸೆಫ್ ಪಿಂಟೊರವರ ಮಗ ಸಿಪ್ರಿಯನ್ ಉರ್ಬಾನ್ ಪಿಂಟೊ (ಬೆನೆಟ್ ಪಿಂಟೊರವರ ತಂದೆ)

ಅಲೆಕ್ಸ್ ಪಿರೇರಾ, ಅವರ ಮಗ ಜೋಕಿಮ್ ಪಿರೇರಾ (ಪ್ರಶಸ್ತಿ ವಿಜೇತ), ಜೋಯೆಲ್ ಮತ್ತು ನೊಯೆಲ್ ಪಿರೇರಾ, ಸೆಬಾಸ್ಟಿಯನ್ ಬ್ಯಾಪ್ಟಿಸ್ಟ್, ಸ್ಟೇನಿ ಡಿಮೆಲ್ಲೊ, ಫೆಲಿಕ್ಸ್, ಸಿಕ್ವೇರಾ, ಜೋನ್ ಫೆರ್ನಾಂಡಿಸ್

ಬಜ್ಜೋಡಿ : ಬೆಂಜಮಿನ್ ಮಿನೇಜಸ್, ಅವರ ಮಗ ಫ್ರಾನ್ಸಿಸ್ ಮಿನೇಜಸ್

ದೆರೆಬಯ್ಲ್ : ಲಾರೆನ್ಸ್ ಕೊನ್ಸೆಸೊ (ಲೊರ್ಸು ಮೇಸ್ತ), ಅಂಜೆಲಿನ್ (ಅಂಜುಬಾಯಿ)

ಫಳ್ನೀರು : ಬ್ಯಾಪ್ಟಿಸ್ಟ್ (ಬಾಥಾಮ್) ಮತ್ತು ಜೂಲಿಯಾನ್ (ಜಿಲ್ಯಾಮ್) ಮೊರಾಸ್

ನಾಗುರಿ : ಬಿ.ಎಲ್.ಡಿಕೋಸ್ತಾ (ಬಾಲ್ತು ಕೊಸ್ತಾ)

ಉರ್ವಾ : ಮಥಾಯಸ್ ಗೊನ್ಸಾಲ್ವಿಸ್ (ಮೊತಿಯಾ ಗೊಸಾಲ್)

ಕುಲ್ಶೇಖರ್ : ಚಾರ್ಲ್ಸ್ ಡಿಸೋಜಾ, ಕ್ಲಿಫರ್ಡ್ ಡಿಸೋಜಾ, ವಲೇರಿಯನ್ ಡಿಸೋಜಾ, ಹೆನ್ರಿ ರೊಬರ್ಟ್ ಡಿಸೋಜಾ, ಮೈಕಲ್ ಬ್ರಾಗ್ಸ್, ಬೆರ್ಟ್ರಮ್ ಲೋಬೋ, ರಾಜೇಶ್ ಲೋಬೋ, ಮಾರ್ಕ್ ಪಿಂಟೊ, ಇಸಾಕ್ ಪಿರೇರಾ, ಮತ್ತು ಸೆಬಾಸ್ಟಿಯನ್ ಪಿರೇರಾ.

ಕೊರ್ಡೆಲ್ : ಬೇಸಿಲ್ ಡಿಸೊಜಾ, ಅವರ ಮೊಮ್ಮಗ ಕ್ಲಿಫರ್ಡ್ ಡಿಸೋಜಾ

ಅಂತೊನಿ, ಜೋಸೆಫ್ ಮತ್ತು ಲಿಯೊ ಡಿಸಿಲ್ವಾ

ಬೆರ್ನಾಡ್ ಡಿಸೋಜಾ, ಪಿಯಾದ್ ಮತ್ತು ಸಾಲಾ ವೇಗಸ್

ಪಾವ್ಲ್, ಬ್ಯಾಪ್ಟಿಸ್ಟ್ ಮತ್ತು ಅಲೆಗ್ಸಾಂಡರ್ ಡಿ'ಸಿಲ್ವಾ- ಬಂಟಗುರಿ ನಿಡ್ಡೆಲ್

ಸೆಬಾಸ್ಟಿಯನ್ ಪಿಂಟೊ ಮತ್ತು ಅವರ ಮಗ ಮಾರ್ಕ್ - ಗೊಕರ್ನ್ ನಿಡ್ಡೆಲ್

ಜೇಕಬ್ ಕಾಸ್ತೆಲಿನ್ ಮತ್ತು ಸೆಬಾಸ್ಟಿಯನ್ (ಬಾಬಿ) ಡಿ'ಕುನ್ಹಾ - ಮೇಲ್ತೋಟ

ಸೆಬಾಸ್ಟಿಯನ್ (ಶಾಬಿ) ಪಿಂಟೊ ಮತ್ತು ಕುಟುಂಬ - ಸಾನಗುರಿ

ಸಾಲ್ವದೊರ್ ರೇಗೊ ಮತ್ತು ಕುಟುಂಬ -ಸಾನಗುರಿ

ಕುಡುಪು ಪಂಜುರೆಲ್ : ಮೊಂತು ಮರಿಯಾನ್ ಡಿ'ಸಿಲ್ವಾ (ಮೊನ್ನಾ ಕಾಮತ್), ಅವರ

ಮಕ್ಕಳು ಜೊರ್ಜ್, ದಿಯೆಗೊ

ಜೊಸೆಫ್, ಮೈಕಲ್ (ಬಾಬ್ಬಿ) ಜೊನ್, ವಿಕ್ಟರ್, ಅಲ್ಫೊನ್ಸ್, ಸೆಬಾಸ್ಟಿಯನ್ (ಬಾಬಿ), ಸೆಬಾಸ್ಟಿಯನ್ (ಬಸ್ತ್ಯಾಂವ್), ಬೆರ್ನಾಡ್ ಫೆರ್ನಾಂಡಿಸ್

ಹಿಲರಿ ಗೌನ್ಸ್, ಸೆಬಾಸ್ಟಿಯನ್ ಗೌನ್ಸ್ - ಗುಂಡ್ಯೆ ಕುಡುಪು

ಸಾಂತಾನ್ ಲೋಬೋ ಪಿಲಿಕುಮೇರಿ, ಅವರ ಮಕ್ಕಳು ಸೆಬಾಸ್ಟಿಯನ್, ಅಲ್ಬರ್ಟ್ಸ್, ಜೋಕಿಮ್ ಡಿ'ಸಿಲ್ವಾ - ಯೆರ್ಮುಡಿ

ಗ್ರೆಗೋರಿ ಮೊಂತೇರೊ ಪೈ (ಗಿರ್ಗೊಲ್ ಪೈ), ಅವರ ಮಗ ಅಲ್ಬರ್ಟ್ ಮೊಂತೇರೊ ಪೈ (ಅಬುಟ್ ಪೈ)- ಕುಡುಪು

ಬಾಬ್ಬಿ ಮತ್ತು ಜೋನ್ ಡಿಸಿಲ್ವಾ - ಕುಡುಪು

ನಿಡ್ಡೆಲ್ : ರಾಫಾಯೆಲ್ ರೇಗೊ (ಇವರ 26 ಕಲಾವಿದರ ತಂಡವಿತ್ತು)

ಅವರ ತಮ್ಮ ಜೊನ್ ಅಲ್ಬರ್ಟ್ ರೇಗೊ, ತೋಮಸ್ ಡಿ'ಸಿಲ್ವಾ, ಗ್ರೆಗರಿ ಮಿನೇಜಸ್, ಕುಲ್ಮೇಕರ್ ಗೋಕರ್ನಾದ ಸಾಲ್ವದೊರ್ ಡಿಸೊಜಾ, ಬೇಸಿಲ್ ಡಿಸೋಜಾ, ಸೆಬಾಸ್ಟಿಯನ್ ಡಿ'ಸೋಜಾ, ಅಲ್ಬರ್ಟ್ ಮಿನೇಜಸ್, ಜೋಸೆಫ್ ಮಿನೇಜಸ್, ಬೊನಾ (ಅಲೆಕ್ಸ್) ಪಿರೇರಾ, ಮಾರ್ಟಿನ್ ಗೊನ್ಸಾಲ್ವಿಸ್, ಸೆಬಾಸ್ಟಿಯನ್ ಪಿಂಟೊ - ಮರೋಳಿ, ಫಾವುಸ್ತಿನ್ ರೇಗೊ, ಗಾಬ್ರಿಯಲ್ (ಗಾಬ್ರು) ರೇಗೊ, ಲೋರೆನ್ಸ್ ರೇಗೊ (ಲೊರ್ನು ನ್ಯಾಕ್), ಪಿಯಾದ್ ರೇಗೊ -ನೀರಪಾದೆ, ಇಮಾನುಯಲ್ (ಮೊನ್ನಾ) ಪಿಂಟೊ -ನಿಡ್ಡೆಲ್, ಲಿಯೊ ಕ್ರಾಸ್ತಾ, ಅಲೆಗ್ಸಾಂಡರ್ ಡಿಸಿಲ್ವಾ (ಅಲ್ಬು ಕಾಮತ್), ಸೆಬಾಸ್ಟಿಯನ್ ಡಿಸೋಜಾ, ಅಲ್ಫೊನ್ಸ್ ಮಿನೇಜಸ್, ಅಲ್ಫೊನ್ಸಸ್ ಪಿಂಟೊ, ಬೊನವೆಂಟರ್ ಪಿಂಟೊ, ಫ್ರಾನ್ಸಿಸ್ ಪಿಂಟೊ, ಲಿಯೊ ಪಿಂಟೊ, ಲಾರೆನ್ಸ್ ವೇಗಸ್, ಲಿಯೊ ವೇಗಸ್

ಕೀಲ್ಯೆ : ಅಲ್ಬರ್ಟ್ ಡಿ'ಸೋಜಾ, ಅಲ್ಬರ್ಟ್ ಮಿನೇಜಸ್, ಗ್ರೆಗರಿ ಪಿರೇರಾ, ಲಾರೆನ್ಸ್ ವಾಸ್, ಸೆಬಾಸ್ಟಿಯನ್, ಮರಿಯನ್, ರೊಸಾರಿಯೊ, ಜೊನ್ ಡಿ'ಸೋಜಾ, ದೇವಿಡ್ ಪಿರೇರಾ

ಕೌಡೂರು (ಗುರುಪುರ ಕೈಕಂಬ) : ಫ್ರಾನ್ಸಿಸ್ ರೇಗೊ, ಮಾರ್ಟಿನ್ ರೇಗೊ - ಬಜ್ಪೆ

ಬಂಟ್ವಾಳ : ಬಾಬು ಮತ್ತು ಮೊನ್ನಾ ವಾಸ್ -ಮೊಲೆಬಾವ್ ಫಾರ್ಲಾ

ಬೆಲ್ಜಾರ್ ರೊಡ್ರಿಗಸ್ -ಮೇನಾಡ್ ಕಾಡಬೆಟ್ಟು

ಸೆಬಾಸ್ಟಿಯನ್ ಪಾಯಸ್ - ಕಾಯರಗುಂಡಿ ಮೂಡು ನಡುಗೋಡು

ಸಾಲ್ವದೋರ್ ಸಿಕ್ವೇರಾ - ವಗ್ಗ

ಇಗ್ನೇಶಿಯಸ್ ಪಿರೇರಾ, ಅವರ ಮಕ್ಕಳು - ಪೆಟ್ರಿಕ್, ದೊಮಿಂಗೊ, ದನಿಯಲ್, ಹಿಲೆರಿ -ಮೂಡ್ಯೆಕೋಡಿ ಬೆಳ್ಳುರ್

ಸೆಬಾಸ್ಟಿಯನ್ ಫೆರ್ನಾಂಡಿಸ್ (ಶಾಬಿಶೆಟ್) ಅಂತೊನಿ ಪಿಂಟೊ -ಇರಾಜೆ ಮೊಡಂಕಾಪು

ಬಂಟ್ವಾಳ ಬೆಳ್ತಂಗಡಿ ರಸ್ತೆ : ಮಡಂತ್ಯಾರು ಬಂಗೇರಕಟ್ಟೆ ಶೇರಾ ಕುಟುಂಬದ ದಾಯಾದಿಗಳಾದ ಬ್ಯಾಪ್ಟಿಸ್ಟ್, ಬೆಂಜಮಿನ್, ಕೆಮಿಲ್, ಲಿಯೊ, ಲಿಗೊರಿ, ಲೂಯಿಸ್, ರೊಸಾರಿಯೊ

ಬೆಳ್ತಂಗಡಿ :

ಬಾರ್ಕೊಡಿ ಮೇಲಾಂತಬೆಟ್ಟು : ಗ್ರೆಗರಿ ಡಿಸೊಜಾ, ಸಂತಾನ್ ಡಿ'ಸೋಜಾ, ಮಾವ್ರಿಸ್ ಮೊನಿಸ್, ಸಂತಾನ್ ಮೊನಿಸ್, ಕೆಮಿಲ್ ಪಿಂಟೊ, ಬ್ಯಾಪ್ಟಿಸ್ಟ್ ವೇಗಸ್

ಬದ್ಯಾರ್ : ಲೂಯಿಸ್ ಕ್ರಾಸ್ತಾ, ಸಂತಾನ್ ಮತ್ತು ಸೈಮನ್ ಸಿಕ್ವೇರಾ, ಅತ್ರುಸ್ ಮತ್ತು ಜೇಕಬ್ ವೇಗಸ್

ಅರ್ವಾ : ಅಂತೊನಿ ಫೆರ್ನಾಂಡಿಸ್, ರೊಸಾರಿಯೊ ಫೆನಾಂಡಿಸ್, ಕೆಮಿಲ್ ಪಿರೇರಾ

ನಾಲ್ಕೂರು : ಜೊನ್ ಕ್ರಾಸ್ತಾ, ಪಿಯುಸ್ ಕ್ರಾಸ್ತಾ, ವಲೆರಿಯನ್ ಕ್ರಾಸ್ತಾ.

ಫಜೀರ್ / ಅಮ್ಮೆಂಬಳ : ಬೊನವೆಂಚರ್ (ಇಂತು) ನೊರೊನ್ಹಾ - ಫಜೀರ್

ಅಂತೊನಿ ಡಿ'ಸೋಜಾ ಮತ್ತು ಅವರ ಮಗ ಜೊನ್ ಬ್ಯಾಪ್ಟಿಸ್ಟ್ ಡಿಸೋಜಾ - ಅಮ್ಮೆಂಬಳ

ಅಲೆಗ್ಸಾಂಡರ್ ಮತ್ತು ದೇವಿಡ್ ರೊಡ್ರಿಗಸ್ (ಅಲ್ಸು ಮತ್ತು ದಾವಿದ್ ಪಡ್ವಳ್) - ಕುದಂಟೆ ಗ್ರಾಮ

ಆಗಸ್ಟಿನ್ ಡಿ'ಸೋಜಾ, ಸಾಲ್ವದೋರ್ ಡಿಸೋಜಾ, ಆಂತೊನಿ ಪಡ್ವಳ್, ಬೇಸಿಲ್ ಪಡ್ವಳ್ - ಚೇಳೂರ್ (ಕೊಪ್ಲ)

ಸಾಲ್ವದೋರ್ ಡಿಸೋಜಾ, ಬ್ಯಾಪ್ಟಿಸ್ಟ್ ಡಿ'ಸೋಜಾ, ಪುತ್ತು ಡಿ'ಸೋಜಾ, ಕೊಪ್ಪ ತೋಟ

ಪಾವ್ಲ್ ಪಡ್ವಳ್, ಅವರ ಮಗ ದೇವಿಡ್ ಪಡ್ವಳ್, ಮೊಮ್ಮಕ್ಕಳು ಸಾತುರ್ನೈನ್ ಮತ್ತು ವಿಲಿಯಮ್ ಪಡ್ವಳ್, ಸಹೋದರ ಸಾಲ್ವದೊರ್ ಪಡ್ವಳ್, ಅವರ ಮಕ್ಕಳು ಮಾರ್ಟಿನ್, ಕೆಮಿಲ್ ಮತ್ತು ಲೂಯಿಸ್, ಲೂಯಿಸ್ ಡಿ'ಸೋಜಾ - ಸಜಿಪ

ಮಿಯಾರು (ಕಾರ್ಕಳ) : ಡೇವಿಡ್ ಕೊರೆಯ, ಆಲ್ಬರ್ಟ್ ಡಿ'ಸೋಜಾ, ದೇವಿದ್ ಡಿ'ಸೋಜಾ , ಲೂಯಿಸ್ ಡಿ'ಸೋಜಾ ಪಾವ್ಲ್ ಡಿ'ಸೋಜಾ, ಇಸಿದೋರ್ ಪಿರೇರಾ, ಆಲ್ಫೊನ್ಸಸ್

ವಾಸ್, ಲೂಯಿಸ್ ವಾಸ್, ಅಬ್ರಹಾಮ್ ಡಿ'ಸೋಜಾ, ಜೊನ್ ಡಿ'ಸೋಜಾ, ಮಾರ್ಸೆಲ್ ಡಿ'ಸೋಜಾ, ಬೊನವೆಂಚರ್ ತಾವ್ರೊ.

ಮೂಡಬಿದ್ರೆ :

- **ಹೊಸ್ಪೆಟ್ :** ಅಂತೊನಿ ಡಿ'ಸೋಜಾ, ಮಾರ್ಸೆಲ್ ಮೆಂಡೊನ್ಸಾ, ವಿಕ್ಟರ್ ಸಾಂತು ಮಾಯರ್ ಮತ್ತು ತಂಡ

ತಾಕೊಡೆ : ಆಲ್ಫೊನ್ಸಸ್ ಕ್ರಾಸ್ತಾ, ಬಾಬಿನ್ ಕ್ರಾಸ್ತಾ, ಲಾರೆನ್ಸ್ ಕ್ರಾಸ್ತಾ, ಸೆಬಾಸ್ಟಿಯನ್ ಕ್ರಾಸ್ತಾ, ಕ್ಷೇವಿಯರ್ ಧೊಂದ್, ಬೆಂಜಮಿನ್ ಲೋಬೋ, ಆಗಸ್ಟಿನ್ ನಜ್ರೆತ್, ಕೊಂಬ್ಲೊ ಪಿಂಟೊ

ನಾರಾವಿ / ನೆಲ್ಲಿಕಾರ್ :

ನಾರಾವಿ: ಕ್ಷೇವಿಯರ್ ರೊಡ್ರಿಗಸ್, ಅವರ ಮಗ ಮತಾಯಸ್ ರೊಡ್ರಿಗಸ್, ಮೊಮ್ಮಗ ಆಗಸ್ಟಿನ್, ಬೆಂಜಮಿನ್, ದೇವಿಡ್, ಸಾಲ್ವದೋರ್

ಬಾಲ್ಜಾರ್ ಫೆರ್ನಾಂಡಿಸ್ - ಡಂಬಡ ನಾರಾವಿ

ಮಾಂಟ್ರಾಡಿ : ಡಿಸಿಲ್ವಾ ಕುಟುಂಬದ ಬ್ಯಾಪ್ಟಿಸ್ಟ್, ರೊಸಾರಿಯೊ ಮತ್ತು ಅವರ ಮಗ ಇಗ್ನೇಶಿಯಸ್ ಸೆಬಾಸ್ಟಿಯನ್

ಜೊನ್ ಡಿಸೋಜಾ, ಸೆಬಾಸ್ಟಿಯನ್ ಡಿ'ಸೋಜಾ, ಜೊನ್ ಪಿರೇರಾ

ನಾಂಡಿಲ : ಲೂಯಿಸ್ ಫೆರ್ನಾಂಡಿಸ್ ಅವರ ಮಗ ಪಾವ್ಲ್ ಫೆನಾಂಡಿಸ್

ಶಿರ್ತಾಡಿ : ಇಗ್ನೇಶಿಯಸ್ ಕುತಿನ್ಹಾ ಮತ್ತು ಆಲ್ಫೊನ್ಸಾ ಡಯಾಸ್

ನೆಲ್ಲಿಕಾರ್ : ಗ್ರೆಗೊರಿ (ಗಿರ್ಗೊಲ್) ತಾವ್ರೊ, ಫ್ರಾನ್ಸಿಸ್ (ಪ್ರೊರಾಸ್ಕ್) ತಾವ್ರೊ, ಆವೆಲಿನ್ (ಅವ್ಲ) ಮೊಂತು ಮತ್ತು ಸೆಬಾಸ್ಟಿಯನ್ (ಬೊಸ್ತು) ರೊಡ್ರಿಗಸ್

ಒಮ್ಜೂರ್ : ಸಾಲ್ವದೋರ್ ಡಿ'ಸೋಜಾ ಪಕ್ಕಳಪಾದೆ, ಪಾದೆಮಾರ್ ಲೋಬೋ, ಲೂಯಿಸ್ ಮತ್ತು ಮಾರ್ಸೆಲ್ ಡಿ'ಸೋಜಾ ಕೊಡ್ಮಣ್, ಅಲೆಕ್ಸ್ ಸಲ್ದಾನ್ಹಾ ಮೆರ್ಲಪದವು, ಸೆಬಾಸ್ಟಿಯನ್ ಡಿ'ಸೋಜಾ ಪೊಯ್ಯಬಯ್ಲ್, ರೊಸಾರಿಯೊ ಡಿ'ಸೋಜಾ , ಕಜೆತಾನ್ ಶೆಟ್ ಮತ್ತು ಸೆಬಾಸ್ಟಿಯನ್ ಶೆಟ್ - ತೇವು ವಾಢೆ, ತೊಮಾಸ್ ಡಿ'ಸಿಲ್ವಾ ಮತ್ತು ಅವರ ಮಗ ಪಿಯಾದ್ -ಮೇರೆಮಜಲು, ವಿಲಿಯಮ್ ರಸ್ಕಿನ್ಹಾ

ಜೇಕಬ್ ಲೋಬೋ, ಅವರ ಮಗ ಸೆಬಾಸ್ಟಿಯನ್ ಲೋಬೊ, ಲಿಗೊರಿ ಲೋಬೋ ಮತ್ತು ಇಸಾಕ್ ಪಿರೇರಾ - ಬಾಡೂರ್ ಒಮ್ಜೂರ್.

ಆಲ್ಬರ್ಟ್ ಲಸ್ರಾದೊ, ಮಾರ್ಸೆಲ್ ಲಸ್ರಾದೊ, ಜೋಸೆಫ್ ಲೋಬೊ, ಜೇಕಬ್ ಮಿಸ್ಕಿತ್, ಜೊನ್ ಪಡ್ವಳ್, ಕಾಸ್ಮಿರ್ ಪಿರೇರಾ, ಜೇಕಬ್ ಪಿರೇರಾ, ಕ್ಷೇವಿಯರ್ ಪಿರೇರಾ, ಜೊನ್ ಸಲ್ಡಾನ್ಹಾ, ತೋಮಸ್ ಸಲ್ದಾನ್ಹಾ ಮತ್ತು ಪೀಟರ್ ವಾಸ್ - ಒಮ್ಜೂರ್.

ಪೇಜಾರ್ - ಫ್ರಾನ್ಸಿಸ್ ಡಿ'ಸೋಜಾ (ಅಬ್ರಹಾವ್ ಡಿ'ಸೋಜಾ = ಆ. ಬಾ. ಲಂಡನ್‌ರವರ ತಂದೆ) ಕ್ಷೇವಿಯರ್ ಕುತಿನ್ಹಾ, ಕಾಸ್ಮಿರ್ ಡಿ'ಸೋಜಾ

ಚಾರ್ಲ್ಸ್ ಡಿ'ಸೋಜಾ, ಜೇಕಬ್ ಡಿ'ಸೋಜಾ , ಮಾರ್ಸೆಲ್ ಫೆರ್ನಾಂಡಿಸ್, ಬೇಸಿಲ್ ಡಿ'ಸೋಜಾ, ಜೊನ್ ಫೆರ್ನಾಂಡಿಸ್, ಆಲ್ಬರ್ಟ್ ರೊಡ್ರಿಗಸ್ - ಕುತ್ತೆತ್ತೂರ್

ಪುತ್ತೂರು : ಮೊನ್ಸಾ ಮಸ್ಕರೇನ್ಹಸ್ ಬಟ್ಟಾದರ್, ಅಲೆಗ್ಸಾಂಡರ್ (ಅಲ್ಸು) ಡಿ'ಸೋಜಾ ಮತ್ತು ಅವರ ಮಗ ಜೋಸೆಫ್, ವಲೇರಿಯನ್ ಮತ್ತು ಚಾರ್ಲ್ಸ್ - ಏಳ್ಮುಡಿ, ಅಲೆಕ್ಸ್ ಮತ್ತು ಸಿಲ್ವೆಸ್ಟರ್ ಮಸ್ಕರೇನ್ಹಸ್ - ಹೆಬ್ಬಾರಮೈಲ್

ವೇಣೂರು - ಜೇಕಬ್ ಮೊಂಡೊನ್ಸಾ ಮತ್ತು ಬಾಬ್ಲಿ ಮಸ್ಕರೇನ್ಹಸ್ - ಪೆರ್ಮುಡ. ಆಲ್ಬರ್ಟ್, ಮರಿಯಾನ್, ಮೊಂತು ಮತ್ತು ಜೆರ್ಮಿಯನ್ ಮೊರಾಸ್ - ಪಡ್ಡಂದಡ್ಕ. ಕರಿಮನೆಲ್ ಲೋಬೊ ಕುಟುಂಬ ಪೆರ್ಮುಡ, ಮೆಂಡೋನ್ಸಾ ಕುಟುಂಬ -ಪೆರ್ಮುಡ

ಕೊರ್ಡಿಯೆರೊ ಕುಟುಂಬ -ಪೆರ್ಮುಡ

ಕರಿಮನೆಲ್ ಕುಟುಂಬ -ಪೀಟರ್ ಲೋಬೋ ಮತ್ತು ಅವರ ಮಗ ತೊಮಸ್ ಲೋಬೋ

ಮೆಂಡೋನ್ಸಾ ಕುಟುಂಬ - ಜೇಕಬ್ ಮೆಂಡೋನ್ಸಾ, ಅವರ ಮಕ್ಕಳು ಮೆನುಯಲ್ ಮತ್ತು ಮೌರಿಸ್ ಮೆಂಡೊನ್ಸಾ

ಕೊರ್ಡಿಯೆರೊ ಕುಟುಂಬ - ಬೆಂಜಮಿನ್ ಮತ್ತು ಅವರ ಮಗ ಮೊಂತು, ಸಹೋದರ ಫ್ರಾನ್ಸಿಸ್ ಕೊರ್ಡಿಯೆರೊ

ಇತರ ಪ್ರದೇಶಗಳು :

ಅಮ್ಮುಂಜೆ - ಫ್ರಾನ್ಸಿಸ್, ಸಂತಾನ್, ಸೆಬಾಸ್ಟಿಯನ್, ಬ್ಯಾಪ್ಟಿಸ್ಟ್ -ಕುತಿನ್ಹಾ ಸಹೋದರರು

ಕಟೀಲು - ಬೆಂಜಮಿನ್ ಲೋಬೋ

ಕೊಡ್ಮಣ್ - ಮಾರ್ಸೆಲ್ ಡಿಸೋಜಾ

ಕುಪ್ಪೆಪದವು - ಸೆಬಾಸ್ಟಿಯನ್ ಪಿಂಟೊ, ದೊಮಿಂಗೊ ರೊಜಾರಿಯೊ

ಮೊಗರ್ನಾಡ್ - ಪಾವ್ಲ್ ಮಸ್ಕರೇನ್ಹಸ್

ಮೂಡುಬೆಳ್ಳೆ - ಲಾಜರಸ್ (ಲಾದ್ರು)

ಪಾಲಡ್ಕ - ಸೆಬಾಸ್ಟಿಯನ್ (ಬಾಬಿ) ರೊಡ್ರಿಗಸ್

ಪೆರ್ಮಾಯಿ - ಪಾಸ್ಕಲ್ ಲೋಬೊ, ಜೊನ್ ಮತ್ತು ಸೆಬಾಸ್ಟಿಯನ್ ಡಿಸೋಜಾ

ಸಿದ್ದಕಟ್ಟೆ - ಮೈಕಲ್ ಮೊರಾಸ್

ವಿಟ್ಲ - ಸೆಬಾಸ್ಟಿಯನ್ (ಬಾಬಿ) ಸಿಕ್ವೇರಾ

ಗುಮಟೆ ಕುಟುಂಬಗಳು :

ಅಮ್ಮಾಡಿ -ಡಿ'ಸೋಜಾ ಕುಟುಂಬ

ಬಂಟ್ವಾಳ -ನೊರೊನ್ಹಾ ಕುಟುಂಬ

ಕೌಡೂರು - ರೊಡ್ರಿಗಸ್ ಮತ್ತು ಪಿಂಟೊ ಕುಟುಂಬ

ತಡಂಬಿಲ್ - ಮೊಂತೇರೊ ಕುಟುಂಬ

ಕೆಮ್ಮಣ್‌ಕುದ್ರು - ಮಿನೆಜಸ್ ಕುಟುಂಬ

ಯೆಕ್ಕಾರು - ಪಿಂಟೊ ಕುಟುಂಬ

ಸಿದ್ಧಿ ಸಮುದಾಯದಲ್ಲಿ ಗುಮಟೆ : ದಕ್ಷಿಣ ಆಫ್ರಿಕಾ ಮೂಲದವರಾದ ಸಿದ್ಧಿ ಸಮುದಾಯ ನೀಗ್ರೋಯಿಡ್ ಸಂತತಿಯ ದೈಹಿಕ ಲಕ್ಷಣಗಳನ್ನು ಹೊಂದಿರುವ ಜನಾಂಗ. ಕರಿವರ್ಣದ ಬಲಿಷ್ಠ ಅಂಗರಚನೆ, ಅಗಲ ಹಾಗೂ ದಪ್ಪವಾದ ತುಟಿಗಳು, ಗುಂಗುರು ಕೂದಲು, ಸೊಟ್ಟ ಮೂಗು, ನಾಚಿಕೆಯ ಸ್ವಭಾವ - ಮುಂತಾದ ಚಹರೆಗಳಿಂದ ಸಿದ್ಧಿ ಜನರನ್ನು ಸುಲಭವಾಗಿ ಗುರುತಿಸಬಹುದು. 'ಸಿದ್ಧಿ' ಅಥವಾ 'ಕಾಫಿರ್' ಅಂದರೆ 'ಕೂಲಿಕಾರ' ಎಂಬುದಾಗಿ ಸರ್ ಹರ್ಬರ್ಟ್ ರಿಸ್ಲೇ ಎಂಬ ವಿದ್ವಾಂಸರು ಅರ್ಥ ನೀಡಿದ್ದಾರೆ.

ಆಫ್ರಿಕಾದಿಂದ ಬಂಗಾಲದ ರಾಜರು ತಂದ ಗುಲಾಮರೇ ಇಂದಿನ 'ಸಿದ್ಧಿ' ಜನಾಂಗ ಎಂಬ ಒಂದು ನಂಬಿಕೆ ಇದೆ. ಮುಸ್ಲಿಂ ಆಡಳಿತಗಾರರಾದ ರಾಜರು ಭಾರತದ ಮೇಲೆ ಆಕ್ರಮಣ ಮಾಡಿದಾಗ ಚಕ್ರವರ್ತಿ ರುಕ್ನುದ್ದೀನ್ ಬರ್ಬಾಕ್ (1459 - 1474) ನು ಸಿದ್ಧಿಯರನ್ನು ಬಂಗಾಳದಿಂದ ಓಡಿಸಿದ. ಪುನಃ ಅಲ್ಲಾವುದ್ದೀನ್ ಹುಸೇನ್ (1493-1519) ನು ಸಿದ್ಧಿಯರ ಮೇಲೆ ದಬ್ಬಾಳಿಕೆ ನಡೆಸಿದನು. ಹೀಗೆ ದಕ್ಷಿಣಕ್ಕೆ ವಲಸೆ ಬಂದು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ನೆಲೆನಿಂತ ಸಿದ್ಧಿ ಜನಾಂಗ ಪೋರ್ಚುಗೀಸರ ಆಡಳಿತ ಕಾಲದಲ್ಲಿ ಕರ್ನಾಟಕಕ್ಕೆ ಬಂದವರು ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ವಸತಿ ಮಾಡಿಕೊಂಡರು.

ಸಂಶೋಧಕರ ಮತ್ತು ಜನಾಂಗೀಯ ಅಧ್ಯಯನಕಾರರ ಇನ್ನೊಂದು ತೀರ್ಮಾನ ಪ್ರಕಾರ - ಪೋರ್ಚುಗೀಸರು ಆಫ್ರಿಕಾದಲ್ಲಿಯ ತಮ್ಮ ರಾಜಾಡಳಿತಕ್ಕೊಳಪಟ್ಟ ಮೊಜಾಂಬಿಕ್ ಪ್ರದೇಶದಿಂದ ಸಿದ್ಧಿಯರನ್ನು ಭಾರತಕ್ಕೆ ಗುಲಾಮರಾಗಿ ಮತ್ತು ಸೈನಿಕರಾಗಿ ತಂದರು. ಪೋರ್ಚುಗೀಸರ ಸೇನೆಗಳಿಂದ ತಪ್ಪಿಸಿಕೊಂಡು ಓಡಿ ಬಂದ ಸಿದ್ಧಿಯರು ಉತ್ತರ ಕನ್ನಡದ ಸುಪಾ, ಹಳಿಯಾಳ, ಯಲ್ಲಾಪುರ, ಮುಂಡಗೋಡು, ಸಿರಸಿ, ಅಂಕೋಲಾ - ಈ ಊರುಗಳ ಕಾಡು ಮೇಡುಗಳಲ್ಲಿ ಅಡಗಿಕೊಂಡು ಜೀವಿಸಿದರು. ಪ್ರಕೃತ ಸಿದ್ಧಿ ಸಮುದಾಯದಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ - ಮೂರೂ ಧರ್ಮಗಳಿಗೆ ಸೇರಿದ ಸಿದ್ಧಿಯರಿದ್ದಾರೆ ಆದರೂ ಹೆಚ್ಚಿನವರು ಕೊಂಕಣಿ ಮಾತೃಭಾಷೆಯವರಾಗಿದ್ದಾರೆ.

ಸಮಾಜದ ಉತ್ತಮ ವರ್ಗದವರೆನಿಸಿದ ಜನತೆ ಹಿಂದಿನಿಂದಲೂ ಸಿದ್ಧಿಯರನ್ನು ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಂಡಿದ್ದಾರೆ. ಆದುದರಿಂದ ಈ ಶೋಷಿತ ವರ್ಗ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸುಧಾರಣೆಗೊಳ್ಳದೆ, ತುಂಬಾ ಹಿಂದುಳಿದು, ಸುಧಾರಿತ ಸಮಾಜದಿಂದ ತುಳಸಿಕೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು. ಆದರೆ, ಈ ಸಮುದಾಯದಲ್ಲಿ ಜೀವಂತವಾಗಿರುವ ಜಾನಪದ ಸಂಗೀತ, ಸಂಪ್ರದಾಯ ಬದ್ಧ ನೃತ್ಯ, ಮತ್ತು ಸಂಗೀತ ಸಾಧನ ಸಹಿತ ಪ್ರಸ್ತುತ ಪಡಿಸುವ ಜನಪದ ಸಾಹಿತ್ಯಭರಿತ ಜಾನಪದ ಕಲೆ ಶ್ರೀಮಂತವಾಗಿದೆ. ಸಿದ್ಧಿ ಸಮಾಜದವರು ಪ್ರದರ್ಶಿಸುವ "ಘುಗ್ಗಿ ನಾಚ್" ನೃತ್ಯ ಒಂದು ಪ್ರಭಾವಿ ಕಲೆ. ಸ್ತ್ರೀಯರು ವರ್ತುಳಾಕಾರದಲ್ಲಿ ನಿಂತು, ಕೈಗಳಲ್ಲಿ ಬಿಂದಿಗೆಗಳನ್ನು ಹಿಡಿದುಕೊಂಡು ಬಿಂದಿಗೆಯೊಳಗೆ ಬಾಯಿಯಿಂದ ಗಾಳಿ ಊದುತ್ತಾ, ವಿವಿಧ ರೀತಿ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಬಿಂದಿಗೆ ಹಿಡಿದುಕೊಳ್ಳದೆಯೂ ಖಾಲಿ ಕೈಗಳಿಂದ ಚಪ್ಪಾಳೆ ತಟ್ಟುತ್ತಾ ಕುಣಿಯುವುದೂ ವಾಡಿಕೆಯಲ್ಲುಂಟು. ಹೀಗೆ ನೃತ್ಯ ಮಾಡುವಾಗ ಹಾಡುಗಳನ್ನು ಹಾಡುತ್ತಾ 'ಗುಮಟೆ' ಬಾರಿಸುತ್ತಾರೆ. ಗುಮಟೆಯೊಂದಿಗೆ ತಾಳ ಬಾರಿಸುವುದೂ ರೂಢಿಯಲ್ಲಿದೆ.

ಕುಡುಬಿಯರ ಗುಮಟೆ ಚೀನಿಕಾಯಿ ಆಕಾರದಲ್ಲಿದ್ದರೆ, ಸಿದ್ಧಿ ಜನರ ಗುಮಟೆ ಬಿಂದಿಗೆಯ ಆಕಾರದಲ್ಲಿರುತ್ತದೆ. ಗುಮಟೆಗೆ ಉಡದ ಚರ್ಮವನ್ನು ಹೊದೆಸುವುದು ಸರ್ವತ್ರ ಚಾಲ್ತಿಯಲ್ಲಿದೆಯಾದರೂ ಸಿದ್ಧಿಯರು ಶಿಕಾರಿಯಲ್ಲಿ ಸಿಕ್ಕಿದ ಕಾಡುಕುರಿಯ ಚರ್ಮವನ್ನು ಬಳಸುವುದನ್ನು ಕಾಣಬಹುದು. ಗುಮಟೆ ಬಾರಿಸಿ ಹಾಡುತ್ತಾ ರಾತ್ರಿಯಿಡೀ ಇವರು ಕುಣಿಯುತ್ತಾರೆ. ಸಿದ್ಧಿಯವರಲ್ಲೂ ಪುರುಷರು ಮಾತ್ರ ಗುಮಟೆ ಬಾರಿಸುತ್ತಾರೆ. ಆದರೆ ಪುರುಷರು ಗುಮಟೆ ನುಡಿಸುವಾಗ ಗಂಡಸರು, ಮಹಿಳೆಯರು, ಯುವಕ, ಯುವತಿಯರು, ಪ್ರಾಯಸ್ಥರು, ಮಕ್ಕಳು, ಗಂಡು ಹೆಣ್ಣು ಎಂಬ ಪ್ರಾಯಬೇಧವಿಲ್ಲದೆ ಒಟ್ಟಿಗೆ ಕುಣಿಯುವುದು ಇವರ ವಿಶೇಷತೆ. ಇಡೀ ದಿನ ಕಷ್ಟದ ಕಾಯಕ ಮಾಡಿ, ರಾತ್ರಿ ಊಟವಾದ ಮೇಲೆ ಹಾಡುಗಳನ್ನು ಹಾಡುತ್ತಾ, ಗುಮಟೆ ಬಾರಿಸುವುದು ಸಿದ್ಧಿ ಜನಾಂಗದ ಒಂದು ಸಾಮುದಾಯಿಕ ಜಾನಪದ ಸಂಪ್ರದಾಯ. ಸಿದ್ಧಿ ಸಮಾಜದಲ್ಲಿ 'ಧಮಾಮ್ ಮತ್ತು ಡಪ್ಪ್' ಎಂಬ ಇನ್ನೆರಡು ಪ್ರಮುಖ

ಸಂಗೀತ ಸಾಧನಗಳು ಬಳಕೆಯಲ್ಲಿವೆಯಾದರೂ ಗುಮಟೆಗೂ ಇಲ್ಲಿ ಅಷ್ಟೇ ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಸಿದ್ದಿಯರ ಹಾಡುಗಳು

ಘುಗ್ಗಿ ಗೀತೆ -

1. ಯಾವೋ ರಂಗಾ ರಂಗಾನಿ ಗೋ
ಅನಿ ಉಬಾನಿ ಪುಗಡಿ, ಗಾಲ್ತಾಮುಗೋ
ತುಜೋ ಮಾಂವ ಅಸಾ, ಮನುನ ಲಜನಾಕಾಗೋ
ಅನಿ ಸುಂದರ ಪುಗಡಿ, ಗಾಲ್ತಾಮುಗೋ
ಆನಿ ನಾಜುಕ ಪುಗಡಿ ಗಾಲ್ತಾಮುಗೊ
ಗುಲಾಬಿ ಹೊನ್ನಿಚ್ಯಾ ಹೊಟ್ಯಾತ ಕಾಯ್
ಚಿರಮುರೆ, ಚಿರಮುರೆ, ಬ್ಯೆಮುಂಗಾಗೋ
ಚಿರಮುರೆ, ಚಿರಮುರೆ, ಬ್ಯೆಮುಂಗಾಗೋ
ಜೊಪಯ್, ಜೊಪಯ್, ಜೊಪಯ್, ಜೊಪಯ್

2. ಆಹೋ ಗೌರ, ಗೌರಮುಗೋ
ಆಹೋ ಗೌರ, ಗೌರಮುಗೋ
ಬಸುನ ಪುಗಡಿ, ಗಾಲ್ತಾಮುಗೋ
ಆಹೋ ಗೌರಾ ಗೌರಾಮುಗೋ, ಆಹೋ ಗೌರಾ ಗೌರಾಮುಗೋ
ಉಟುನ ಪುಗಡಿ ಗಾಲ್ತಾಮುಗೋ
ಪಿರುನ ಪಿರುನ, ಪುಗಡಿ, ಗಾಲ್ತಾಮುಗೋ
ಆಹೋ ಗೌರಾ ಗೌರಾಮುಗೋ, ಆಹೋ ಗೌರಾ ಗೌರಾಮುಗೋ
ಗೋಯೆಲಾ ಮನುನ, ಲಜುನಾಕಾಗೋ
ಲಜುನಾಕಾಗೋ ತಿಂಯಾ, ಲಜುನಾಕಾಗೋ

ಆಹೋ ಗೌರಾ ಗೌರಾಮುಗೋ

ಪಿರುನ,ಪಿರುನ, ಪುಗುಡಿ, ಗಾಲ್ತಾಮುಗೋ

ಜಾಂವಂಯ್, ಯೇಲಾ,ಮನುನ ಲಜುನಾಕಾಗೋ

ಮಾಮಾ ಯೇಲಾ ಮನುನ ಲಜುನಾಕಾಗೋ

ಲಜುನಾಕಾಗೋ ತಿಂಯಾ, ಲಜುನಾಕಾಗೋ

ಹೊಂಜಿಯೇಲಾ, ಮನುನ ಲಜುನಕಾಗೋ

ಲಜುನಾಕಾಗೋ ತಿಂಯಾ ಲಜುನಕಾಗೋ

ಬಸುನ ಪುಗುಡಿ, ಗಾಲ್ತಾ ಮುಗೋ

ಉಟುನ ಪುಗುಡಿ, ಗಾಲ್ತಾಮುಗೋ

ಇಬ್ಯಾನಿ ಪುಗುಡಿ, ಗಾಲ್ತಾಮುಗೋ

ಜೀರಿ ಮೀರಿ ಪುಗುಡಿ, ಗಾಲ್ತಾಮುಗೋ

ಉರಪಾಟಿ ಚೀರಪಾಟಿ, ಗಾಲ್ತಾ ಮುಗೋ

ಬಸುನ ಪುಗುಡಿ, ಗಾಲ್ತಾಮುಗೋ

ಉಟುನ ಪುಗುಡಿ, ಗಾಲ್ತಾಮುಗೋ

ಧೀರ್ ಯೇಲಾ ಮನುನ, ಲಜುನಕಾಗೋ

ಲಜುನಕಾಗೋ ತಿಂಯಾ, ಲಜುನಕಾಗೋ

ವರಸಾಚೊ ಸಣ, ಆಯ್ಲಾ ಮುಗೋ

ದೇವ್ ಯೇಲಾಗೋ ತಿಕಾ, ದೇವ್ ಯೇಲಾಗೋ

ದೇವ್ ಯೋಲಾಗೋ ತಿಕಾ, ದೇವ್ ಯೇಲಾಗೋ

ಘೋ ಯೆಲಾ ಮನುನ ಲಜುನಾಕಾಗೋ

ಪುಗಡಿ ಲಾಲಿಗೋ, ಟೀಕಾ ಪುಗಡಿ ಲಾಲಿಗೋ

3. ಚಾಕಮಾರಿ, ಚಾಕಮಾರಿ, ಜಾಕರಾಚಿ

ಕಂಬರಮೊಡ್ಡಾ ಪಾಕರಾಚಿ

ಜಾಯೆಕ, ಜಾಯೆನ, ಸಿಕಯಿಲೆ

ಖಾಕೆತ್, ಬಾಕರಿ ನಿಪಯಿಲೇ

ಯೇಗೇ ಜಾಯೇ, ಜಾಂವಾ

ಪಾನಯಾಚ್ಯಾ ವಾಟೆರ್, ಕಾಂವಾ

ಆ ಬೊಲಿಚ್ಯೆ ಫೂಲ್, ತೆವೆಲೋ ಮತ್ಯಾಕ್

ಗುಂ ಬಾಯೆ, ಗುಂ ಪಡೊಳೆಂ ಗು

ಸಿದ್ಧಿ ಜನಪದರು ಈ ಹಾಡುಗಳನ್ನು ತಮ್ಮದೇ ಆದ ವಿಶಿಷ್ಟ ಶೈಲಿಯ ಜಾನಪದ ರಾಗದಿಂದ ಹಾಡುತ್ತಾರೆ. ಈ ಕಲೆಯನ್ನು ಸಾದರಪಡಿಸುವ ಕಲಾಕಾರರು ಕ್ರಿಶ್ಚಿಯನ್, ಹಿಂದೂ, ಮುಸ್ಲಿಮ್ - ಈ ಮೂರೂ ಧರ್ಮಗಳಲ್ಲಿದ್ದಾರೆ. ಈ ಪೈಕಿ ಯಲ್ಲಾಪುರದ ಮಿಂಗೆಲ್ ಆಂತೋನಿ ಸಿದ್ಧಿ ಮತ್ತು ಪರಶುರಾಮ್ ಗಿರ್‌ಗೋಲಿ ಸಿದ್ಧಿ-ಇವರಿಗೆ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಕ್ರಮಾನುಸಾರ 2001 ಮತ್ತು 2003 ವರ್ಷಗಳ 'ಗೌರವ ಜಾನಪದ ಪ್ರಶಸ್ತಿ' ನೀಡಿ ಸನ್ಮಾನಿಸಿದೆ. ಸಿದ್ಧಿ ಸಮಾಜದ ಜಾನಪದ ಗೀತೆಗಳು ಮುಂದಿನ ಪೀಳಿಗೆಗೆ ಲಭ್ಯವಾಗುವಂತೆ ಸಿದ್ಧಿ ಸಮುದಾಯದ ಫ್ರಾನ್ಸಿಸ್ ಜೆ. ಹರ್‍ನೊಡ್‌ಕರ್ - ಇವರು ಸಂಗ್ರಹಿಸಿದ 'ಸಿದ್ಧಿ ಲೋಕ್‌ಗೀತ್' ಎಂಬ ಪುಸ್ತಕವನ್ನು 2007 ರಲ್ಲಿ ಕೊಂಕಣಿ ಅಕಾಡೆಮಿಯು ಪ್ರಕಟಿಸಿದೆ.

ಕೊಂಕಣಿ ಖಾರ್ವಿ ಸಮುದಾಯದಲ್ಲಿ ಗುಮಟೆ : ಸಮಾಜದಲ್ಲಿರುವ ವಿವಿಧ ಜೀವನ ಪದ್ಧತಿಗಳಲ್ಲಿ ಮೀನುಗಾರಿಕೆಯೂ ಒಂದು ಪ್ರಾಚೀನ ಜೀವನ ಪದ್ಧತಿ. ಈ ಮೀನುಗಾರಿಕೆಯನ್ನು ಕುಲವೃತ್ತಿಯನ್ನಾಗಿ ಸ್ವೀಕರಿಸಿರುವ ಸಮುದಾಯಗಳ ಪೈಕಿ ಕರ್ನಾಟಕದಲ್ಲಿ ವಾಸ್ತವ್ಯವಿರುವ ಕೊಂಕಣಿ ಖಾರ್ವಿ ಜನಾಂಗವೂ ಒಂದು ಪ್ರಮುಖ ಪಂಗಡ. ಪ್ರಕ್ಷುಬ್ಧ ಸಮುದ್ರದಲ್ಲಿ ಅಲೆಗಳೊಂದಿಗೆ ಆಟವಾಡುತ್ತಾ ಮೀನು ಹಿಡಿಯುವುದು ಇವರಿಗೆ ಜನ್ಮದಿಂದ ಬಂದಂತಹ ಅನಿವಾರ್ಯ ಜೀವನೋಪಾಯ. ಮೀನು ಹಿಡಿಯುವುದು, ಮಾರುವುದು, ಒಣಗಿಸುವುದು, ದೋಣಿಗಳನ್ನು ತಯಾರಿಸುವುದು, ಬಲೆಗಳನ್ನು ನೇಯುವುದು ಮುಂತಾದ ಮೀನುಗಾರಿಕೆಗೆ ಸಂಬಂಧಪಟ್ಟ ವಿವಿಧ ಉದ್ಯೋಗಗಳಲ್ಲಿ ಪ್ರಾಯ ಹಾಗೂ ಲಿಂಗಭೇದವಿಲ್ಲದೆ ನಿರತರಾಗಿರುತ್ತಾರೆ. ಖಾರ್ವಿಯರು ಸಮುದ್ರ ಮಾತ್ರವಲ್ಲದೆ ನದಿಗಳಲ್ಲಿ ಕೊಳ, ಕೆರೆಗಳಲ್ಲಿಯೂ ಮೀನುಗಾರಿಕೆ ಮಾಡುತ್ತಾರೆ. ಖಾರ್ವಿ ಜನಾಂಗ ದಿನದ ಎರಡುಹೊತ್ತಿನ ಗ್ರಾಸಕ್ಕಾಗಿ ಪ್ರತಿದಿವಸ ರಾತ್ರಿ ಹಗಲುಗಳ ಪರಿವೆಯಿಲ್ಲದೆ ದುಡಿಯುವ ಬಡ, ಕಷ್ಟಜೀವಿಗಳು. ಇವರ ಮಾತೃಭಾಷೆ

ಕೊಂಕಣಿ. ಆದುದರಿಂದ ಇವರು 'ಕೊಂಕಣಿ ಖಾರ್ವಿ ಜನಾಂಗ'.

ಖಾರ್ವಿಯವರಲ್ಲಿ, ಕುಂದಾಪುರದಲ್ಲಿ ಕನ್ನಡ ಮಾತೃಭಾಷೆಯ 'ಕೆಮ್ಮಣ್ ಖಾರ್ವಿ' ಮತ್ತು ಕಾರವಾರದಲ್ಲಿ 'ಹರಿಕಂತ್ರ' ಎಂಬ ಇನ್ನೆರಡು ಉಪಪಂಗಡಗಳಿವೆ. ಹಾಗೆಯೇ ಕೊಂಕಣಿ ಮಾತನಾಡುವ 'ಖಂಡೆಖಾರ್ವಿ' ಎಂಬ ಮೀನುಗಾರಿಕಾ ವೃತ್ತಿಯ ಜನರೂ ಇದ್ದಾರೆ. ಆದರೆ ಕೊಂಕಣಿ ಖಾರ್ವಿ ಮತ್ತು ಈ ಪಂಗಡದವರಿಗೆ ಯಾವುದೇ ಸಂಬಂಧವಿಲ್ಲ. ಪೋರ್ಚುಗೀಸರ ದಬ್ಬಾಳಿಕೆಯ ಕಾಲದಲ್ಲಿ ಗೋವಾದಿಂದ ಕರ್ನಾಟಕಕ್ಕೆ ವಲಸೆ ಬಂದ ಖಾರ್ವಿಯರ ವಸತಿ ಕಾರವಾರದಿಂದ ಮಂಗಳೂರುವರೆಗಿನ ಕರಾವಳಿ ಪ್ರದೇಶಗಳಲ್ಲಿ ಇರುವುದನ್ನು ಕಾಣಬಹುದು. ಸಮುದ್ರ ತೀರದಲ್ಲೆ ಗುಡಿಸಲು, ಮನೆಗಳನ್ನು ಕಟ್ಟಿ ವಾಸ ಮಾಡಿಕೊಂಡಿರುವ ಅವರ ವಾಡೆಗಳಿಗೆ 'ಖಾರ್ವಿಕೇರಿ' ಎಂದೇ ಹೆಸರು.

ಸಮುದ್ರ ಅಥವಾ ಸಮುದ್ರದ ಪರಿಸರ ನೋಟಕ್ಕೆ ಸುಂದರ, ಆದರೆ ಸಮುದ್ರ ತೀರದಲ್ಲಿ ವಾಸಿಸುತ್ತಾ, ಸಮುದ್ರೋತ್ಪನ್ನಗಳನ್ನೇ ಅವಲಂಬಿಸಿ ಜೀವನ ಸಾಗಿಸುವ ಈ ಜನಾಂಗದ ಬದುಕು ಪ್ರತಿಕ್ಷಣ ಆತಂಕಗಳಿಂದ ಕೂಡಿದೆ.ಸಮುದ್ರದ ಉಬ್ಬರವಿಳಿತ, ಗಾಳಿ, ಮಳೆ, ಪ್ರವಾಹ, ತೂಫಾನುಗಳು, ಸಮುದ್ರದಲ್ಲಿ ಸಂಭವಿಸುವ ಅವಘಡಗಳು, ಸಮುದ್ರದಲ್ಲಿರುವ ಕ್ರೂರ ಜೀವಿಗಳ ಸಹವಾಸ - ಇಂತಹ ಅನನುಕೂಲಕರ ವಾತಾವಣರದಲ್ಲೂ ಮೀನು ಹಿಡಿದು, ಅದನ್ನು ಮಾರಾಟ ಮಾಡಿ - ಆ ಮುಖಾಂತರ ಗಳಿಸಿದ ಸಂಪಾದನೆಯಿಂದ ಪ್ರತೀದಿನಕ್ಕೆ ಬೇಕಾದ ಆಹಾರ ಸಾಮಾಗ್ರಿಗಳನ್ನು ಖರೀದಿಸಿ, ಒಂದು ರೀತಿಯ ಸಂಘರ್ಷದ ಜೀವನ ಸಾಗಿಸುತ್ತಾ ಸಮಾಜದ ಇತರರೊಂದಿಗೆ ಒಂದಾಗಿ ಬಾಳುತ್ತಿದ್ದಾರೆ.

ಖಾರ್ವಿಯವರು ಜೀವಿಸಿಕೊಂಡಿರುವಂಥ ಪರಿಸ್ಥಿತಿ ಅವರ ಸಾಮಾಜಿಕ ಜೀವನದ ಅಭಿವೃದ್ಧಿಗೆ ಪೂರಕವಾಗಿರುವುದು ಅಲ್ಲದಿದ್ದರೂ, ಸಮಾಜದ ಇತರ ಜಾತಿ ಪಂಗಡಗಳ ಜನರು ಆಚರಣೆ ಮಾಡುವ ಹಬ್ಬ ಉತ್ಸವಗಳನ್ನು ಈ ಸಮಾಜದವರೂ ಆಚರಿಸುತ್ತಾರೆ. ನೂಲ ಹುಣ್ಣಿಮೆ, ಶ್ರಾವಣ, ಕೃಷ್ಣಾಷ್ಟಮಿ, ಚೌತಿ, ಪಾಲ್ಕಿಪೂಜೆ, ದಸರಾ, ದೀಪಾವಳಿ, ತುಳಸೀ ಪೂಜೆ, ಶಿವರಾತ್ರಿ, ಸತ್ಯನಾರಾಯಣ ಪೂಜೆ ಇತ್ಯಾದಿ ಹಬ್ಬಗಳು ಆಚರಣೆಯಲ್ಲಿವೆ. ಶಿವರಾತ್ರಿಯ ಬೆನ್ನಿಗೆ ಬರುವ "ಹೋಳಿ" ಹಬ್ಬ ಖಾರ್ವಿಯವರು ಬಹಳ ಅಭಿಮಾನ, ವಿಜೃಂಭಣೆಗಳಿಂದ ಆಚರಿಸುವ ವಿಶೇಷ ಹಬ್ಬ.

ಹೋಳಿಹಬ್ಬದ ಆಚರಣಾತ್ಮಕ ಕ್ರಿಯೆಗಳಲ್ಲಿ ಪ್ರಾದೇಶಿಕ ಮತ್ತು ಜನಾಂಗಿಕ ವೈವಿಧ್ಯತೆಗಳಿರುವುದು ಸ್ವಾಭಾವಿಕ.ಹಾಗೆ, ಖಾರ್ವಿ ಜನಾಂಗವು ಹೋಳಿಯ ದಿವಸ 'ರಾವಣ ದಹನ' ಮಾಡುವ ರೂಢಿಯನ್ನು ಪಾಲಿಸಿಕೊಂಡು ಬಂದಿದೆ. ರಾವಣನ ಆಕಾರ ಮಾಡಿ, ಅದಕ್ಕೆ ಬೆಂಕಿಯಿಕ್ಕಿ ದಹನ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ನೂರು - ಇನ್ನೂರು ತೆಂಗಿನಸೋಗೆಗಳನ್ನು ರಾಶಿ ಒಡ್ಡಿ ಹೊತ್ತಿಸುತ್ತಾರೆ. ಹೆಚ್ಚಿನ ಕಡೆಗಳಲ್ಲಿ 'ಕಂಗು ಸುಡುವ' ರಿವಾಜು ಚಾಲ್ತಿಯಲ್ಲಿದೆ.

ಕಂಗು ಕಡಿದು ತಂದು, ಅದರ ಸುತ್ತ ಒಣಹುಲ್ಲು ಕಟ್ಟಿ, ತೆಂಗಿನ ಸೋಗೆ ಹೊದೆಸಿ, ದೇವಸ್ಥಾನದ ಎದುರಿನ ನಿರ್ದಿಷ್ಟ ಜಾಗದಲ್ಲಿ ಆ ಕಂಗನ್ನು ನೆಡುತ್ತಾರೆ. ಸಮಾಜದ ಎಲ್ಲ ಜನರೂ ಸೇರಿ ಆ ಕಂಗನ್ನು ಪೂಜಿಸುತ್ತಾರೆ. ಕಂಗಿಗೆ ಬೆಂಕಿಯಿಟ್ಟು ದಹನ ಮಾಡುವ ಸಂದರ್ಭ ಹಾಡುಗಳನ್ನು ಹಾಡುತ್ತಾ, ಗುಮಟೆ ನೃತ್ಯ ಮಾಡುವುದು ವಿಶೇಷ. ಖಾರ್ವಿಯರು ಈ ಗುಮಟೆ ನೃತ್ಯದೊಂದಿಗೆ 'ಕೋಲಾಟ' ಮತ್ತು 'ದಾಲೊರ್' ಎಂಬ ಜಾನಪದ ನೃತ್ಯವನ್ನೂ ಕುಣಿಯುತ್ತಾರೆ. ಗುಮಟೆಗಳನ್ನು ಬಾರಿಸಿ ಹಾಡುತ್ತಾ ಕುಣಿಯುವಾಗ ನೇಮಿಸಲ್ಪಟ್ಟ 'ಘಡೊ' (ಪಾತ್ರಿ) ಆವೇಶ ಭರಿತನಾಗುತ್ತಾನೆ. ಧಾರ್ಮಿಕ ಹಿನ್ನೆಲೆಯುಳ್ಳ ಜಾನಪದ ಆಚರಣೆಯೊಂದು ದೈವತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಕ್ರಿಯೆ ಇದರಿಂದ ವ್ಯಕ್ತವಾಗುತ್ತದೆ.

ಖಾರ್ವಿ ಜನಾಂಗದ ಹೋಳಿ ಆಚರಣೆಯಲ್ಲಿ ಗುಮಟೆ ಮಾತ್ರವಲ್ಲದೆ ತಾಳ ಮತ್ತು ಚಿಕ್ಕ ಢೋಲುಗಳನ್ನು ಪೂರಕ ವಾದ್ಯಗಳಾಗಿ ಉಪಯೋಗಿಸುತ್ತಾರೆ. ಗುಮಟೆ ಬಾರಿಸುವ ಮತ್ತು ಕುಣಿತದ ರೀತಿಯಲ್ಲಿ ವೈವಿಧ್ಯತೆಗಳಿವೆ. ಗುಮಟೆ ಹಾಡುಗಳು ಜಾನಪದ ಮತ್ತು ರಾಮಾಯಣ ಮುಂತಾದ ಪುರಾಣಗಳದ್ದು. ಈ ಹಾಡುಗಳಲ್ಲಿ ಭಕ್ತಿ, ಸಾಮಾಜಿಕ, ಸಂಗತಿಗಳು, ಹಾಸ್ಯ ವಿಡಂಬನೆಗಳೂ ಅಡಕವಾಗಿವೆ. ಉದಾಹರಣೆಗೆ ಕೆಲವು ಹಾಡುಗಳನ್ನು ನೋಡಬಹುದು.

1. ಆದಿಶಕ್ತಿ ಮಹಾಮಾಯಿ ರವುಳುನಾಥ ಮಹಾಮಾಯಿ
   ಆದಿಶಕ್ತಿ ಮಹಾಮಾಯಿ ರವುಳುನಾಥ ಮಹಾಮಾಯಿ
   ಶೃಂಗೇರಿ ಶಾರದಾಂಬೆ ನಮನುಗಾ ಕರಾಗಾ
   ಶೃಂಗೇರಿ ಶಾರದಾಂಬೆ ನಮಾನುಗಾ ಕರಾಗಾ
   ಸಕಲ ವಿಘ್ನನಿವಾರಕ ಸಕಲ ಸಿದ್ಧಿ ವಿನಾಯಕ
   ಸಕಲ ವಿಘ್ನ ನಿವಾರಕ ಸಕಲ ಸಿದ್ಧಿ ವಿನಾಯಕ
   ಶರಣು ಕರತಾ ನಾಚುತಾ ಶರಣು ಶರಣು ಗಾಯೆಗಾ
   ಶರಣು ಕರತಾ ನಾಚುತಾ ಶರಣು ಶರಣು ಗಾಯೆಗಾ
   ಗುಮ್ಟೆ ಮಾಂಡು ವಾಜುತಾ ದೇವಾಲೆ ಮುಕಾರು ನಾಚುಗಾ (4)
   ತಳ ತಳ ರಸತಳ ನಮನುಗಾ ಖೆಳೆಗಾ (4)

2. ಅಮ್ಮಿ ನಾಚ್ಚಾತು ಅಮ್ಮಿ ಉಡ್ಡಾತ್ತು
   ಅಮ್ಮಿ ನಾಚಯಾ ಹೋಳಿಕು

ಅಮ್ಮಿ ರಾಮ್ ದೇವಾ ನಾವು ಗೆಂವ್ಯಾಯಾ

ಆಮ್ಮಿ ತುಳಸಿ ಮಾಮ್ಮಾಯಿಕು ಮಾಗುಯಾ

ಆಮ್ಮಿ ನಾಚ್ಚಾತ್ತು

ಆಮ್ಮಿ ಸಿಗ್ಮೇ ಪೊರ್ಬೆಕು ನಾಚುಯಾ

ಆಮ್ಮಿ ಗಾರಾನು ಗಾರಾ ನಾಚುಯಾ

ಆಮ್ಮಿ ರಂಗುನೆ ಗಾಲುನು ಗೇವ್ರುಯಾ

ಆಮ್ಮಿ ತೆಮ್ಕರೆ ರಂಗು ಗಾಲುಯಾ

ಆಮ್ಮಿ ನಾಚ್ಚಾತ್ತು

ಆಮ್ಮಿ ಗುಮ್ಪೆರೆ ಗೇವುನು ಕೇಳುಯಾ

ಆಮ್ಮಿ ತುಣಯಾಚೆ ಕೇಳು ದೇಕ್ಕಯಾ

ಆಮ್ಮಿ ದೇವಳಕ್ಕು ವಾಚ್ಚಾನು ನಾಚುಯಾ

ಆಮ್ಮಿ ನಾಚ್ಚಾತ್ತು ಉಡ್ಡಾತ್ತು ಕೇಳಯಾ

3. 1. ಹಾಲಾಗೋ ವಾರೆಚೆ ಸುಳಿಗೋ ಸುಟಲಿ

ಹೆ ಗಾವಂಚೆ ಪೊರಿಕು ಅಮಚೆ ಕಸಿ ನಟಲಿ

2. ಕಾರವಾರಚೆ ದಾಂಡಿ ದಾಂಡಿವರ ಬಸ್ತಾ

ಪ್ರಕಾಶ ಪಡ್ಲ ಸಗ್ಲೆ ದರಿಯಾ ಮೋದಿ

3. ಜಾಡು ಜೋಡು ಕರಿನಾರು ಗರಿಗೇನು

ಪಾನಿಯಾಲ ಗೆಲೇಗಾ

ಪಾನಿಯಾ ಗೆಲ್ಲೇಕಣಿ ತಯಜಾಲಿ ಸಾಂಜ

ಭಟ್ಕಳಚೆ ಬಂದ್ರರು ಲಾಯಲಾ ನಿಸಾಣ್

4 ಬಂಗಾರು ಸಿಂಗಾರು ದೇಲುನ ತುಲಾ

ಜಾಂಗೇಚಿ ವರ್ನೆ ಜರಾಗೇ ಗೋಮಜಾ

ಖಾರ್ವಿ ಸಮಾಜದಲ್ಲಿ ಜಾನಪದ ಕಲೆ ಉಳಿಸಲು ನೀಡಿದ ಸೇವೆಗಾಗಿ ಕುಂದಾಪುರ ಖಾರ್ವಿಕೇರಿಯ ವಿದ್ಯಾರಂಗ ಮಿತ್ರ ಮಂಡಳಿಗೆ 2001 ವರ್ಷದ ವಿಶೇಷ ಪ್ರಶಸ್ತಿ ನೀಡಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯು ಗೌರವಿಸಿದೆ. ಹಾಗೆಯೇ, ಸುರೇಶ್ ತಾಂಡೇಲ್-ಇವರ 'ಖಾರ್ವಿ ಲೋಕ್ ಗೀತ್' ಎಂಬ ಜಾನಪದ ಹಾಡುಗಳ ಸಂಗ್ರಹದ ಪುಸ್ತಕವನ್ನೂ ಅಕಾಡೆಮಿ ಪ್ರಕಟಿಸಿದೆ. ಅಲ್ಲದೆ, ಕುಂದಾಪರುದ ಖಾರ್ವಿ ಸಮುದಾಯದ ಶ್ರೀ ನಾರಾಯಣ ಖಾರ್ವಿಯವರಿಗೆ 2006-2007 ಹಾಗೂ ಶ್ರೀ ಚಂದ್ರಶೇಖರ ಖಾರ್ವಿಯವರಿಗೆ 2007-08ನೇ ವರ್ಷದ 'ಗೌರವ ಜಾನಪದ ಪ್ರಶಸ್ತಿ' ನೀಡಿ ಅಕಾಡೆಮಿಯು ಸನ್ಮಾನಿಸಿದೆ.

ಮರಾಠಿ ಸಮುದಾಯದಲ್ಲಿ ಗುಮಟೆ : ಗೋವಾ ಮಹಾರಾಷ್ಟ್ರ ಪ್ರದೇಶಗಳಿಂದ ವಲಸೆ ಬಂದು ಕರ್ನಾಟಕ ಕರಾವಳಿಯ ಊರುಗಳಲ್ಲಿ ನೆಲೆನಿಂತ ಇನ್ನೊಂದು ಸಮುದಾಯ 'ಮರಾಠಿ ಜನಾಂಗ'. ಶಿವ ಮತ್ತು ಶಕ್ತಿ ಆರಾಧಕರಾಗಿರುವ ಮರಾಠಿಯರು ಕರ್ನಾಟಕದ ಇತರ ಹಿಂದೂ ಧರ್ಮೀಯರು ಆಚರಣೆ ಮಾಡುವಂತಹ ಚೌತಿ, ದೀಪಾವಳಿ, ನವರಾತ್ರಿ, ಶಿವರಾತ್ರಿ .... ಹಬ್ಬಗಳನ್ನು ಈ ಜನಾಂಗದವರೂ ಆಚರಣೆ ಮಾಡುತ್ತಾರೆ. ಒಂದು ಕಟ್ಟೆ ಕಟ್ಟಿ , ಅದರಲ್ಲಿ ಭವಾನಿ ದೇವಿಯ ಪೀಠ ರಚಿಸಿ, ದೇವಿಯನ್ನು ಆರಾಧಿಸುವುದು ಇವರ ಪರಿಪಾಠ. "ಗೋಂದೊಳು ಪೂಜೆ" ದೇವಿಗೆ ಸಮರ್ಪಣೆಗೊಳ್ಳುವುದು ಈ ಸಮಾಜದ ಒಂದು ವಿಶೇಷ ಪೂಜೆ. ಈ ಪೂಜೆಯ ಸಂದರ್ಭದಲ್ಲಿ ಉಪಯೋಗಿಸಲ್ಪಡುವ ಏಕಮಾತ್ರ ವಾದ್ಯ 'ಗುಮಟೆ'

ಹೋಳಿ ಕಾಮದಹನ ಭಾರತದಾದ್ಯಂತ ಆಚರಿಸಲ್ಪಡುವ ಹಬ್ಬ. ಹಲವು ಪ್ರದೇಶಗಳಲ್ಲಿ ಪಂಥ, ಧರ್ಮ, ಪ್ರಾಯ, ಲಿಂಗ ಭೇದವಿಲ್ಲದೆ ರಂಗುಹಾಕಿ, ರಂಗಿನ ನೀರು ಎರಚಿ ಹೋಳಿ ಆಚರಿಸುವುದನ್ನು ಕಾಣಬಹುದು. ಆದರೆ, ಕುಡುಬಿ ಜನಾಂಗದವರ ರೀತಿಯಲ್ಲೇ, ಗುಮಟೆ ಬಾರಿಸಿ, ಹಾಡುಹಾಡಿ, ಕುಣಿಯುತ್ತಾ ಹೋಳಿ ಆಚರಣೆ ಮಾಡುವ ಇನ್ನೊಂದು ದೊಡ್ಡ ಸಮುದಾಯ ಮರಾಠಿ ಜನಾಂಗ. ಧಾರ್ಮಿಕ ಆಚರಣೆಯು ವಿಕಾಸಗೊಂಡು, ಹೋಳಿ ನೃತ್ಯದ ರೂಪ ಪಡೆದಿರುವುದು ಈ ಸಮಾಜದಲ್ಲೂ ವ್ಯಕ್ತವಾಗುತ್ತದೆ. ಇವರ ಮಾತೃಭಾಷೆ ಮರಾಠಿ. ಇವರ ಹೋಳಿ ನೃತ್ಯದಲ್ಲಿ ಪ್ರಧಾನವಾಗಿ ಉಪಯೋಗವಾಗುವ ಸಂಗೀತವಾದ್ಯ ಗುಮಟೆ ಆದುದರಿಂದ ಈ ಜಾನಪದ ನೃತ್ಯಕ್ಕೆ 'ಗುಮಟೆ ನೃತ್ಯ' ಎಂದೇ ಹೆಸರು.

ಮರಾಠಿ ಜನಪದರು, ಶಿವರಾತ್ರಿಯ ನಂತರ ಬರುವ ಫಾಲ್ಗುಣ ಶುಕ್ಲ ಪಕ್ಷದ ಅಷ್ಟಮಿ ಅಥವಾ ದಶಮಿಯಿಂದ 'ಶಿಗ್ಮ್ಯಾ ಪುನವ್' (ಹುಣ್ಣಿಮೆ) ವರೆಗೆ ಈ ಗುಮಟೆ ನೃತ್ಯವಾಡುತ್ತಾರೆ. ಕುಡುಬಿಯರಂತೆಯೇ ಈ ಜನಾಂಗದವರೂ ಬಹಳ ಕಟ್ಟುನಿಟ್ಟಿನಿಂದ 'ಕೂಡುಕಟ್ಟು' ಜೀವನಕ್ರಮವನ್ನು ಪಾಲಿಸಿ, ಸಂಘಟನಾಯುಕ್ತ ಜೀವನ ನಡೆಸುತ್ತಾರೆ. ಕೂಡುಕಟ್ಟಿಗೆ ಒಬ್ಬ ಗುರಿಕಾರನಿರುತ್ತಾನೆ. ಗುರಿಕಾರನ ಅಂಗಳದಲ್ಲಿ, ಯಾ ಕೂಡುಕಟ್ಟಿನ ಜನತೆ ನಿರ್ಣಯಿಸಿದ ಜಾಗದಲ್ಲಿ ಈ ಕುಣಿತ ಜರಗುತ್ತದೆ. ಈ ಜಾಗದಲ್ಲಿ ಒಂದು ದೊಡ್ಡ ತುಳಸೀ ಕಟ್ಟೆಯಿರುತ್ತದೆ.

ಈ ಕಟ್ಟೆಗೆ 'ತುಳಜಾ ಭವಾನಿ ಕಟ್ಟೆ' ಅಥವಾ 'ಭಸ್ಮೇಶ್ವರಿ ಕಟ್ಟೆ' ಅಂತ ಹೆಸರು. ಪದ್ಧತಿ ಪ್ರಕಾರ ಹುಣ್ಣಿಮೆಯ ಏಳು ಅಥವಾ ಐದು ದಿವಸಗಳ ಮುಂಚಿನ ದಿನ, ಸೂರ್ಯೋದಯಕ್ಕೆ ಅಥವಾ ಸೂರ್ಯಾಸ್ತಮಾನ ಸಮಯ 'ನಾರ್ಲ್ ಚಡಂವ್ಚೆ' (ತೆಂಗಿನಕಾಯಿ ಏರಿಸುವುದು) ಕಾರ್ಯಕ್ರಮವಿದೆ. ನಿಶ್ಚಿತ ಸಮಯದಲ್ಲಿ ಕೂಡುಕಟ್ಟಿನ ಜನರು ಒಟ್ಟು ಸೇರಿದ ಮೇಲೆ ಗುರಿಕಾರ ತುಳಸೀ ಕಟ್ಟೆ ಹತ್ತಿರ ಪೂಜೆಗಾಗಿ ತಯಾರಾಗುತ್ತಾನೆ. ಸಿಪ್ಪೆ ಸಹಿತವಿರುವ ಒಂದು ತೆಂಗಿನಕಾಯಿಯನ್ನು ಹೂವುಗಳಿಂದ ಸುಂದರವಾಗಿ ಶೃಂಗರಿಸಿ, ಧೂಪ ದೀಪಗಳಿಂದ ಪೂಜಿಸಿ, ಸೇರಿದವರೆಲ್ಲಾ ಆ ತೆಂಗಿನಕಾಯಿ ಮುಟ್ಟಿ ತುಳಸೀ ಕಟ್ಟೆಯಲ್ಲಿಡುತ್ತಾರೆ. ಕೆಲವು ಕಡೆಗಳಲ್ಲಿ ನಿಯಮಿಸಿದ 'ದರ್ಶನ ಪಾತ್ರಿ' ಯ ಮೇಲೆ ದೇವೀ ದರ್ಶನ ಅವಾಹಿಸಿ, ಆತನ ಕೈಯಿಂದ ತೆಂಗಿನಕಾಯಿ ಏರಿಸುವ ಪರಂಪರೆಯೂ ಇದೆ. ಆ ನಂತರ ಗುಮಟೆ ಮತ್ತು ತಾಳಗಳನ್ನು ಲಯಬದ್ಧ ರೀತಿಯಲ್ಲಿ ಬಾರಿಸುತ್ತಾ ಹಾಡುಹಾಡಿ ತುಳಸೀ ಕಟ್ಟೆಗೆ ಸುತ್ತು ಹಾಕುತ್ತಾ ಕುಣಿಯುತ್ತಾರೆ.

ತೆಂಗಿನಕಾಯಿ ಏರಿಸಿದ ಮರುದಿವಸದಿಂದ, ಹೋಳಿ ಕುಣಿತದೊಂದಿಗೆ ಊರು ತಿರುಗಾಟ ಪ್ರಾರಂಭವಾಗುತ್ತದೆ. ಕುಣಿತಗಾರರು ತಲೆಗೆ ಬಿಳಿ ರುಮಾಲು, ಕಪ್ಪು ಚಲ್ಲಣ, ಗುಲಾಬಿ ವರ್ಣದ ನಿಲುವಂಗಿ, ಬೆನ್ನು ಮುಚ್ಚುವಂತೆ ರಂಗಿನ ಶಾಲು, ಎದೆಯ ಮೇಲೆ ಹಳದಿ ಬಣ್ಣದ ಶಾಲು, ಸೊಂಟಕ್ಕೆ ಸೊಂಟಪಟ್ಟಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ವಿಶಿಷ್ಟ ರೀತಿಯಲ್ಲಿ ಶೃಂಗರಿಸಿಕೊಳ್ಳುತ್ತಾರೆ. ಹಿಮ್ಮೇಳದಲ್ಲಿ ಗುಮಟೆ ಬಾರಿಸುತ್ತಾರೆ ಮತ್ತು ಹಾಡಿನೊಂದಿಗೆ ಕುಣಿಯುತ್ತಾರೆ. ಇವರ ಪಂಗಡಕ್ಕೆ 'ಖೇಳೆ' ಎಂದು ಹೆಸರು. ಖೇಳೆ ಮೇಳ ಸ್ವಜಾತಿ ಬಾಂಧವರಲ್ಲಿ ತಲುಪಿದಾಗ ಆ ಮನೆಯ ಸುಮಂಗಲೆಯರು ಖೇಳೆಯವರ ಕಾಲು ತೊಳೆದು, ಹಣೆಗೆ ಕುಂಕುಮದ ತಿಲಕವಿಟ್ಟು ಸ್ವಾಗತಿಸುತ್ತಾರೆ. ಗುಮಟೆ ನೃತ್ಯಗಾರರು ಆಡುವಾಗ ಚಿಕ್ಕ ಮಕ್ಕಳನ್ನು ಹೆಗಲಿಗೇರಿಸಿಕೊಂಡು ಆಡುವ ಕ್ರಮ ಮರಾಠಿ ಸಮಾಜದಲ್ಲಿಯೂ ವಾಡಿಕೆಯಲ್ಲಿದೆ. ಇದರಿಂದಾಗಿ ಮಕ್ಕಳ ಭಯ ನಿವಾರಣೆಯಾಗಿ, ವರ್ಷಪೂರ್ತಿ ಆರೋಗ್ಯಪೂರ್ಣವಾಗಿರುತ್ತಾರೆ ಎಂಬ ನಂಬಿಕೆಯಿದೆ. ಮನೆಯ ಯಜಮಾನ ಖೇಳೆಯವರಿಗೆ ತೆಂಗಿನಕಾಯಿ, ಅಕ್ಕಿ, ವೀಳ್ಯ ಹಾಗೂ ಆರ್ಥಿಕರೂಪದ ಕಾಣಿಕೆಗಳನ್ನಿತ್ತು, ಗೌರವಿಸುತ್ತಾನೆ. ಖೇಳೆಯವರು ದೇವಿಯನ್ನು ಪ್ರಾರ್ಥಿಸಿ, ಆ ಕುಟುಂಬಕ್ಕೆ ಒಳ್ಳೆಯದಾಗಲೆಂದು ಹರಸಿ, ಕುಂಕುಮ ಪ್ರಸಾದವನ್ನು ನೀಡುತ್ತಾರೆ. ಯಜಮಾನ ಭಯಭಕ್ತಿಯಿಂದ ಸ್ವೀಕಾರ ಮಾಡುತ್ತಾನೆ.

ಹೀಗೆ ಊರೆಲ್ಲಾ ಆಡಿಯಾದ ಮೇಲೆ, ಹೋಳಿಯ ದಿವಸ ಗುರಿಕಾರನ ಅಂಗಳವನ್ನು ತಲುಪುತ್ತಾರೆ. ಅಲ್ಲಿರುವ ತುಳಸೀಕಟ್ಟೆಯ ಸುತ್ತ ಗುಮಟೆ ಬಾರಿಸುತ್ತಾ, ಹಾಡುಗಳನ್ನು ಹಾಡುತ್ತಾ ಕುಣಿಯುತ್ತಾರೆ. ಒಟ್ಟಿಗೇ ಕೋಲಾಟವನ್ನೂ ಆಡುತ್ತಾರಾದರೂ, ಹೋಳಿ ನೃತ್ಯದಲ್ಲಿ ಗುಮಟೆಗಳಿಗೇ ಪ್ರಾತಿನಿಧ್ಯ, ಪ್ರಾಮುಖ್ಯತೆ ಜಾಸ್ತಿ. ಈ ಸಂದರ್ಭದಲ್ಲಿ ಪಾತ್ರಿಯ ಮೇಲೆ ದೇವೀ ದರ್ಶನವಾಗಿ, ಹೋಳಿ ಆಚರಣೆಯಲ್ಲಿ ತಿಳಿಯದೆ ಘಟಿಸಿದ ತಪ್ಪುಗಳನ್ನು ಕ್ಷಮಿಸಲು

ಹಾಗೂ ಮುಂದಿನ ವರ್ಷಗಳಲ್ಲಿಯೂ ಹೋಳಿಯನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಬರಲು ಖೇಳೆಯವರು ಕೃಪೆಯನ್ನು ಬೇಡುತ್ತಾರೆ. ನಂತರ ವೇಷ ಭೂಷಣ ಕಳಚುವ ತಯಾರಿ ನಡೆಯುತ್ತದೆ. ಈ ಸಂದರ್ಭ ಓಕುಳಿ ನೀರನ್ನು ತಲೆಯ ಮೇಲಿಂದ ಮೈಮೇಲೆ ಹೊಯ್ದುಕೊಳ್ಳುತ್ತಾರೆ ಮತ್ತು ಸ್ನಾನಕ್ಕೆ ತೆರಳುತ್ತಾರೆ. ಸ್ನಾನವಾಗಿ ಹಿಂದಿರುಗುವಾಗ ಮುತ್ತೈದೆಯರು ಬೈಹುಲ್ಲು ಹಾಸಿ ಬೆಂಕಿಯಿಕ್ಕುತ್ತಾರೆ. ಖೇಳೆಯವರು ಆ ಬೆಂಕಿಯ ಎದುರು ಸಾಲುಕಟ್ಟಿ ನಿಲ್ಲುತ್ತಾರೆ. ಸುಮಂಗಲೆಯೊಬ್ಬಳು ಖೇಳೆಯವರಿಗೆ ವೀಳ್ಯದೆಲೆಯಲ್ಲಿ ಬತ್ತಿ ಹೊತ್ತಿಸಿ ಆರತಿ ಮಾಡುತ್ತಾಳೆ. ಖೇಳೆಯವರು ಬೆಂಕಿ ಹಾಯ್ದು ಈ ಕಡೆಗೆ ಬರುತ್ತಾರೆ. ಇದು ಕಾಮದಹನದ ಸಂಕೇತ.

ಕೊನೆಗೆ ತುಳಸೀ ಕಟ್ಟೆಯ ಮೇಲೆ 'ಕಳಶ' ವಿಟ್ಟು ದೇವಿಗೆ ಪೂಜೆ ಮಾಡುತ್ತಾರೆ. ಐದು ತೆಂಗಿನಕಾಯಿ ಒಡೆದು ದೇವಿಗೆ ಸಮರ್ಪಿಸುವ ಕ್ರಮವಿದೆ. ನಂತರ ಸಾಮೂಹಿಕ ಭೋಜನ ಮಾಡಿ ಹೋಳಿಯ ಆಚರಣೆ ಸಮಾಪ್ತಿಗೊಳ್ಳುತ್ತದೆ.

ಹೋಳಿ ಹಬ್ಬದ ವಿಶೇಷ ಸಂಗೀತವಾದ್ಯ 'ಗಮಟೆ' ಬಾರಿಸುವಾಗ ರಾಮಾಯಣ ಕಥಾ ಸನ್ನಿವೇಶಗಳ ಸಂದರ್ಭಗಳ ಹಾಡುಗಳನ್ನು ಹಾಡುವುದನ್ನು ಕಾಣಬಹುದು. ರಾಮಾಯಣದ ಈ ಒಂದು ಹಾಡು ಮರಾಠಿಗರ ಗುಮಟೆ ಹಾಡಿಗೆ ಉದಾಹರಣೆ -

ಮಾರೀಚ ದೈ ತೋ ... ಹೊ... ರೇ ।

ಮಾರೀಚ ದೈತೋ ....ಮೃಗವೋಚ

ಪಾಂಚೋ ವಟಿ ಹೋನಾ ಮದಿ ॥ 1 ॥

ಪಾಂಚೋವಟಿ ಹೋನಾ ಮದಿ ಮೈಕ

ಮೈರಗು ಬೋಳೊಯ್ತಾ

ಸಿತೆನಿ ದೇಖೋನಿ ಹೋ .. ರೇ ।

ಸಿತೆನಿ ದೇಖೋನಿ ಭ್ರಾಮಿ ಜಾವೋ ರಾಮ

ಕೂಡೆರು ಬೋಳೋಯ್ತಾ ॥ 2 ॥

ಸಿತೆಚ ವಚನಿರೆ ಹೊ ... ರೇ

ಸಿತೆಚ ವಚನಿರೆ ಹೈಕನೂರೆ ರಾಮಚಂದ್ರಕೋ

ಕೋಪೋ ಜಾಲೆ ।

ರಾಮಚಂದ್ರಕೋ ಕೋಪೋ ಜಾಲೇ ಧನುಸು

ಬಾಣೇ ಕೋ ಧರೆಲಾಂ ।

ಧನುಸು ಬಾಣೆಕು ಧರೆಲು ರೇ ಮೃಗಜ

ಬೆಂಬಲು ಧರೆಲಾಂ ॥ 3 ॥

ಎಕ್ಲೆ ಗೇಲೇರೆ ಹೊ... ರೇ ।

ಎಕ್ಲೆ ಗೇಲೇರೆ ಮೃಗಚ ಪಾಟಿ ತುಮಿ ಜಾವ್ರೊ

ಬಾವ ಸುಜಾಲೇ

ಮಾಜ ಬಾವಾಚ ಎಂಗೇ ಎವುಜುನು ಸಿತೆಲೇ

ದುಃಖು ಚಿಂತೆ ಕೇಳಾ ॥

ಶ್ರೀರಾಮಚಂದ್ರ ವನವಾಸದಲ್ಲಿರುವಾಗ ದೈತ್ಯ ಮಾರೀಚನು ಚಿನ್ನದ ಹರಿಣ ರೂಪದ ಮಾಯಾಮೃಗವಾಗಿ ಸೀತೆಯೆದುರು ಕುಣಿಯುತ್ತಾನೆ. ಸೀತೆಯು ಆ ಮೃಗವನ್ನು ಹಿಡಿದು ಕೊಡುವಂತೆ ರಾಮನಲ್ಲಿ ಬೇಡುತ್ತಾಳೆ. ಹರಿಣದ ಬೇಟೆಗೆ ರಾಮ ತೆರಳುವ ಹಿಂದಿನಿಂದ ಲಕ್ಷ್ಮಣನೂ ಹೋಗಬೇಕಾಗುತ್ತದೆ. ಒಬ್ಬಳೇ ಉಳಿಯುವ ಸೀತೆ ದುಃಖ ಅನುಭವಿಸುವ ಸನ್ನಿವೇಶ - ಈ ಹಾಡಿನ ಸಾರಾಂಶ. ಇಂತಹ ಹಾಡುಗಳನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭಸಾಧ್ಯವಿಲ್ಲ. ಆದರೆ ಅಕ್ಷರಜ್ಞಾನವಿಲ್ಲದ ಅಶಿಕ್ಷಿತ ಜನ, ಪುರಾಣದ ಈ ಹಾಡುಗಳನ್ನು, ಬಾಯಿಂದ ಬಾಯಿಗೆ ಮೌಖಿಕವಾಗಿ ಉಳಿಸಿಕೊಂಡು ಗುಮಟೆ ನೃತ್ಯಕ್ಕೆ ಅಳವಡಿಸಿಕೊಂಡು ಬಂದದ್ದು ಜನಪದರ ಜ್ಞಾನ ಮತ್ತು ವಿಶೇಷ ಜಾಣ್ಮೆಗಳಿಗೆ ನಿದರ್ಶನ.

ಹಾಲಕ್ಕಿ ಒಕ್ಕಲಿಗ ಸಮುದಾಯದಲ್ಲಿ ಗುಮಟೆ : ಹಾಲಕ್ಕಿ ಒಕ್ಕಲಿಗ ಜನಾಂಗ ಉತ್ತರಕನ್ನಡ ಜಿಲ್ಲೆಯ ಕಾರವಾರ, ಕುಮಟಾ, ಅಂಕೋಲಾ, ಹೊನ್ನಾವರ, ಗೋಕರ್ಣ- ಈ ಪ್ರದೇಶಗಳಲ್ಲಿ ವಾಸವಿರುವ ಒಂದು ವಿಶಿಷ್ಟ ಸಮುದಾಯ. ಸಂಪ್ರದಾಯಬದ್ಧವಾಗಿ ಜೀವಿಸುತ್ತಾ, ಪೀಳಿಗೆಯಿಂದ ಪೀಳಿಗೆಗೆ ತಮ್ಮ ಆಚಾರವಿಚಾರಗಳನ್ನು ಕಾಯ್ದುಕೊಂಡು ಬಂದಿರುವಂತಹ ಹಾಲಕ್ಕಿಯವರು ದುರ್ಬಲ ಶೋಷಿತವರ್ಗ. ಬುಡಕಟ್ಟು ಜನಾಂಗದ ಎಲ್ಲಾ ಕುರುಹುಗಳೂ ಹಾಲಕ್ಕಿ ಒಕ್ಕಲಿಗರ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬರುತ್ತವೆ. ಈ ಜನಾಂಗದ ಮಹಿಳೆಯರು ಕೊರಳ ತುಂಬಾ ಮಣಿಸರ ಧರಿಸುತ್ತಾರೆ. ರವಕೆ ಧರಿಸುವ ಕ್ರಮವಿಲ್ಲ ಆದರೂ ಆಧುನಿಕ ಹೆಣ್ಣುಮಕ್ಕಳು ಪ್ರದರ್ಶಿಸುವ ಮೈಗಿಂತಲೂ ಕಡಿಮೆ ಅಂಗಪ್ರದರ್ಶನ ಆಗುವ ರೀತಿ ಎದೆ ಮುಚ್ಚಿ, ಸೆರಗನ್ನು ಕೊರಳ ಹತ್ತಿರ ಸಿಕ್ಕಿಸಿಕೊಂಡು ಸೀರೆ ಉಡುತ್ತಾರೆ. ತಮ್ಮದೇ ಆದ ಸಾಮಾಜಿಕ ಆಡಳಿತ ಪದ್ಧತಿಯನ್ನು ಇವತ್ತಿಗೂ ಪಾಲಿಸಿಕೊಂಡು ಬಂದಿರುವ ಹಾಲಕ್ಕಿ ಸಮಾಜವು ಉತ್ತರ ಕನ್ನಡದಲ್ಲಿ ಏಳು ಸೀಮೆಗಳನ್ನು ಮಾಡಿಕೊಂಡು, ಆ ಸೀಮೆಗಳಿಗೆ

ಒಂದೊಂದು ಹೆಸರು ಕೊಟ್ಟು, ಪ್ರತಿಯೊಂದು ಕುಟುಂಬವೂ ಆ ಸೀಮೆಯ ಆಡಳಿತಕ್ಕೊಳಪಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಕೆಲವು ವಾಡೆ ಅಥವಾ ಕೆಲವು ಮನೆಗಳ ಸಮೂಹ ಸೇರಿ ಒಂದು 'ಕೊಪ್ಪ' ವಾಗುತ್ತದೆ. ಇಂತಹ ಹಲವು ಕೊಪ್ಪಗಳ ಸಮೂಹ 'ಸೀಮೆ' ಎನಿಸುತ್ತದೆ. ಪ್ರತಿಯೊಂದು ಸೀಮೆಯಲ್ಲೂ ಗುರು, ಅರಸು, ಪ್ರಧಾನಿ, ಸೀಮೆ ಬುದವಂತ - ಅಧಿಕಾರಿಗಳಾಗಿದ್ದರೆ ಕೊಪ್ಪಗಳಲ್ಲೂ ಇದೇ ರೀತಿಯ ಅಧಿಕಾರ ಹೊಂದಿದವರು ಸಾಮಾಜಿಕ ಮತ್ತು ಧಾರ್ಮಿಕ ಆಡಳಿತ ನಡೆಸುತ್ತಾರೆ. ಇವರ ಮಾತೃಭಾಷೆ ಕನ್ನಡ ಮತ್ತು ಪ್ರಧಾನ ಜೀವನೋಪಾಯ ಕೃಷಿ.

ಹಾಲಕ್ಕಿ ಜನಾಂಗದ ಸಾಮಾಜಿಕ ಮತ್ತು ಧಾರ್ಮಿಕ ಜೀವನ ಒಂದಕ್ಕೊಂದು ಪೂರಕವಾಗಿವೆ. ಫಾಲ್ಗುಣ ದಶಮಿಯಿಂದ ಹೋಳಿ ಹುಣ್ಣಿಮೆ ವರೆಗೆ 'ಸುಗ್ಗಿ ಹಬ್ಬ'ವನ್ನು ಬಹಳ ವಿಜೃಂಭಣೆ, ವೈಭವಗಳಿಂದ ಈ ಜನಾಂಗದವರು ಆಚರಣೆ ಮಾಡುತ್ತಾರೆ. ಸುಗ್ಗಿ ಹಬ್ಬವೆಂದರೆ - ವಿವಿಧ ಆಚರಣೆಗಳು, ವಿವಿಧ ಕುಣಿತಗಳು, ಜಾನಪದ ಹಾಡುಗಳು, ಪ್ರಾಚೀನ-ರಂಗಭೂಮಿಯನ್ನು ಕಣ್ಣೆದುರು ನಿಲ್ಲಿಸುವಂತಹ ನೃತ್ಯಗಳು ಮತ್ತು 'ಹಗರಣ' ಎಂಬ ದೃಶ್ಯಶ್ರವ್ಯ ಕಲೆ ಸಹಿತ ಇದೊಂದು ಸಂಕೀರ್ಣ ರೀತಿಯ ಆರಾಧನಾ ಪ್ರಕಾರ. ಈ 'ಹಗರಣ' ಕಲಾ ಈ ಪ್ರಕಾರದಲ್ಲಿ ಪ್ರತಿಯೊಬ್ಬ ಪುರುಷನೂ ಒಂದಿಲ್ಲೊಂದು ವೇಷ ಧರಿಸಿ ಕೊಪ್ಪದ ತುಳಸೀ ಕಟ್ಟೆಯ ಎದುರು 'ಜಟ್ಟಿಗ' ದೈವದ ಆರಾಧನೆ ಮಾಡಿ, ಹಿರಿಯರಿಂದ ಆಶೀರ್ವಾದ ಪಡೆದು, ಪೂರ್ವ ನಿಶ್ಚಿತ ವಿಶಾಲ ಮೈದಾನದಲ್ಲಿ ಒಟ್ಟು ಸೇರುತ್ತಾರೆ. ಈ ಜಾಗದಲ್ಲಿ 'ಹಗರಣ' ನೋಡಲು ನೆರೆಯ ಊರುಗಳಿಂದ ಸಾವಿರಗಟ್ಲೆ ಜನ ಸೇರುತ್ತಾರೆ. ದಿನವಿಡೀ ನಡೆಯುವ ಈ 'ಹಗರಣ' ಆಟದಲ್ಲಿ ಹಿಮ್ಮೇಳದಲ್ಲಿ ಉಪಯೋಗವಾಗುವ ಪ್ರಧಾನ ವಾದ್ಯ 'ಗುಮಟೆ'

ಗುಮಟೆಪಾಂಗ್ : ಹಾಲಕ್ಕಿ ಸಮುದಾಯದ ಹಾಡುಗಾರಿಕೆ, ವಾದನ ಮತ್ತು ನರ್ತನಗಳ ಒಂದು ಸಮೂಹಗಾನ 'ಗಮಟೆ ಪಾಂಗ್'. ಒಂದು ರೀತಿಯಲ್ಲಿ ಗ್ರಾಮೀಣ ಸಂಗೀತ ಗೋಷ್ಠಿ ಅನ್ನಬಹುದು. ಮದ್ದಳೆಯ ಆಕಾರದಲ್ಲಿ, ಸಾಧಾರಣ ನಾಲ್ಕು ಅಡಿ ಉದ್ದವಿರುವ ಇವರ ಗುಮಟೆಗೆ ಉಡದ ಅಥವಾ ಕಾನಕುರಿಯ ಚರ್ಮ ಮುಚ್ಚಿರುತ್ತಾರೆ. ಈ ಜಾನಪದ ಕಲಾ ಪ್ರದರ್ಶನದಲ್ಲಿ ಕನಿಷ್ಠ ನಾಲ್ಕು ಜನ ಗುಮಟೆ ವಾದಕರಿರುತ್ತಾರೆ. ಇದರೊಂದಿಗೆ 'ಕಚಾಳ' ಎಂಬ ತಾಳ, ಹಾಗೆಯೇ 'ಕೂಚ' ಎಂಬ ಒಬ್ಬ ನರ್ತಕನೂ ಇರುತ್ತಾನೆ. ರಾತ್ರಿ ವಿರಾಮದ ವೇಳೆಯಲ್ಲಿ ಸಾಮಾನ್ಯವಾಗಿ ಕೊಪ್ಪದ ತುಳಸೀ ಮನೆಯ ಅಂಗಳದಲ್ಲಿ ಸುಗ್ಗಿಯ ಸಂದರ್ಭ ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಕಾರ್ತಿಕೋತ್ಸವ, ಹುಲಿಹಬ್ಬ, ಯುಗಾದಿ, ದೇವಕಾರ್ಯ ಮುಂತಾದ ಹಬ್ಬಗಳ ಸಂದರ್ಭಗಳಲ್ಲಿಯೂ ಪ್ರದರ್ಶನ ನಡೆಸುವುದುಂಟು. ಕೆಲವು ವಿಶೇಷ ಸಂದರ್ಭಗಳಲ್ಲಿ ಹಾಡುಗಾರರಿಗೆ, ವಿಶೇಷ ಪರಿಣತಿ ತೋರಿಸಿದ ಕಲಾಕಾರರಿಗೆ ಬಹುಮಾನ ನೀಡಿ ಗೌರವಿಸುವುದೂ ಉಂಟು. ಕನಿಷ್ಠ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚು ಜನ ಕಲಾವಿದರು ಸಾಲುಕಟ್ಟಿ ನಿಲ್ಲುತ್ತಾರೆ. ಗುಮಟೆ ಬಾರಿಸುತ್ತಿರುವಾಗ ಒಬ್ಬ ಹಾಡಲು ಪ್ರಾರಂಭ

ಮಾಡಿದಂತೆ ಇತರರು ಆ ಹಾಡಿನ ಪುನರಾವರ್ತನೆಯ ಎತ್ತುಗಡೆ ಮಾಡಿದಾಗ ನರ್ತಕ 'ಕೂಚ' ಕುಣಿಯಲು ತೊಡಗುತ್ತಾನೆ.

ಗುಮಟೆ ಪಾಂಗ್ ಹಾಡು :

ನೆಣವೋಲೋ ದೇವರ ನೆಣವೋಲೋ
ಕಟ್ಟಿದಲ್ಲಿ ಕವ್ವಮ್ಮನ ನೆಣವೋಲೋ
ಮೆಟ್ಟಿನಿಂತ ಭೂಮಿತಾಯಿಯೂ ನೆಣವೋಲೋ
ಭೂಮಿ ಹೊತ್ತ ಮಾರೇಶನ ನೆಣವೋಲೋ
ಭೂಮಿ ಹೊತ್ತ ಮಾರೇಶನ ನೆಣವೋಲೋ
ಬರ್ಮ ಇಶ್ಣು ಮಹೇಶನ ನೆಣವೋಲೋ
ಊರ ಒಳಗೆ ಶಿದ್ದುರಾಮನಾ ನೆಣವೋಲೋ
ಬಾಕಿಲಲ್ಲೇ ಬಸವಯ್ಯನ ನೆಣವೋಲೋ

ಕೆಲವು ಸಂದರ್ಭಗಳಲ್ಲಿ ಕುಣಿತವಿಲ್ಲದೆ ಗುಮಟೆ ವಾದನ ಮಾತ್ರ ಮಾಡುವುದೂ ಇದೆ. ಈ ಪ್ರಕಾರಕ್ಕೆ 'ಹೊಡಿಗುಮ್ಮಟೆ' ಅಂತ ಹೆಸರು. ಹಿಂದಿನ ಕಾಲದಲ್ಲಿ ಗುಮಟೆ ಹಾಡುಗಳು ರಾಮಾಯಣ, ಮಹಾಭಾರತದಂತಹ ಪುರಾಣಗಳ ಸುದೀರ್ಘ ಕಾವ್ಯ ಕಥನಗಳಾಗಿರುತ್ತಿದ್ದವು. ಈಗ ಐತಿಹಾಸಿಕ ಸಾಮಾಜಿಕ, ರಾಜಕೀಯ, ಕನಕದಾಸ ಪುರಂದರ ದಾಸರ ಕೀರ್ತನೆಗಳ ಸಹಿತ ಚಿಕ್ಕಚಿಕ್ಕ ಹಾಡುಗಳನ್ನೂ ಹಾಡುತ್ತಾರೆ. ಗುಮಟೆಪಾಂಗ್ ಹಾಲಕ್ಕಿ ಜನಾಂಗದ ಅವಿನಾಭಾವ ಸಂಬಂಧವಿರುವ ಒಂದು ಕಲಾಪ್ರಕಾರ.

ಉತ್ತರ ಕನ್ನಡದ ಕುಮಟಾ, ಅಂಕೋಲಾ, ಹೊನ್ನಾವರಗಳಲ್ಲಿ ವಾಸ್ತವ್ಯವಿರುವ ಕೊಂಕಣಿ ಭಂಡಾರಿ ಜನಾಂಗದವರಲ್ಲೂ 'ಗುಮಟೆ ಫಾಂಗ್' ಕಲೆ ಇದೆ. ಆದರೆ ಇವರ ಗುಮಟೆ ಫಾಂಗ್ ಪ್ರಕಾರದಲ್ಲಿ ಬಳಕೆಯಾಗುವ ಗುಮಟೆಗಳು ಬಿಂದಿಗೆಯ ಆಕಾರದವು.

ಗಾಮೊಕ್ಕಲು ಸಮುದಾಯದಲ್ಲಿ ಗುಮಟೆ : ಗಾಮೊಕ್ಕಲು ಜನಾಂಗ ಉತ್ತರ ಕನ್ನಡ ಜಿಲ್ಲೆಯ ಕುಮಟಾ ಮತ್ತು ಹೊನ್ನಾವರ ತಾಲೂಕುಗಳಲ್ಲಿ ನದೀ ತೀರದ ಊರುಗಳಲ್ಲಿ ವಾಸ್ತವ್ಯವಿರುವ ಒಂದು ಬುಡಕಟ್ಟು ಸಮುದಾಯ. ವಿಂಧ್ಯಾ ಪರ್ವತ ಮತ್ತು ಆಂಧ್ರಪ್ರದೇಶದ ಕಾಡುಮಲೆಗಳ ಪ್ರದೇಶಗಳಿಂದ. ವಿವಿಧ ಕಾಲಘಟ್ಟಗಳಲ್ಲಿ, ವಿವಿಧ ಕಾರಣಗಳಿಂದಾಗಿ ವಲಸೆ ಬಂದಿರಬಹುದಾದ ಒಕ್ಕಲು ಸಮುದಾಯಗಳ ಪೈಕಿ ಈ ಗಾಮೊಕ್ಕಲು ಸಮಾಜವೂ ಒಂದು. ಈ ಸಮಾದಜಲ್ಲಿ ಇತ್ತೀಚೆಗೆ ಹಿಂದೂ ಜಾತಿ ಪದ್ಧತಿಯ ಕೆಲವು ಸುಧಾರಿತ ಲಕ್ಷಣಗಳು

ಕಂಡು ಬಂದರೂ, ಇವರು ಬುಡಕಟ್ಟು ಸಮುದಾಯದ ಮೂಲ ಲಕ್ಷಣಗಳನ್ನು ಇನ್ನೂ ಉಳಿಸಿಕೊಂಡು ಬಂದಿರುವುದು ಗೋಚರಿಸುತ್ತದೆ. ಗಾಮೊಕ್ಕಲು ಸಮಾಜದಲ್ಲೂ ಹಾಲಕ್ಕಿ ಒಕ್ಕಲು ಸಮುದಾಯುದವರಂತೆ ತಮ್ಮ ಸಂಸ್ಕೃತಿ ಸಂಪ್ರದಾಯಗಳಲ್ಲಿ ಗುಮಟೆ ಕಲೆ ಬೆರೆಸಿಕೊಂಡಿರುವುದನ್ನು ಕಾಣಬಹುದು. ಗಾಮೊಕ್ಕಲು ಸಮಾಜದಲ್ಲಿರುವ 'ಗುಮಟೆ ಪದ' ಎಂಬ ಈ ಜಾನಪದ ಕಲೆ ಕುಮಟಾ ತಾಲೂಕಿನ ಬಡಗು ದಿಕ್ಕಿನ ಊರುಗಳಲ್ಲಿ ಮಾತ್ರ ಪ್ರಚಲಿತವಿದೆ. ಆದರೆ ಹೊನ್ನಾವರ ತಾಲೂಕಿನ ಊರುಗಳಲ್ಲಿ ಈ ಕಲೆ ಕಂಡು ಬರುವುದಿಲ್ಲ. ಕುಮಟಾ, ಅಂಕೋಲಾ ತಾಲೂಕುಗಳ ಹಾಲಕ್ಕಿ ಒಕ್ಕಲಿಗರ ಪ್ರಭಾವದಿಂದ ಕುಮಟಾ ತಾಲೂಕಿನ ಗಾಮೊಕ್ಕಲು ಸಮಾಜದಲ್ಲಿ ಈ ಕಲೆ ಇರುವ ಸಾಧ್ಯತೆಗಳಿವೆ. ಗಾಮೊಕ್ಕಲು ಸಮಾಜದವರೂ ಕೂಡಾ ಹಾಲಕ್ಕಿ ಒಕ್ಕಲಿಗರಂತೆಯೇ ಮದ್ದಳೆಯಾಕಾರದ ಉದ್ದವಿರುವ ಗಮಟೆಯನ್ನೇ ಉಪಯೋಗ ಮಾಡುತ್ತಾರೆ. ಮಣ್ಣಿನಿಂದ ತಯಾರಿಸಲ್ಪಟ್ಟ ಗುಮಟೆಯ ಅಗಲವಿರುವ ಬಾಯಿಗೆ ಉಡದ ಅಥವಾ ಕಾನಕುರಿಯ ಚರ್ಮವನ್ನು ಕಟ್ಟುತ್ತಾರೆ. ಗುಮಟೆಕಾರರು ಮತ್ತು ತಾಳಕಾರರು ತಂತಮ್ಮ ವಾದನಗಳನ್ನು ಪ್ರಾರಂಭಿಸಿದ ಮೇಲೆ ಹಾಡುಗಾರರು ಹಾಡಲು ಉಪಕ್ರಮಿಸುತ್ತಾರೆ. ಇತರರು ಆ ಹಾಡುಗಳನ್ನು ಸಾಮೂಹಿಕವಾಗಿ ಅನುಕರಣೆ ಮಾಡುತ್ತಾರೆ. ದೇವರ ಸ್ತುತಿಯಿಂದ ಪ್ರಾರಂಭವಾದ ಹಾಡುಗಳು ತುಂಬಾ ಸಮಯದವರೆಗೆ ಹಾಡಲ್ಪಡುವಾಗ ರಾಮಾಯಣ, ಮಹಾಭಾರತ ಮತ್ತು ಸಾಮಾಜಿಕ ಸಂಗತಿಗಳಿಗೆ ಸಂಬಂಧಿಸಿದ ಅನೇಕ ಹಾಡುಗಳನ್ನೂ ಹಾಡುತ್ತಾರೆ. ಹಾಲಕ್ಕಿ ಒಕ್ಕಲಿಗ ಸಮುದಾಯದ 'ಹಗರಣ' ಕಲಾ ಪ್ರಕಾರದ ವೇಷಗಳಂತೆ ಗಾಮೊಕ್ಕಲು ಸಮಾಜದ 'ಗುಮಟೆ ಪದ' ಕಲೆಯಲ್ಲೂ ವೇಷಗಳನ್ನು ಕಾಣಬಹುದು. ಆದರೆ ಈ ಗುಮಟೆ ಕಲೆ ಹಾಲಕ್ಕಿ ಒಕ್ಕಲು ಸಮಾಜದಲ್ಲಿ ಪ್ರಾಮುಖ್ಯತೆ ಪಡೆದು ಪ್ರಸಿದ್ಧವಾದ ಮಟ್ಟದಲ್ಲಿ ಗಾಮೊಕ್ಕಲು ಸಮುದಾಯದಲ್ಲಿ ಪ್ರಸಿದ್ಧಿ ಪಡೆದಿಲ್ಲವಾದುದರಿಂದ ಈ ಸಮಾಜದಲ್ಲಿ 'ಗುಮಟೆ ಪದ' ಅವನತಿಯ ಹಾದಿಯಲ್ಲಿದೆ.

ಬುರ್ರಕಥಾ ಮೇಳದಲ್ಲಿ ಗುಮಟೆ : ಕರ್ನಾಟಕದಲ್ಲಿ ನೋಡಲು ಸಿಗುವ ಜಾನಪದ ಕಲೆಗಳ ಪೈಕಿ 'ಬುರ್ರಕಥಾ ಮೇಳ'ವೂ ಒಂದು. ಈ ಕಲೆ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಗಡಿಪ್ರದೇಶಗಳಲ್ಲಿ ಕಂಡುಬರುತ್ತದೆ. ಆಂಧ್ರಪ್ರದೇಶದಲ್ಲಿ ಈ ಕಲೆ ಹೆಚ್ಚು ಪ್ರಸಿದ್ಧವಾಗಿದೆ. ಕರ್ನಾಟಕದಲ್ಲಿ ಕೋಲಾರ, ರಾಯಚೂರು, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ಈ ಕಲಾಕಾರರಿದ್ದಾರೆ. ಈ ಮೇಳದಲ್ಲಿ ಪ್ರಮುಖವಾಗಿ ಮೂರು ಜನ ಕಲಾವಿದರಿರುತ್ತಾರೆ. ಪ್ರಧಾನ ಗಾಯಕ ಮಧ್ಯದಲ್ಲಿ ನಿಂತು ಕಥೆಯನ್ನು ಹಾಡುತ್ತಾ ತನ್ನ ಕೊರಳಿಗೆ ಜೋತು ಹಾಕಿದ ತಂಬೂರಿ ಮೀಟುತ್ತಾನೆ. ಈ ವೇಳೆಯಲ್ಲಿ ಆತನ ಎರಡೂ ಬದಿಗಳಲ್ಲಿ ನಿಂತ ಇಬ್ಬರು ಕಲಾಕಾರರು ಗುಮಟೆಗಳನ್ನು ಬಾರಿಸುತ್ತಾ, ಪ್ರಧಾನ ಗಾಯಕ ಹಾಡುವ ಹಾಡುಗಳನ್ನು ಪುನರುಚ್ಚರಿಸುತ್ತಾ ಕಥಾ ಪ್ರವಾಹಕ್ಕೆ ಸಹಕಾರ ನೀಡುತ್ತಾರೆ. ಬುರ್ರಕಥಾ ಮೇಳದಲ್ಲಿ ಬಳಕೆಯಾಗುವ ಗುಮಟೆ ಮಣ್ಣು, ತಾಮ್ರ ಅಥವಾ ಹಿತ್ತಾಳೆಯಿಂದ ತಯಾರು ಮಾಡಿದ್ದೂ ಇರುತ್ತದೆ. ಆಂಧ್ರಪ್ರದೇಶದ

'ಬುಡಗ ಜಂಗಾಲ' ಕುಲದವರು ಬುರ‍್ರಕಥಾಮೇಳದ ಮೂಲ ಕಲಾಕಾರರು ಎಂಬುದಾಗಿ ಹಲವು ಸಂಶೋಧಕರ ಅಭಿಪ್ರಾಯ. ಈ ಪಂಗಡದ ಮಹಿಳೆಯರೂ ಬುರ‍್ರಕಥಾ ಕಲಾಕಾರರಾಗಿ ಪ್ರಸಿದ್ಧರಾಗಿರುವುದು ತಿಳಿದುಬರುತ್ತದೆ.

ಕರ್ನಾಟಕದ ಹರಿಕಥೆಗೆ ಹೋಲಿಕೆಯಾಗುವ ಬುರ‍್ರಕಥಾ ಕಲೆಯ ಮೂಲಸ್ಥಳ ಆಂಧ್ರಪ್ರದೇಶ. ಆಂಧ್ರಪ್ರದೇಶದಿಂದ ವಲಸೆ ಬಂದು ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿ ಬುರ‍್ರಕಥೆ ಹಾಡಲು ಪ್ರಾರಭಿಸಿ ಮೈಸೂರು ಮಹಾರಾಜರಿಂದ ಬಿರುದು ಪಡೆದ ಕಲಾವಿದರು ತುಳಸೀ ರಾಮದಾಸರು. ಇವರ ಮಗ ವೆಂಕಟಸ್ವಾಮಿದಾಸ್. ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನಲ್ಲಿರುವ ಶ್ರೀಮತಿ ಜಯಮ್ಮ ತನ್ನ ತಂದೆ ವೆಂಕಟಸ್ವಾಮಿ ದಾಸರಿಂದ ತನ್ನ ಏಳನೇ ವರ್ಷ ಪ್ರಾಯದಿಂದ ಕಲಿತು ಪ್ರಸಿದ್ಧ ಬುರ‍್ರಕಥಾ ಕಲಾವಿದೆಯಾಗಿದ್ದಾರೆ. ಈಗ ಅವರಿಗೆ 80 ವರ್ಷ ಹತ್ತಿರವಾದರೂ ಇಬ್ಬರು ಹೆಮ್ಮಕ್ಕಳ ಗುಮಟೆ ಸಾಥಿಯೊಂದಿಗೆ ಬುರ‍್ರಕಥಾ ಕಲಾ ಪ್ರದರ್ಶನ ನೀಡುತ್ತಿದ್ದಾರೆ. ಜಯಮ್ಮ ದಶಂಬರ್ 2001ರಲ್ಲಿ ಉಡುಪಿ ಕೃಷ್ಣ ಮಠದ ರಾಜಾಂಗಣದಲ್ಲಿ ಮತ್ತು ಎಂಜಿಎಂ ಕಾಲೇಜಿನ ರವೀಂದ್ರ ಕಲಾಮಂಟಪದಲ್ಲಿ ಈ ಕಲಾಪ್ರದರ್ಶನ ನೀಡಿದ ದಾಖಲೆ ಸಿಗುತ್ತದೆ.

ಬುರ‍್ರ ಕಥಾ ಮೇಳ ನಡೆಸುವ ಪ್ರಧಾನ ಕಲಾಕಾರ ಸುಂದರವಾಗಿ ಶೃಂಗರಿಸಿ ಕೊಳ್ಳುತ್ತಾನೆ. ತಲೆಗೆ ಜರಿಯ ರುಮಾಲು, ಪೇಟಾ, ನಿಲುವಂಗಿ, ಕಪ್ಪು ಕೋಟು, ಹೆಗಲಲ್ಲಿ ಜರಿಯ ಶಾಲು, ಬಿಳಿ ಕಚ್ಚೆ, ಕಾಲಿಗೆ ಗೆಜ್ಜೆ, ಬಲಗೈಯಲ್ಲಿ ತಂಬೂರಿ, ಹಣೆಗೆ ಕುಂಕುಮದ ತಿಲಕ, ವಿಭೂತಿ ಹಚ್ಚಿಕೊಳ್ಳುತ್ತಾನೆ. ಸಹಕಲಾಕಾರರು ಸಾದಾ ತೊಡುಗೆಯಲ್ಲಿರುತ್ತಾರೆ. ಆದರೂ ಅವರ ಎಡಹೆಗಲಿಗೆ ಒಂದೊಂದು ಗುಮಟೆ ತೂಗುಹಾಕಿಕೊಂಡು ಪ್ರದರ್ಶನದ ಸಮಯ ವಿವಿಧ ರೀತಿಯ ಶಬ್ಧ ಹೊರಹೊಮ್ಮುವ ರೀತಿಯಲ್ಲಿ ವಾದನ ಮಾಡುತ್ತಾರೆ. ಊರಿನ ಉತ್ಸವ, ಜಾತ್ರೆಗಳಲ್ಲಿ ಬುರ‍್ರಕಥಾ ಮೇಳ ನಡೆಸಿದರೆ ಸಮೃದ್ಧಿಯಾಗುವಂತೆ ಮಳೆ ಬರುತ್ತದೆ ಎಂಬ ನಂಬಿಕೆಯಿದೆ. ಮುಗ್ಗುರು ಮರಾಟಿಲು, ಕಾಂಬೋಜರಾಜ, ಪೆದ್ದ ಬೊಟ್ಟಿಲ ರಾಜ, ಕಾವಮ್ಮ ಕಥಾ, ಕಾಟಮರಾಜ ಕಥಾ, ಪರ‍್ಯಾಯ ಪಾಪಡು , ದೇಸಿಂಗ ರಾಜ ಕಥಾ, ಬಲ್ಲಾಳ ರಾಜ ಕಥಾ ಶ್ರೀಮಾಳ ಕಥಾ, ಬಾಲನಾಗಮ್ಮ ಕಥಾ, ಕುಮಾರ ರಾಮ–ಹೀಗೆ ಧರಾವಳಿ ಕಾವ್ಯ ಕಥನ ಗಳನ್ನು ಹಾಡುತ್ತಾರೆ. ಒಂದೊಂದು ಕಥೆಯೂ ಮೂರು ನಾಲ್ಕು ರಾತ್ರಿ ಹಾಡುವಷ್ಟು ದೀರ್ಘವಾಗಿರುತ್ತವೆ. ಕೆಲವು ಬಾರಿ ಕಲಾಕಾರರು ಇಂತಹ ಕಥೆಗಳನ್ನು ಒಂದು ಘಂಟೆ ಅವಧಿಯೊಳಗೆ ಮುಗಿಸುವ ಪ್ರತಿಭಾವಂತರಿರುತ್ತಾರೆ. ಬುರ‍್ರಕಥಾ ಕಲಾಪ್ರಕಾರದಲ್ಲಿ ಪ್ರಮುಖವಾಗಿ ಗುಮಟೆ ಉಪಯೋಗವಾಗುವುದರಿಂದ ಗುಮಟೆ ಉಪಯೋಗದ ಜನಪ್ರಿಯತೆ ಆಂಧ್ರಪ್ರದೇಶದಲ್ಲೂ ಪ್ರಚಲಿತದಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.

ಬುರ್ರಕಥಾ ಪದ (ಉದಾ: ಬಾಲನಾಗಮ್ಮ ಕಥೆಯ ಪ್ರಾರಂಭ) :

ತಂದನಾನಾ ತಂದಾನಾ ತಂದಾನಾ ತಾನ

ತನತಂದನ ತಾನ ತಂದಾನ ತಾನ || ಸೊಲ್ಲು ||

ಕೇಳಿಂತ ಸಭೆಗೊಳ ತಂದಾನ

ಕೇಳಿಂತ ಪ್ರಭುಗಳಾ ತಂದಾನ

ಕಲ್ಲವಾದ್ಯೆಲ್ಲ ತಂದನ

ಪುಣ್ಯವಂತ ಗ್ರಾಮದಲ್ಲಿ

ಸತ್ಯವಂತೆ ಶಿವ ಬಾಲನಾಗಮ್ಮನ ಕಥೆ ಹೇಳುತೀನಿ

ತಂದನಾನಾ ತಾನು ತಂದಾನಾ ತಂದನಾನ್ನ

ಕರಪಾಲ ಮೇಳದಲ್ಲಿ ಗುಮಟೆ : ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ವೀರಶೈವ ಜಂಗಮ ಸಮುದಾಯದವರಲ್ಲಿ 'ಕರಪಾಲ ಮೇಳ' ಎಂಬ ಪ್ರದರ್ಶನ ಕಲೆಯಿದೆ. ಕರಪಾಲವು 'ಕರಪಲ್ಲವ' ಎಂಬ ಶಬ್ದದಿಂದ ಬಂದಿರುವ ಸಾಧ್ಯತೆಯಿದೆ. ಕರಪಲ್ಲವ ಅಂದ್ರೆ ಸಂಸ್ಕೃತದಲ್ಲಿ 'ಕೈಸಂಜ್ಞೆ' ಎಂದರ್ಥ. ಕರಪಲ್ಲವ - ಕರಪಲ್ಲವಾಗಿ ಕರಪಾಲ ಎಂದಾಗಿರಬಹುದು ಎಂಬ ವಿಶ್ಲೇಷಣೆ ನಡೆದಿದೆ. ಈ ಮೇಳದ ಕಲಾವಿದರು ವೀರಗಚ್ಚೆ ಹಾಕಿ ಬಿಳಿಯ ಜುಬ್ಬ, ತಲೆಗೆ ಮುಂಡಾಸು, ಅಂಬೆಸರ ಕಿರೀಟ, ಕಾಲಿಗೆ ಗೆಜ್ಜೆ, ಹಣೆಗೆ ವಿಭೂತಿ, ಕೊರಳಿಗೆ ರುದ್ರಾಕ್ಷಿ ಮಾಲೆ - ಹೀಗೆ ಪೌರಾಣಿಕ ನಾಟಕಗಳಿಗೆ ಉಪಯೋಗಿಸುವ ವಸ್ತ್ರಾಭರಣಗಳನ್ನು ಧರಿಸಿದ ಮೇಳದಲ್ಲಿ ಒಬ್ಬ ಮುಖ್ಯ ಕಥೆಗಾರ, ಇಬ್ಬರು ಸಹನರ್ತಕರು ಹಾಗೂ ಮೂವರು ಹಿಮ್ಮೇಳದಲ್ಲಿ ಒಟ್ಟು ಐವರು ಕಲಾವಿದರಿರುತ್ತಾರೆ.

ಕರಪಾಲ ಮೇಳವು ಪೂರ್ತಿಯಾಗಿ ಮುಖ್ಯ ಕಥೆಗಾರನನ್ನು ಅವಲಂಬಿಸಿರುತ್ತದೆ. ನಿರೂಪಕನು ಕಥೆಯನ್ನು ವಿವರಿಸುವಾಗ ಇಬ್ಬರು ಸಹನರ್ತಕರೂ ಹೂಂಗುಟ್ಟುತ್ತಾ ನಡುವೆ ಅವನನ್ನು ಪ್ರಶ್ನಿಸುತ್ತಾರೆ. ಹೀಗೆ ಪ್ರಶ್ನಿಸುತ್ತಿರುವಾಗಲೇ ಮೇಳಕ್ಕೆ ಕಳೆಬರುತ್ತದೆ. ಕಥೆಗಾರನು ಹಾಡುತ್ತಾ ಸಹ ನರ್ತಕರಿಗೆ ಹಾಡುಗಳನ್ನು ಎತ್ತಿ ಕೊಡುವಾಗ ಆ ಹಾಡುಗಳನ್ನು ಅವರು ಎತ್ತುಗಡೆ ಮಾಡಿ ನರ್ತಿಸುತ್ತಾರೆ.

ಈ ಮೇಳದ ಇನ್ನೊಂದು ರೂಪ ವೈವಿಧ್ಯಮಯವಾಗಿದ್ದು 'ಕರಪಲ್ಲ' ವೆಂದು ಪ್ರಸಿದ್ಧವಾಗಿದೆ . ಕನಿಷ್ಠ ಮೂರು ಜನ ಕಲಾವಿದರು ಬೇಕಾಗುವ ಈ ಮೇಳದಲ್ಲಿ ಮುಖ್ಯ ನಿರೂಪಕನೊಬ್ಬ ಹಾಡುತ್ತಿರುವಾಗ ಶಿಷ್ಯರಿಬ್ಬರು ಸ್ವಲ್ಪ ದೂರದಲ್ಲಿ ಹಿಮ್ಮೇಳದೊಂದಿಗೆ ನರ್ತಿಸುತ್ತಿರುತ್ತಾರೆ. ಇವರ ಸುತ್ತ ಜನನೆರೆದಾಗ ಅವರಲ್ಲಿ ಹಣ ಕೊಡಬಹುದಾದವರ ಹೆಸರನ್ನು

ಕೈಸನ್ನೆಯ ಮೂಲಕ ಗುರುವು ಶಿಷ್ಯರಿಗೆ ತಿಳಿಸುತ್ತಾನೆ. ಹೆಸರನ್ನು ಮಾತಿನಲ್ಲಿ ಹೇಳದೇ ಕೈಸನ್ನೆ ಮೂಲಕ ತಿಳಿಸುವುದು ಈ ಕಲೆಯ ವಿಶೇಷತೆ. ಆದುದರಿಂದ ಈ ಕಲೆಗೆ 'ಕರಪಲ್ಲ' ಅಂತ ಹೆಸರು.

ಶೈವ ಧರ್ಮಪ್ರಸಾರದ ಉದ್ದೇಶವಿರುವ ಈ ಕಲೆಯಲ್ಲಿ ಕಾಲಜ್ಞಾನದ ಹಾಡುಗಳನ್ನು ಹಾಡುತ್ತಾರೆ. ಗಣಪತಿ ವಂದನೆ, ಶಾರದಾಸ್ತುತಿಯ ನಂತರ ಕಾಡಸಿದ್ಧಮ್ಮನ ಕತೆ, ರೂಪಾವತಿ ಕಲ್ಯಾಣ, ಕಳಿಂಗ ಮಹಾರಾಜನ ಕತೆ, ಶನಿ ಮಹಾತ್ಮೆ, ಸತ್ಯವ್ರತ, ರುದ್ರೇಶ್ವರ ಮಹಾತ್ಮೆ, ಕಾಳಿಂಗ ಕುಮಾರ ಮುಂತಾದ ಕತೆಗಳ ಪ್ರದರ್ಶನದಲ್ಲಿ ದಿನನಿತ್ಯದ ಬದುಕಿನ ಪ್ರಸಂಗಗಳು ಸಂಮಿಳಿತಗೊಂಡಿರುತ್ತವೆ. ಎಲ್ಲಾ ಕಥೆಗಳಲ್ಲಿ ಶಿವಪಾರ್ವತಿಯರೇ ಮುಖ್ಯರಾಗಿ ಸಂತಾನ, ಆರೋಗ್ಯ, ಐಶ್ವರ್ಯ, ಸುಖ, ಸೌಭಾಗ್ಯ ಕರುಣಿಸುವ ಪರಮೇಶ್ವರನ ಸ್ತುತಿ ಮೇಳದ ಅಂತರಂಗದ ಉದ್ದೇಶ.

ಈ ಮೇಳವು ವೇದಿಕೆಯಲ್ಲಿ ಪ್ರದರ್ಶಿಸಲ್ಪಡುತ್ತದೆ. ಸುಮಾರು ಎಂಟು ಅಡಿ ಎತ್ತರದ ವೇದಿಕೆಯು ನಾಲ್ಕು ಕಂಬಗಳಿಂದ ರಚಿಸಲ್ಪಟ್ಟು ಪ್ರೇಕ್ಷಕರ ಕಡೆಗೆ ತೆರೆದು ಉಳಿದ ಮೂರು ಭಾಗ ಸೋಗೆಗಳಿಂದ ಮುಚ್ಚಿರುತ್ತದೆ. ಕರಪಾಲ ಮೇಳದಲ್ಲಿ ಮುಖ್ಯವಾದ ಹಿಮ್ಮೇಳ ಅಂದರೆ ಗುಮಟೆಗಳು ಮತ್ತು ತಾಳಗಳು ಗುಮಟೆ ವಾದನ ಕರಪಾಲ ಕುಣಿತಕ್ಕೆ ವಿಶೇಷವಾದ ಹಿಮ್ಮೇಳ. ಪ್ರಕೃತ ಈ ಗುಮಟೆ ಮತ್ತು ತಾಳಗಳೊಂದಿಗೆ ಹಾರ್ಮೋನಿಯಮ್ ಮತ್ತು ಮದ್ದಳೆಗಳು ಬಳಸಲ್ಪಡುತ್ತಿವೆ. ಗುಮಟೆಗಳನ್ನು ಬಳಸುವುದು ವಿರಳವಾಗುತ್ತಾ ಬಂದಿರುವುದನ್ನು ಕಾಣಬಹುದು.

ಮುಕ್ರಿ ಸಮುದಾಯದಲ್ಲಿ ಗುಮಟೆ : ಉತ್ತರ ಕನ್ನಡ ಜಿಲ್ಲೆಯ ಕುಮಟಾ ಮತ್ತು ಹೊನ್ನಾವರ ತಾಲೂಕುಗಳ ಹಳ್ಳಿಗಳಲ್ಲಿ ಮಾತ್ರ ಕಾಣಲು ಸಿಗುವ 'ಮುಕ್ರಿ' ಸಮುದಾಯ ಕನ್ನಡ ಮಾತೃಭಾಷೆಯ ಜನಾಂಗ. ಈ ಜನಾಂಗದವರು ವಾಸ್ತವ್ಯವಿರುವ ಪ್ರದೇಶ ನೈಸರ್ಗಿಕವಾಗಿ, ಪ್ರಕೃತಿ ಸೌಂದರ್ಯದಲ್ಲಿ ಶ್ರೀಮಂತ ಸೊಬಗನ್ನು ಹೊಂದಿದೆ. ಆದರೆ ಇಲ್ಲಿ ವಾಸ್ತವ್ಯವಿರುವ 'ಮುಕ್ರಿ' ಜನಾಂಗ ಬಡತನ ರೇಖೆಗಿಂತಲೂ ದುರ್ಬಲ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಾರೆ. ಡಾ। ಎಲ್. ಜಿ. ಭಟ್ಟ ಇವರ 'ಮುಕ್ರಿಯರು' ಎಂಬ ಜನಾಂಗೀಯ ಪರಿಚಯಾತ್ಮಕ ಪುಸ್ತಕವನ್ನು ಐಬಿಎಚ್ ಪ್ರಕಾಶನದವರು ಪ್ರಕಟಿಸಿದ್ದಾರೆ. ಎಸ್. ಸಿಲ್ವಾ ಎಂಬವರು ಬರೆದ 'ಕಾರವಾರ ಜಿಲ್ಲಾ ದರ್ಶನ' ಮೈಸೂರು ಗಝೆಟಿಯರ್ ಆಫ್ ಬಾಂಬೆ ಪ್ರೆಸಿಡೆನ್ಸಿ' ಕರ್ನಾಟಕ ಗಝೆಟಿಯರ್ ಎಡ್ಗರ್ ಥರ್ಸ್ಟನ್ ಇವರ Castes and tribes of southern India - ಈ ಗ್ರಂಥಗಳಲ್ಲಿ ಮುಕ್ರಿ ಜನಾಂಗದ ಬಗ್ಗೆ ಮಾಹಿತಿ ಸಿಗುತ್ತದೆ.

ಮುಕ್ರಿ ಸಮಾಜದ ಜಾನಪದದಲ್ಲೂ ಗುಮಟೆಗೆ ಪ್ರಾಧಾನ್ಯತೆ ಇದೆ. ಹಾಲಕ್ಕಿ ಸಮುದಾಯದಂತೆಯೇ ಮುಕ್ರಿಯರ ಗುಮ್ಮಾ ಫಾಂಗ್, ಗುಮಟೆ ಮತ್ತು ಕೋಲಾಟ - ಈ

ಮೂರೂ ಕಲೆಗಳಲ್ಲಿ ಉಪಯೋಗಿಸಲ್ಪಡುವ ಪ್ರಧಾನ ಸಂಗೀತ ವಾದ್ಯ ಗುಮಟೆ. ಹಾಲಕ್ಕಿ ಸಮಾಜದ 'ಹಗರಣ' ಮುಕ್ರಿಯರಲ್ಲೂ ವಾಡಿಕೆಯಲ್ಲಿದೆ. ಈ ಹಗರಣ ಕಲೆಯಲ್ಲಿ ಪೌರಾಣಿಕ ಹಾಗೂ ಹಾಸ್ಯ ಪ್ರಧಾನ ವೇಷ ಹಾಕಿ ಕುಣಿಯುತ್ತಾರೆ. ಸುಗ್ಗಿಯ ಸಂದರ್ಭ ಮಾತ್ರ ಆಡುವ ಈ ಕಲೆಯಲ್ಲಿ ಉಪಯೋಗವಾಗುವ ಗುಮಟೆ ಮದ್ದಳೆಯಂತಹ, ಉದ್ದ ಮತ್ತು 'ಬಿಂದಿಗೆ' ಆಕಾರದ ಗುಮಟೆಗಳು - ಹೀಗೆ ಎರಡೂ ಬಗೆಯವು ಬಳಸಲ್ಪಡುತ್ತವೆ.

ವಿವಿಧ ಕಲಾಪ್ರಕಾರವಾಗಿ ಗುಮಟೆ ಕುಣಿತ :

'ಗೋಫ್' ಕೋಲಾಟದಲ್ಲಿ ಗುಮಟೆ : ಉತ್ತರ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣ ಸ್ತ್ರೀಯರು, ಮರಾಠಿ, ಕೋಮಾರಪಂಥ, ಪಡತಿ ವೈಶ್ಯ ಮತ್ತು ಅಂಬಲಿಗ ಸಮುದಾಯದ ಜನರು ಈ 'ಗೋಫ್' ಆಟ ಆಡುತ್ತಾರೆ. ಹೋಳಿಯ ಸಂದರ್ಭದಲ್ಲಿ ಗೋವಾದ ಮಂಗೇಶಿಯಲ್ಲಿ ಸ್ತ್ರೀಯರು ಮತ್ತು ಸಾಂಗೆಂ, ಫೊಂಡಾ, ಕಾನಾಕೊನಾ, ಪೆಡ್ನೆಂ ಪ್ರದೇಶಗಳಲ್ಲಿ ಪುರುಷರು ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಇದು ಕರ್ನಾಟಕದ ಜಡೆ ಕೋಲಾಟದ ಇನ್ನೊಂದು ರೂಪವೆನ್ನಬಹುದು. ಇಲ್ಲಿ ಹಗ್ಗಗಳ ಬದಲಿಗೆ ರಂಗುರಂಗಿನ ಸೀರೆಗಳು ಅಥವಾ ಬಟ್ಟೆಯ ಪಟ್ಟಿಯಂತಹ ಇತರ ಸಾಮಗ್ರಿಗಳು ಉಪಯೋಗವಾಗುತ್ತವೆ. ಸುಮಾರು 15 ಅಡಿ ಎತ್ತರದ ಬಿದಿರಿನ ಎರಡು ಕಂಭಗಳನ್ನು ನೆಟ್ಟು, ಮೇಲೆ ಅಡ್ಡವಾಗಿ ಒಂದು ಬಿದಿರನ್ನು ಕಟ್ಟುತ್ತಾರೆ. ಈ ಅಡ್ಡ ಬಿದಿರಿನ ಮಧ್ಯಕ್ಕೆ ಕಟ್ಟಿ ಕೆಳಗಡೆ ಇಳಿಬಿಟ್ಟ ವಿವಿಧ ರಂಗಿನ ಸೀರೆ ಅಥವಾ ಬಟ್ಟೆಯ ಪಟ್ಟಿಗಳ ಕೊನೆತುದಿಗಳನ್ನು ಕಲಾಕಾರರು ಒಂದು ಕೈಯಲ್ಲಿ ಹಿಡಿದುಕೊಂಡು, ಇನ್ನೊಂದು ಕೈಯಲ್ಲಿ ಕೋಲಾಟದ ಕೋಲುಗಳನ್ನು ಹಿಡಿದುಕೊಂಡು ವರ್ತುಲಾಕಾರದಲ್ಲಿ ನಿಲ್ಲುತ್ತಾರೆ. ಕುಣಿತಗಾರರು ಸ್ವತಃ ಹಾಡುತ್ತಾ ವಿವಧ ರೀತಿಯಲ್ಲಿ ನಿಯಮಿತವಾಗಿ ಒಬ್ಬರಿಗೊಬ್ಬರು ತೂರಿಕೊಂಡು ಗೋಫ್, ಸರಪಳಿ, ಜಡೆಗಳನ್ನು ಹೆಣೆಯುತ್ತಾರೆ. ಈ ಪ್ರದರ್ಶನ ಕಲೆಯಲ್ಲಿ ಹಾಡುಗಳೊಂದಿಗೆ ಹಿಮ್ಮೇಳದ ವಾದನಕ್ಕೆ ಬಳಸಲ್ಪಡುವ ಪ್ರಧಾನ ವಾದ್ಯ 'ಗುಮಟೆ'

'ಜಾಗೊರ್' ಕಲಾ ಪ್ರಕಾರದಲ್ಲಿ ಗುಮಟೆ : ಗೋವಾದ 'ಗಾವ್ಡೆ' (ಗೌಡಿ) ಸಮುದಾಯದವರು ಆಡುವ, ಗೀತನಾಟಕದ ಒಂದು ಜಾನಪದ ಪ್ರಕಾರ 'ಜಾಗೊರ್'. ಸಂಗೀತ, ನೃತ್ಯ ಮತ್ತು ಮಾತುಗಾರಿಕೆಗಳಿಂದ ಕೂಡಿದ ಈ ಜಾನಪದ ಕಲೆ ಕೊಂಕಣಿ ಸಂಸ್ಕೃತಿಯ ಒಂದು ಪ್ರತೀಕ. 'ಮಾಂಡ್' ಎಂಬ ವೇದಿಕೆಯಲ್ಲಿ ಈ ಆಟ ರಾತ್ರಿಯಿಡೀ ಪ್ರದರ್ಶಿಸಲ್ಪಡುತ್ತದೆ. ಕರ್ನಾಟಕದಲ್ಲಿ ಯಕ್ಷಗಾನಕ್ಕೆ ಜನ ಸೇರುವಂತೆ ಜಾಗೊರ್ ನೋಡಲು ಪ್ರೇಕ್ಷಕರು ಸೇರುತ್ತಾರೆ. ಈ ಜಾನಪದ ಕಲೆಯಲ್ಲಿ ಪ್ರಮುಖವಾಗಿ ಉಪಯೋಗವಾಗುವ ವಾದ್ಯಗಳು - ನಗಾರಿ, ಕಂಸಾಳೆ, ಝುಂಜ್ ಮತ್ತು 'ಗುಮಟೆ'

ಗೋವಾದ ಕಲಾವಿದರಾದ ಕಾಂತಾಗಾವ್ಡೆ ಮತ್ತು ತಂಡದವರು ಈ ಜಾಗೊರ್ ಕಲಾ ಪ್ರದರ್ಶನದಲ್ಲಿ ಪ್ರಸಿದ್ಧ ಹೆಸರು. ಈ ತಂಡದವರು ದೇಶಾದ್ಯಂತ, ಹಾಗೆಯೇ ಸಿಂಗಾಪುರ,

ಮಲೇಶಿಯಾ ಮುಂತಾದ ಅಂತಾರಾಷ್ಟ್ರೀಯ ವೇದಿಕೆಗಳಲ್ಲೂ. ಈ ಕಲಾ ಪ್ರದರ್ಶನ ನೀಡಿದ್ದಾರೆ ಮತ್ತು ಪ್ರಶಸ್ತಿ ಪುರಸ್ಕಾರಗಳನ್ನೂ ಪಡೆದಿದ್ದಾರೆ.

ಖೇಳ್ : 'ಖೇಳ್' ಒಂದು ತರದ ನಾಟಕರೂಪದ ಹಳ್ಳಿಯ ಜಾನಪದ ಕಲೆ. ಹಬ್ಬ, ಉತ್ಸವಗಳ ಸಂದರ್ಭಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುತ್ತಾರೆ. ಗುರಿಕಾರನ ಮನೆಯಲ್ಲಿ ಪ್ರಾರಂಭಿಸಿ, ಊರಿನ ಇತರ ಮನೆಗಳಲ್ಲಿ ಕಲಾಕಾರರು ಆಡುತ್ತಾರೆ. ಈ ತಂಡದ ಮುಖ್ಯಸ್ಥನಿಗೆ 'ಮೆಸ್ತ್ರೆ' ಅಂತ ಹೆಸರು. ಈ ಮೆಸ್ತ್ರೆ ನಾಟಕದ ಲೇಖಕ, ದಿಗ್ದರ್ಶಕ ಮತ್ತು ತಯಾರಕನಾಗಿರುತ್ತಾನೆ. ಕೆಲವು ಸ್ಥಿತಿವಂತರ ಮನೆಯಂಗಳದಲ್ಲಿ ಈ ಕಲೆಯನ್ನು ಪ್ರದರ್ಶಿಸುವಾಗ ಆ ಜಾಗದಲ್ಲಿ ಊರಿಗೆ ಊರೇ ಪ್ರೇಕ್ಷಕರಾಗಿ ಸೇರುತ್ತಾರೆ. ಕಲಾಕಾರರ ಪ್ರವೇಶಕ್ಕೆ ಮೊದಲು ಕೊಂಬು, ಕೊಳಲು, ವಾಯೊಲಿನ್‌ಗಳೊಂದಿಗೆ ವಾದನಕ್ಕಾಗಿ ಉಪಯೋಗಿಸುವ ವಾದ್ಯ 'ಗುಮಟೆ'

ಶ್ರವ್ಣೊಣ್ : ಕೇರಳದಲ್ಲಿ 'ಗಡೆ ಹೊರಾಂವ್ಚೆಂ' (ದೇವರ ಸ್ತುತಿ) ಗೀತೆಯೇ 'ಶ್ರವ್ಣೊಣ್'. ಹೋಳಿಯ ದಿವಸ ಸಾಯಂಕಾಲ ಕುಡುಬಿಯರು ಕುಲದೇವರ ದೇವಸ್ಥಾನದ ಎದುರು ಗಾಯನ ಪ್ರಾರಂಭಿಸಿ ಮೆರವಣಿಗೆಯಲ್ಲಿ ಸ್ಮಶಾನಕ್ಕೆ ಹೋಗುತ್ತಾರೆ. ಅಲ್ಲಿ ಮೃತರಾದ ಹಿರಿಯರ ಆತ್ಮಗಳ ತೃಪ್ತಿಗಾಗಿ ಧಾರ್ಮಿಕ ವಿಧಿಗಳನ್ನು ನೆರವೇರಿಸುತ್ತಾರೆ. ಈ ಧಾರ್ಮಿಕ ವಿಧಿಗಳನ್ನು ನಡೆಸುವ ಸಮಯದಲ್ಲಿ ವಾದನ ಮಾಡುವ ಮದ್ದಳೆ, ಊದುವಾದ್ಯ, ದೊಡ್ಡ ತಾಳಗಳೊಂದಿಗೆ ಬಾರಿಸುವ ಇನ್ನೊಂದು ವಾದ್ಯ 'ಗುಮಟೆ'

ಮಾಂಡೊ : ಪ್ರೀತಿ, ವಿರಹ ವಿಳಾಪ ಮತ್ತು ಪ್ರಸ್ತುತ ಸಾಮಾಜಿಕ ಹಾಗೂ ರಾಜಕೀಯ ಘಟನೆಗಳ, ನಿಧಾನಗತಿಯ ಅಲಾಪನೆಗಳಿಂದ ರಚಿತವಾದ ಹಾಡುಗಳ ಪ್ರಕಾರ 'ಮಾಂಡೊ'. ಈ ಹಾಡುಗಳಿಗೆ ತಕ್ಕುದಾದ ಕುಣಿತವೂ ಇದ್ದು, ಗೋವಾದಲ್ಲಿ ಕ್ರಿಶ್ಚಿಯನ್ ಸಮುದಾಯದಲ್ಲಿ ಬಹಳ ಪ್ರಸಿದ್ಧವಾದ ನೃತ್ಯ ಪ್ರಕಾರವಾಗಿದೆ. ಗೋವಾದ ಶ್ರೀಮಂತ ಮಹಲುಗಳಲ್ಲಿ ಸತ್ಕಾರಕೂಟಗಳು ನಡೆಯುವಾಗ ತುಂಬಾ ಜನ ಸೇರುತ್ತಿದ್ದರು. ಆ ಸಂದರ್ಭ ಹಜಾರದ ಬಾಗಿಲ ಹತ್ತಿರ ಒಬ್ಬನು ಒಮ್ಮಿಂದೊಮ್ಮೆಗೇ ಗುಮಟೆ ಬಾರಿಸಿದರೆ ಆ ಮಹಲಿನಲ್ಲಿ ಅಂದು 'ಮಾಂಡೊ' ನೃತ್ಯವಿದೆ ಅಂತ ಅರ್ಥ. ಅತಿಥಿಗಳನ್ನು 'ಮಾಂಡೊ' ಪ್ರದರ್ಶನಕ್ಕೆ ಆಮಂತ್ರಿಸಲು ಈ ರೀತಿ 'ಗುಮಟೆ' ಉಪಯೋಗವಾಗುತ್ತಿತ್ತು.

ಧನಗರ್ ನೃತ್ಯ : ಗೋವಾದಲ್ಲಿ 'ಧನಗರ್' (Shepherd Community) ಸಮುದಾಯದವರು ದಸರಾ ಸಮಯದಲ್ಲಿ 'ಹೊರ್ಬೊಲಾ' ಎಂಬ ನೃತ್ಯವಾಡುತ್ತಾರೆ. ಈ ನೃತ್ಯಕ್ಕೆ ದೇಹವಿಡೀ ಮುಚ್ಚುವಂತೆ ಬಿಳಿ ನಿಲುವಂಗಿ ಧರಿಸುತ್ತಾರೆ. 'ಹೊಡರ್-ಹೊಡರ್ ಹೊರ್ಬಾಲಾ' ಅಂತ ಕೂಗು ಹಾಕುತ್ತಾ, ಸಾಲುಕಟ್ಟಿ ಉದ್ದಕ್ಕೆ, ಅಡ್ಡಕ್ಕೆ ಚಲಿಸುತ್ತಾ ಕುಣಿಯುತ್ತಾರೆ. ಈ ಕುಣಿತ ಒಂದು ಕೈಯಿಂದ ರಂಗುರಂಗಿನ ರುಮಾಲು ಎತ್ತಿ, ಇನ್ನೊಂದು ಕೈಯಿಂದ ವಿಶಿಷ್ಟ ರೀತಿಯ ಹಸ್ತ ಮುದ್ರೆ ಪ್ರದರ್ಶಿಸುತ್ತಾ, ರುಮಾಲನ್ನು ಕೈಯಿಂದ ಕೈಗೆ ಬದಲಾಯಿಸುತ್ತಾ ಮುಂದುವರೆಯುತ್ತದೆ.

ಈ ಸಮುದಾಯದಲ್ಲಿ ಹೋಳಿ ಉತ್ಸವ ಸಂದರ್ಭ 'ಜಪಯ್' ಎಂಬ ಇನ್ನೊಂದು ನೃತ್ಯ ಪ್ರಕಾರ ಪ್ರಚಲಿತದಲ್ಲಿದೆ. ಈ ನೃತ್ಯದಲ್ಲಿ ನೃತ್ಯಕಾರರ ಕೈಯಲ್ಲಿ ರುಮಾಲು ಇರುವುದಿಲ್ಲ. ಹಸ್ತ ಮುದ್ರಿಕೆಯ ಪ್ರದರ್ಶನ ಜಾಸ್ತಿಯಿರುತ್ತದೆ. ಧನಗರರ ಈ ಎರಡೂ ನೃತ್ಯಗಳಲ್ಲಿ ಹಾಡುಗಾರಿಕೆ ಇರುವುದಿಲ್ಲ. ಆದರೆ ಹಿಮ್ಮೇಳದಲ್ಲಿ ಧೋಲು ಮತ್ತು ಝುಂಜ್ ಎಂಬ ತಾಳಗಳೊಂದಿಗೆ 'ಗುಮಟೆ' ಬಾರಿಸುತ್ತಾರೆ.

ಕುಣ್ಬಿ ನೃತ್ಯ : ಗೋವಾದಲ್ಲಿ 'ಕ್ರಿಶ್ಚಿಯನ್ ಕುಣ್ಬಿ ಗಾವ್ಡೆ' ಸಮಾಜದ ಮಧ್ಯವಯಸ್ಕ ಸ್ತ್ರೀಯರು ವಿವಾಹ ಸಂದರ್ಭಗಳಲ್ಲಿ ಅಥವಾ ಬೆಳೆಯ ಕೊಯ್ಲು ಮುಗಿದ ನಂತರ ಮನೆಯ ಅಂಗಳದಲ್ಲಿ ಒಟ್ಟು ಸೇರಿ 'ಕುಣ್ಬಿ ನೃತ್ಯ' ಆಡುತ್ತಾರೆ. ಇದಕ್ಕೆ ತಕ್ಕಂತೆ ಪೋಷಾಕು ತೊಟ್ಟು, ತಲೆಗೆ ಹೂ ಮುಡಿದು, ಸೊಂಟಕ್ಕೆ ಬಿಗಿದ ಬಿಳಿ ಶಾಲಿನ ಎರಡೂ ತುದಿಗಳನ್ನು ಎರಡು ಕೈಗಳಲ್ಲಿ ಹಿಡಿದು, ಎರಡು ಸಾಲುಗಳಲ್ಲಿ ನಿಂತುಕೊಳ್ಳುತ್ತಾರೆ. ಹಾಡುಗಳನ್ನು ಹಾಡಿ ಮತ್ತು ಕೆಲವು ಬಾರಿ ಹಾಡುಗಳಿಲ್ಲದೆಯೂ ಪ್ರದರ್ಶಿಸಲ್ಪಡುವ ಈ ನೃತ್ಯದಲ್ಲಿ ಪುರುಷರು ಹಾಡುಗಾರಿಕೆಯಲ್ಲಿ ತೊಡಗುವುದುಂಟು. ವಾದ್ಯದ ಹಿಮ್ಮೇಳದಲ್ಲಿ ಢೋಲು, ತಾಳ, ಮದ್ದಳೆಗಳೊಂದಿಗೆ ಎರಡು ಮೂರು ಗುಮಟೆಗಳನ್ನು ನುಡಿಸುತ್ತಾರೆ. ಇದು ವಿಧಿನೃತ್ಯವಾಗಿರದೆ ಮನೋರಂಜನೆಗಾಗಿ ಮಾಡುವ ನೃತ್ಯವಾಗಿದೆ.

ತಾಲ್ಗಡಿ ನೃತ್ಯ : ಇದು ಹೋಳಿಯ ಸಮಯ ಆಡುವ ಒಂದು ನೃತ್ಯಪ್ರಕಾರ. ಆಡುವ ರೀತಿ ಕೋಲಾಟದ ಶೈಲಿಯಲ್ಲಿದ್ದು ಪ್ರಾದೇಶಿಕ, ಸಾಮುದಾಯಿಕ ವೈವಿಧ್ಯಗಳಿವೆ. ಕಲಾಕಾರರು ಸಮಸಂಖ್ಯೆಯ ಜೋಡಿಗಳಾಗಿರುತ್ತಾರೆ. 'ಮಾಂಡ್' ನಲ್ಲಿ, ದೇವಸ್ಥಾನಗಳ ಎದುರು, ಮನೆಯಂಗಳಗಳಲ್ಲಿ 'ತಾಲ್ಗಡಿ' ನೃತ್ಯ ಆಡುತ್ತಾರೆ. ಹಿಮ್ಮೇಳ ವಾದ್ಯಗಳಲ್ಲಿ ಢೋಲು, ತಾಶೆ, ಕಂಸಾಳೆ, ತಬಲಾ, ಸಮ್ಮೇಳಗಳೊಂದಿಗೆ 'ಗುಮಟೆ' ಗಳನ್ನು ನುಡಿಸುತ್ತಾರೆ.

ಮೊರುಲೆ ನೃತ್ಯ : ಗೋವಾದ ದಿಚೋಲ್ ತಾಲೂಕಿನ ಸರ್ವರ್ಣ ಎಂಬ ಊರಿನಲ್ಲಿ ಮಯೂರ ನೃತ್ಯದ ಪ್ರಕಾರವಾದ ಈ 'ಮೊರುಲೆ' ನೃತ್ಯವನ್ನು ಪರಂಪರೆಯ ಸಂಪ್ರದಾಯದಂತೆ ಹೋಳಿಯ ಸಂದರ್ಭದಲ್ಲಿ ಆಡುತ್ತಾರೆ. ಈ ನೃತ್ಯ ತಾಲ್ಗಡಿ ನೃತ್ಯವನ್ನೇ ಹೋಲುತ್ತದಾದರೂ ಇದರಲ್ಲಿ ಭಾವಾವೇಷ, ಕುಣಿತದ ಅಬ್ಬರಗಳು ಹೆಚ್ಚು. ಸಮ ಸಂಖ್ಯೆಯ ಕಲಾಕಾರರು ಧೋತಿಯ ಕಚ್ಚೆ, ಸೊಂಟ ಪಟ್ಟಿಗೆ ಶಾಲು, ಬನಿಯನ್, ಹಣೆಪಟ್ಟಿ, ಕೊರಳಲ್ಲಿ ಹೂ ಮಾಲೆಗಳನ್ನು ಧರಿಸುತ್ತಾರೆ. ಈ ನೃತ್ಯದ ಹಿಮ್ಮೇಳದಲ್ಲಿ ಈಗ ಆಧುನಿಕ ವಾದ್ಯಗಳನ್ನು ಬಳಸುತ್ತಾರಾದರೂ ಪೂರ್ವದಲ್ಲಿ 'ಗುಮಟೆ'ಗಳನ್ನೇ ಉಪಯೋಗಿಸುತ್ತಿದ್ದರು.

ಸೊಮಯ್ ನೃತ್ಯ : ಗೋವಾದ ಕಾನಾಕೋನಾ, ವ ಸಾಂಗೆಂ ತಾಲೂಕುಗಳಲ್ಲಿ ಹೋಳಿ ಉತ್ಸವ ಸಂದರ್ಭಗಳಲ್ಲಿ ಆಡುವ 'ಸೊಮಯ್' ಎಂಬ ದೈಹಿಕ ಕಸರತ್ತಿಗೆ ಪ್ರಾಮುಖ್ಯತೆ ಇರುವ ನೃತ್ಯ ಪರಂಪರೆಯಿದೆ. ಈ ನೃತ್ಯದ ಕಲಾವಿದರು ಧೋತಿಯ ಕಚ್ಚೆ, ಅಂಗಿ, ಸೊಂಟಕ್ಕೆ

ಶಾಲು, ಕೊರಳಲ್ಲಿ ಹೂಮಾಲೆ, ಹಣೆಪಟ್ಟಿಗಳನ್ನು ಧರಿಸುತ್ತಾರೆ. ತಲೆಯ ಮೇಲೆ ಕಾಲುದೀಪ ಉರಿಸಿಟ್ಟು ವಿವಿಧ ರೀತಿಯ ಆಂಗಿಕ ಚಲನೆಗಳನ್ನು ಪ್ರದರ್ಶಿಸುವುದು ಈ ನೃತ್ಯದ ವಿಶೇಷ. 'ಸೊಮಯ್ ನಾಚ್' ಅಂದರೆ ದೀಪ ನೃತ್ಯವಾದುದರಿಂದ ರಾತ್ರಿವೇಳೆ ಈ ಪ್ರದರ್ಶನವಿರುತ್ತದೆ. ಈ ನೃತ್ಯವೂ ಸಮ್ಮೇಳ, ಝಂಜ್ ತಾಳ ಮತ್ತು 'ಗುಮಟೆ' ಗಳ ಹಿಮ್ಮೇಳದೊಂದಿಗೆ ನಡೆಯುತ್ತದೆ.

ಧಾಲೊ ಫುಗ್ಡಿ: ಗೋವಾದಲ್ಲಿ ಸಾರಸ್ವತ ಸಮಾಜವನ್ನು ಹೊರತುಪಡಿಸಿ, ಎಲ್ಲ ಜನಾಂಗಗಳ ಸ್ತ್ರೀಯರು ಪಾತ್ರ ವಹಿಸುವ ನೃತ್ಯ ಪ್ರಕಾರವೆಂದರೆ 'ಫುಗ್ಡಿ'. ಈ ನೃತ್ಯದಲ್ಲಿ ಧನಗರ್ ಫುಗ್ಡಿ, ಕಳ್‌ಶಿ ಫುಗ್ಡಿ, ನಾಗ್ಡಿ ಫುಗ್ಡಿ, ಸಾದೀ ಫುಗ್ಡಿ, ಭೊಂವರೀ ಫುಗ್ಡಿ, ಬಸ್‌ಕಿ ಫುಗ್ಡಿ, ದೊಟ್ಟಿ ಫುಗ್ಡಿ, ಜೋಡೀ ಫುಗ್ಡಿ, ಉಬೀ ಫುಗ್ಡಿ, ದಾಂಡೊ ಫುಗ್ಡಿ, ಬೆಬ್ಕಿ ಫುಗ್ಡಿ, ಧಾಲೊ ಫುಗ್ಡಿ - ಹೀಗೆ ಅನೇಕ ತರಗಳಿವೆ. ಕೆಪೆಂ ತಾಲೂಕಿನ 'ಕ್ರಿಶ್ಚಿಯನ್ ಗಾವ್ಡೆ' ಸಮುದಾಯದವರು 'ಧಾಲೊ ಫುಗ್ಡಿ' ಆಡುತ್ತಾರೆ. ಹಾಡುಗಳನ್ನು ನೃತ್ಯಗಾತಿ ಸ್ತ್ರೀಯರೇ ಹಾಡುತ್ತಾರೆ. ಹಿಮ್ಮೇಳ ವಾದ್ಯವಾಗಿ 'ಗುಮಟೆ' ಗಳೇ ನೃತ್ಯದಲ್ಲಿ ಹೆಚ್ಚು ಬಳಸಲ್ಪಡುತ್ತವೆ.

ದಾಂಡ್ಲಾಂ ಖೆಳ್ : ಮಡ್ಗಾಂವ್ ಹತ್ತಿರದ 'ಆರ್ಲೆಂ' ವಠಾರದಲ್ಲಿ 'ಕ್ರಿಶ್ಚಿಯನ್ ಗಾವ್ಡೆ' ಸಮುದಾಯದವರು 'ದಾಂಡ್ಲಾಂ ಖೆಳ್' ಪ್ರಕಾರವನ್ನು ಆಡುತ್ತಾರೆ. ಸಮಸಂಖ್ಯೆಯ ಪುರುಷರು ಕಲಾಕಾರರಾಗಿ ಇರುತ್ತಾರೆ. ಆದರೂ ಎರಡನೇ ಜೊತೆಗಾರ ಪುರುಷ, ಸಂಪೂರ್ಣ ಸ್ತ್ರೀವೇಷದಲ್ಲಿರುತ್ತಾನೆ. ಪುರುಷ ವೇಷಧಾರಿ ಸೊಂಟಕ್ಕೆ ಶಾಲು ಸುತ್ತಿ, ಅದರ ಮೇಲೆ ಕೆಂಪು ಪಟ್ಟಿ ಉಟ್ಟು, ತಲೆಗೆ ರುಮಾಲು ಧರಿಸಿರುತ್ತಾನೆ. ಮೊದಲು 'ಮಾಂಡ್' ನಲ್ಲಿ, ಆಮೇಲೆ ಮನೆ ಮನೆಯ ಅಂಗಳಗಳಲ್ಲಿ ಆಡುತ್ತಾರೆ. ನೃತ್ಯಗಾರನ ಬಲಗೈಯಲ್ಲಿ ಎರಡೂವರೆ ಇಂಚು ವ್ಯಾಸ ಮತ್ತು ಸುಮಾರು ನಾಲ್ಕು ಅಡಿ ಉದ್ದದ ಉರುಟಾದ ದಂಡವಿದ್ದು ಹಾಡು ಮತ್ತು ತಾಳಕ್ಕೆ ಸರಿಯಾಗಿ ವಿವಿಧ ಶೈಲಿಗಳಲ್ಲಿ ಆಡುತ್ತಾರೆ. ಹಿಮ್ಮೇಳ ವಾದ್ಯಗಳಲ್ಲಿ ಝಂಜ್ ತಾಳ, ಮದ್ದಳೆ ಮತ್ತು 'ಗುಮಟೆ' ಗಳನ್ನು ಬಳಸುತ್ತಾರೆ.

ಮುಸಳಾಂ ಖೆಳ್ : 'ಮುಸಳಾಂ ಖೆಳ್' (ಮುಸಲ ನೃತ್ಯ) ಪೂರ್ವದಲ್ಲಿ ಹಿಂದೂ ವಿಧಿ ಪ್ರಕಾರ ಪ್ರದರ್ಶಿಸಲ್ಪಡುತ್ತಿತ್ತು. ಈಗ ಚಾಂದೋರ್ ಪರಿಸರದ ಕ್ರಿಶ್ಚಿಯನ್ನರು ಕಾರ್ನಿವಾಲ್‌ನ ಎರಡನೇ ದಿವಸ ಆಡುವ ಸಂಪ್ರದಾಯವನ್ನು ಪಾಲಿಸುತ್ತಿದ್ದಾರೆ. ಗೋವಾದಲ್ಲಿ ಕದಂಬ ರಾಜರ ಆಳ್ವಿಕೆ (980-1005) ಕಾಲದಲ್ಲಿ ಈ ನೃತ್ಯ ಪ್ರಚಲಿತವಿತ್ತು ಅಂತ ಚರಿತ್ರಕಾರರ ಅಭಿಪ್ರಾಯ. 1310 ರಲ್ಲಿ ವಿಜಯನಗರದ ಹರಿಹರ ರಾಜಕುಮಾರನು ಚೋಳ ರಾಜನನ್ನು ಗೆದ್ದ ಸಂಭ್ರಮಾಚರಣೆಗೆ ಚಂದ್ರಾಪುರ ಕೋಟೆ ಬಾಗಿಲಿನಲ್ಲಿ ಈ ನೃತ್ಯದ ಪ್ರಥಮ ಪ್ರಯೋಗವಾಯಿತು ಅಂತ ಇನ್ನೊಂದು ನಂಬಿಕೆಯೂ ಇದೆ.

ನೃತ್ಯಕಾರರು ಯಾದವ ಶೈಲಿಯ ಪೋಷಾಕು ಧರಿಸುತ್ತಾರೆ. ವಿಶೇಷವೆಂದರೆ ಹಿಂದೂ

ಧಾರ್ಮಿಕ ಲಕ್ಷಣಗಳಿರುವ ಈ ನೃತ್ಯವನ್ನು 'ಕ್ರಿಶ್ಚಿಯನ್ ಚಾರ್ಡೆ (ಕ್ಷತ್ರಿಯ) ಸಮುದಾಯದವರು ಕಾರ್ನಿವಾಲ್ ಉತ್ಸವದ ಸಂದರ್ಭ ಆಡುತ್ತಾರೆ. ಚಾಂದೋರ್‌ನ ಪುರುಷ ಚಾರ್ಡಿ ಕ್ರಿಶ್ಚಿಯನ್ನರು ಧೋತಿ ಉಟ್ಟು, ತಲೆಗೆ ಪಗ್ಡಿ ಸುತ್ತಿ, ವರ್ತುಲಾಕಾರದಲ್ಲಿ ನಿಂತುಕೊಂಡು ಆಡುತ್ತಾರೆ. ಈ ಕಲಾಪ್ರಕಾರದಲ್ಲಿ ಒನಕೆಗಳನ್ನು ಹಿಡಿದುಕೊಂಡು ವಾದ್ಯಗಳ ತಾಳಕ್ಕೆ ಸರಿಯಾಗಿ ಭೂಮಿಯನ್ನು ಕುಟ್ಟುತ್ತಾ ಕುಣಿಯುವುದರಿಂದ ಇದು 'ಮುಸಳಾಂಫೆಳ್ (ಮುಸಲ ನೃತ್ಯ) ಅಂತ ಪ್ರಸಿದ್ಧ. ಹಿಮ್ಮೇಳದಲ್ಲಿ ಢೋಲು, ಕಂಸಾಳೆ, ಝಂಜ್ ತಾಳ ಮತ್ತು 'ಗುಮಟೆ'ಗಳನ್ನು ನುಡಿಸುತ್ತಾರೆ.

ರಣಮಾಲೆ : ಗೋವಾದ ಸತ್ತರಿಂ, ಸಾಂಗೆಂ ಮತ್ತು ಗೋವಾ ಕರ್ನಾಟಕ ಗಡಿ ಪ್ರದೇಶಗಳಲ್ಲಿ, ಹೋಳಿ ಉತ್ಸವ ಸಂದರ್ಭದಲ್ಲಿ ಪ್ರದರ್ಶಿಸಲ್ಪಡುವ 'ರಣಮಾಲೆ' ಎಂಬ, ಪುರುಷರು ಮಾತ್ರ ಪಾತ್ರವಹಿಸುವ ಸ್ವತಂತ್ರ ಜಾನಪದ ಪ್ರಕಾರ ಪ್ರಚಲಿತವಿದೆ. ಇದು ಎರಡು ವಿಧಾನಗಳಲ್ಲಿ ಪ್ರದರ್ಶಿಸಲ್ಪಡುತ್ತದೆ. ಪ್ರಥಮವಾಗಿ, ಕುಣಿತ ಮತ್ತು 'ಜತ್' ಎಂಬ ಹಾಡುಗಳಿಂದ ಕೂಡಿದ ಪ್ರದರ್ಶನದಲ್ಲಿ ಮೊದಲು ರಾಮಾಯಣದ ಕಥಾ ಸಾದರೀಕರಣವಾಗುತ್ತಿರುವಾಗ ಮಧ್ಯೆ ಮಧ್ಯೆ ಕಥೆಗೆ ಸಂಬಂಧಪಟ್ಟ ಪಾತ್ರಗಳು ವೇದಿಕೆಗೆ ಬಂದು ಪ್ರಸಂಗಗಳಿಗೆ ಅನುಗುಣವಾಗಿ ಮೂಕಾಭಿನಯದಲ್ಲಿ ತೊಡಗುತ್ತವೆ. ಈ ಪಾತ್ರಗಳಿಗೆ 'ಸವಂಗಾಂ' ಅಂತ ಹೆಸರು.

ದ್ವಿತೀಯವಾಗಿ, ರಾಮಾಯಣದ ವಿವಿಧ ಖಂಡಗಳ ಕಥೆ ಸಾಗುತ್ತಿರುವಾಗ ನಡುವೆ 'ಧೊಂಗಾ' ಎಂಬ ಸಾಮಾಜಿಕ ವೇಷಗಳು ಪ್ರವೇಶಿಸಿ, ಹಾಸ್ಯ ಭರಿತ ವಿವಿಧ ಆಂಗಿಕ ಅಭಿನಯಗಳನ್ನು ಪ್ರದರ್ಶಿಸುತ್ತಾರೆ. ಈ ಪಾತ್ರಗಳು ಮೌನವಾಗಿರದೆ, ರಾಮಾಯಣದ ಕಥೆಯ ಸಾದರೀಕರಣದ ಗಂಭೀರ ವಾತಾವರಣವನ್ನು, ತಮ್ಮ ಹಾಡು, ಹಾಸ್ಯಭರಿತ ಮಾತು ಹಾಗೂ ಅಭಿನಯಗಳಿಂದ ತಿಳಿಗೊಳಿಸಿ, ಪ್ರೇಕ್ಷಕರನ್ನು ನಗಿಸಿ, ಮನೋರಂಜನೆ ನೀಡುತ್ತಾರೆ. ಈ ಕಲಾಪ್ರದರ್ಶನದ ಹಿಮ್ಮೇಳ ವಾದ್ಯಗಳಲ್ಲಿ ಶಹನಾಯ್, ಸಮ್ಮೇಳ, ಢೋಲು, ತಾಸೆ, ಕಂಸಾಳೆಗಳೊಂದಿಗೆ 'ಗುಮಟೆ' ಕೂಡಾ ಪ್ರಮುಖ ವಾದ್ಯವಾಗಿ ಬಳಸಲ್ಪಡುತ್ತದೆ.

ಪಾಲ್ಕಿ : ದಕ್ಷಿಣ ಗೋವಾದಲ್ಲಿ ಹುಣ್ಣಿಮೆಯ ಐದು ದಿವಸ ಮೊದಲು, ಅಂದ್ರೆ, ಫಾಲ್ಗುಣ ನವಮಿಯಿಂದ ಪ್ರಾರಂಭವಾಗಿ, ಫಾಲ್ಗುಣ ಹುಣ್ಣಿಮೆಯಂದು ಕೊನೆಗೊಳ್ಳುವ 'ಧಾಕ್ಟೊ ಶಿಗ್ಮೊ' ಮತ್ತು ಉತ್ತರ ಗೋವಾದಲ್ಲಿ ಫಾಲ್ಗುಣ ಹುಣ್ಣಿಮೆಯಿಂದ 'ಗುಡಿ ಪಾಡ್ವಾ' ವರೆಗೆ 'ವ್ಹಡ್ಲೊ ಶಿಗ್ಮೊ' ಹೋಳಿ ಉತ್ಸವ ದೇವಸ್ಥಾನಗಳಲ್ಲಿ ಜರಗುತ್ತದೆ. ನಿಶ್ಚಯಿಸಿದ ದಿವಸ ದೇವರ ಪಾಲ್ಕಿ ಹೊರಡುತ್ತದೆ. ಪಾಲಖಿಯೆದುರು ಪ್ರತಿದಿನ ನೃತ್ಯನಾಟಕಗಳು ಹಾಗೂ ಚಂದ್ರಾವಳ್, ಫಾಗ್, ಖಾಣಪದ್ ಎಂಬ ಗಾನ ವಾದ್ಯಗಳಿಂದ ಕೂಡಿದ ಸುವಾರಿ ಗಾನವಾದ್ಯ ಮೇಳ ಜರಗಿಸಲ್ಪಡುತ್ತದೆ. ಈ ವಾದ್ಯ ಮೇಳದಲ್ಲಿ ಸಮ್ಮೇಳ, ಧೋಲು, ಝಂಜ್ ತಾಳ,

ಕಂಸಾಳೆಗಳೊಂದಿಗೆ ಪ್ರಮುಖ ವಾದ್ಯವಾಗಿ 'ಗುಮಟೆ' ಯನ್ನು ಬಳಸುತ್ತಾರೆ.

ಸುವಾರಿ : ಸುವಾರಿ ಅಂದ್ರೆ ಒಂದು ರೀತಿಯ ವಾದ್ಯಮೇಳ (ಜುಗಲ್‌ಬಂದಿ) ಅನ್ನಬಹುದು. ಇದರಲ್ಲಿ ಸಾಹಿತ್ಯವಿರುವುದಿಲ್ಲ. ಬದಲಿಗೆ ವಾದ್ಯ ಪರಿಕರಗಳು ಮಾತ್ರ ಉಪಯೋಗವಾಗುತ್ತವೆ. ಈ ಪ್ರಕಾರವನ್ನು ಹೆಚ್ಚಾಗಿ ಮೆರವಣಿಗೆಗಳಲ್ಲಿ ಕಾಣಬಹುದು. ವೇದಿಕೆಗಳಲ್ಲಿ ಮೇಳ ಜರಗುವ ಸಂದರ್ಭಗಳಿವೆ. ಗೋವಾ, ಕಾರವಾರಗಳಲ್ಲಿ ಕೊಂಕಣಿ ಭಾಷಿಕರ ಪೂಜಾ ಪುರಸ್ಕಾರಗಳ ಸಂದರ್ಭ, ಗಣೇಶೋತ್ಸವಗಳಲ್ಲಿ ಕಾಣಸಿಗುತ್ತದೆ. ಸಮ್ಮೇಳ, ಶಹನಾಯ್, ತಾಳ, ಮುಂತಾದ ವಾದ್ಯಗಳೊಂದಿಗೆ 3-4 ಜನ ಗುಮ್ಮಟೆ ನುಡಿಸುವ ಈ ಪ್ರಕಾರಕ್ಕೆ 'ಗುಮಟಾ ಸುವಾರಿ' ಅಂತಲೂ ಹೆಸರಿದೆ.

ಗುಮ್ಟ್ಯಾಂ ಆರತಿ ಸರ್ತ್ (ಸ್ಪರ್ಧೆ) : ಚೌತಿ ಹತ್ತಿರ ಹತ್ತಿರ ಬರುವಾಗ ಗೋವಾದಲ್ಲಿ ತುಂಬಾ ಪ್ರದೇಶಗಳಲ್ಲಿ ಗುಮಟೆ ಆರತಿ ಅಭ್ಯಾಸದ ಶಬ್ದ ಕೇಳಲು ಶುರುವಾಗುತ್ತದೆ. ಜುಲಾಯ್ ತಿಂಗಳ ರಾತ್ರಿಗಳಲ್ಲಿ ಗುಮಟೆ ಆರತಿ ಕಲಿಯುವ ಯುವ ಜನಾಂಗ ಗುಮಟೆ ಪರಿಣತರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಾರೆ. ಈ ತರಬೇತಿ ಪಡೆಯುವಲ್ಲಿ ಮಹಿಳೆಯರು ಮತ್ತು ಹೆಣ್ಮಕ್ಕಳೂ ಮುತುವರ್ಜಿ ವಹಿಸುತ್ತಿರುವುದು ಒಳ್ಳೆಯ ಲಕ್ಷಣ.

ಗುಮಟೆ ಗೋವಾದ ಜನತೆಯ ಒಗ್ಗಟ್ಟಿನ ಪ್ರತೀಕ ಎಂತೋ, ಅಂತೆಯೇ ಗೋವಾದ ಲೋಕ ಕಲೆಯ ಅವಿಭಾಜ್ಯ ವಾದನಸಾಧನ ಕೂಡಾ. ಒಂದು ಕಾಲದಲ್ಲಿ ಗುಮಟೆ, ಸಮ್ಮೇಳ, ಕಂಸಾಳೆ, ಝುಂಜ್ ತಾಳ - ಈ ವಾದ್ಯಸಾಧನಗಳು ಇತಿಹಾಸದಲ್ಲಿ ಅಳಿದು ಹೋಗುವಂತಹ ಪರಿಸ್ಥಿತಿ ಇತ್ತು. ಗೋವಾ ಸರಕಾರವು ರಾಜ್ಯಮಟ್ಟದಲ್ಲಿ ಗುಮಟೆ ಆರತಿ ಸ್ಪರ್ಧೆಗಳನ್ನು ದೊಡ್ಡ ಮಟ್ಟದಲ್ಲಿ ಪ್ರಾರಂಭಿಸಿದ್ದರಿಂದಾಗಿ ಗುಮಟೆ ಕಲೆಗೆ ಒಳ್ಳೆಯ ದಿನಗಳು ಬಂದವು ಅನ್ನಬಹುದು. ಈಗಿನ ಪೀಳಿಗೆಯವರು ಸ್ವಾಭಾವಿಕವಾಗಿ ಪಾಶ್ಚಾತ್ಯ ಸಂಗೀತಕ್ಕೆ ಆಕರ್ಷಿತರಾಗುತ್ತಾರೆ. ಆದರೆ ಗುಮಟೆ ಆರತಿ ಸ್ಪರ್ಧೆಗಳು ಪ್ರಾರಂಭವಾದಂದಿನಿಂದ ಆ ಆಕರ್ಷಣೆ ಗುಮಟೆ ಕಡೆಗೆ ತಿರುಗಿದೆ ಎಂದು ಗುಮಟೆ ತಜ್ಞರ ಹೇಳಿಕೆ. ಗೋವಾದ ಈ ಕಲೆ ಪ್ರತೀ ಮನೆಮನೆಗಳಲ್ಲಿ ವಾಡೆ ವಾಡೆಗಳಲ್ಲಿ, ಊರು ಕೇರಿಗಳಲ್ಲಿ ಅರಳಿ, ಸಮಾಜದಲ್ಲಿ ಈ ಲೋಕಕಲೆಯ ಪ್ರಸಾರವಾಗಿ, ಹೊಸ ಪದ್ಧತಿಯಿಂದ, ಪರಂಪರಾಗತ ಕಲೆಯ ಮೂಲ ಗೌರವ, ಸ್ಥಾನಮಾನಗಳಿಗೆ ಕುಂದು ಉಂಟಾಗದ ಶಾಸ್ತ್ರ ಶುದ್ಧ ರೀತಿಯಲ್ಲಿ ಅಭ್ಯಾಸಕ್ಕೆ ತೊಡಗುವ ಅವಶ್ಯಕತೆಯಿದೆ.

ಪ್ರಸ್ತುತ ಗೋವಾದಲ್ಲಿ ಸ್ಪರ್ಧೆಗಳಿಗಾಗಿ ಗುಮಟೆ ಕಲಿಯುವ ಉತ್ಸಾಹ ಯುವ ಪೀಳಿಗೆಯವರಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಗುಮಟೆ ಆರತಿ ಸ್ಪರ್ಧೆಯ ಹೊಸ ಹೊಸ ತಂಡಗಳೂ ಅಣಬೆ ಮೊಳೆಯುವ ರೀತಿ ಹುಟ್ಟಿಕೊಂಡಿವೆ. ಈ ಸ್ಪರ್ಧಾ ತಂಡಗಳ ನಡುವೆ ವೈಮನಸ್ಯಗಳೂ ಸೃಷ್ಟಿಯಾಗಿರುವುದರಿಂದ ಒಳ್ಳೆಯ ಪ್ರತಿಭಾವಂತ ಕಲಾವಿದರಿಗೆ ಅನ್ಯಾಯವಾಗುತ್ತಿರುವುದೂ ಕಂಡುಬರುತ್ತಿದೆ. ಕೆಲವು ತಂಡದವರು ತೀರ್ಪುಗಾರರೊಂದಿಗೆ

ವಶೀಲಿ ಮಾಡಿ ಫಿಕ್ಸಿಂಗ್ ಮಾಡುವುದು, ಸ್ಪರ್ಧಾ ಆಯೋಜಕರೊಂದಿಗೆ ತಕರಾರು ಮಾಡುವುದೂ ನಿತ್ಯ ಪರಿಪಾಠವಾಗಿದೆ. ಬಹುಮಾನದ ಮೊತ್ತದಲ್ಲಿ 50 ಶೇಕಡಾ ತಂಡಕ್ಕೆ ಮತ್ತು 50 ಶೇಕಡಾ ತೀರ್ಪುಗಾರರಿಗೆ ಪಾಲಾಗುವಾಗ ಪರಿಣತ ಹಾಗೂ ಒಳ್ಳೆಯ ಪ್ರದರ್ಶನ ನೀಡುವ ಕಲಾಕಾರರಿಗೆ ಅನ್ಯಾಯವಾಗುತ್ತಿದೆ ಎಂಬುದಾಗಿ ತಜ್ಞರ ಕಳವಳ. ಬಹುಮಾನಗಳಿಗಾಗಿ ಜಗಳಾಡದೆ, ತೀರ್ಪುಗಾರರೂ ಫಿಕ್ಸಿಂಗ್ ಅವ್ಯವಹಾರಗಳಲ್ಲಿ ತೊಡಗದೇ ಶಿಸ್ತು ಬದ್ಧ ಸ್ಪರ್ಧೆಗಳು ಜರಗಿದಲ್ಲಿ ಗುಮಟೆ ಕಲೆಯ ಪರಂಪರೆಯ ಸಂಸ್ಕೃತಿ ಉಳಿಸಿಕೊಳ್ಳುವಲ್ಲಿ ಒಳ್ಳೆಯ ಭವಿಷ್ಯವಿದೆ ಎಂಬುದು ತಜ್ಞರ ಅಭಿಪ್ರಾಯ.

ಪ್ರಕೃತ ಗೋವಾದ ಹಿಂದೂ ಕುಡುಬಿ, ಕ್ರಿಶ್ಚಿಯನ್‌ಮತ್ತು ಇತರ ಸಮುದಾಯದವರು ಶಿಗ್ಮೋತ್ಸವಗಳಲ್ಲಿ, ಚೌತಿ, ಕಾರ್ನಿವಾಲ್, ದೇವಸ್ಥಾನಗಳ ಮತ್ತು ಸಾಮಾಜಿಕ ಉತ್ಸವಾದಿ ಸಂದರ್ಭಗಳಲ್ಲಿ ತಾಳವಾದ್ಯವಾಗಿ ಗುಮಟೆಯನ್ನು ಉಪಯೋಗಿಸುತ್ತಾರೆ. ಆದರೆ ಈ ಸಂದರ್ಭಗಳಲ್ಲಿ ಇತರ ಆಧುನಿಕ ಸುಧಾರಿತ ಸಾಧನಗಳೊಂದಿಗೆ ಗುಮಟೆಯನ್ನು ಒಂದು ಪೂರಕ ವಾದ್ಯವಾಗಿ ಸಾಂಕೇತಿಕ ರೂಪದಲ್ಲಿ ಮಾತ್ರ ಉಪಯೋಗಿಸುತ್ತಿರುವುದು ಬಹಳ ಬೇಸರದ ಸಂಗತಿ. ಗೋವಾದಲ್ಲಿ ಪಾಶ್ಚಾತ್ಯ ಸಂಗೀತೋಪಕರಣಗಳ ಪ್ರಭಾವ ಜಾಸ್ತಿಯಾಗುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಇದೇ ವೇಳೆ ಗೋವಾ ಮೂಲದಿಂದಲೇ ವಲಸೆ ಬಂದು ಕರ್ನಾಟಕದಲ್ಲಿ ನೆಲೆನಿಂತಿರುವ ಕುಡುಬಿ ಜನಾಂಗದವರು ಹೋಳಿಯ ಶಿಗ್ಮೋತ್ಸವಕ್ಕೆ ಗುಮಟೆಗಳ ಜಾತ್ರೆಯನ್ನೇ ಜರಗಿಸುತ್ತಿರುವುದು ಅಭಿಮಾನದ ಹಾಗೂ ಹೆಮ್ಮೆಯ ವಿಷಯವಾಗಿದೆ.

ಉಪಸಂಹಾರ :

ಇತ್ತೀಚೆಗೆ ನಾವು ಗಮನಿಸುತ್ತಿರುವಂತೆ, ದೊಡ್ಡ ದೊಡ್ಡ ತಲೆಬರಹದ ಕೊಂಕಣಿ ಉತ್ಸವಗಳಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದು ಗುಮಟೆಯನ್ನು ಪ್ರದರ್ಶಿಸಿ ಪ್ರೇಕ್ಷಕರ ಸಮ್ಮುಖ ಆ ಗುಮಟೆಯನ್ನು ನುಡಿಸಿ, ಕಾರ್ಯಕ್ರಮ ಉದ್ಘಾಟಕರ ಕೊರಳಿಗೆ ತೊಡಿಸಿ, ಬ್ಯಾನರ್ ಬರೆದು, ಗುಮಟೆಯ ಸುಂದರವಾದ ಫೋಟೊ ಚಿತ್ರಿಸಿದ ಬ್ರೋಶರ್‌ಗಳನ್ನು ಮುದ್ರಿಸಿ, ಪುಸ್ತಕಗಳ ಮುಖಪುಟದಲ್ಲಿ ಕಂಪ್ಯೂಟರೀಕೃತ (Collage) ಆಕರ್ಷಕ ಚಿತ್ರ ಹಾಕಿ - ' ಇದು ಗುಮಟೆ, ನಮ್ಮ ಪೂರ್ವಿಕರ ಬಳುವಳಿ, ಕೊಂಕಣಿ ಸಂಸ್ಕೃತಿಯ ಸಂಕೇತ, ಕೊಂಕಣಿ ಕಾರುಭಾರಿಗಳ ಆಸ್ತಿ ಇದನ್ನು ನಾವು ಉಳಿಸಬೇಕು' ಅಂತ ಬಾಯಿಯಲ್ಲಿ ಗುಮಟೆ ಬಾರಿಸಿದರೆ, ಗುಮಟೆಯನ್ನು ನಾವು ಫೋಟೋಗಳಲ್ಲಿ ಮಾತ್ರ ಉಳಿಸಲು ಶಕ್ತರಾದೇವು.

ಗುಮಟೆ ಕಲೆಯನ್ನು ಇತರ ಸಮಾಜದ ಜನರು, ಸಂಘ ಸಂಸ್ಥೆಗಳವರು ನಕಲು ತೆಗೆದು ಪ್ರದರ್ಶನಗಳನ್ನು ನೀಡಲು ಪ್ರಾರಂಭಿಸುವ ಮೊದಲು, ಆ ಮೂಲಕ ಗುಮಟೆಯನ್ನು ತಮ್ಮದಾಗಿಸಿಕೊಳ್ಳುವ ಮೊದಲು, ಪರಂಪರಾಗತವಾಗಿ ಗುಮಟೆಯನ್ನು ಉಪಯೋಗಿಸಿದ

ಸಮುದಾಯದವರು ಜಾಗೃತರಾಗಬೇಕು. ಹಾಗೆ ಇತರರು ನೀಡುವ ಪ್ರದರ್ಶನಗಳು ಛದ್ಮವೇಷ (Fancy Dress) ಆದೀತೇ ಹೊರತು ಅಭಿಜಾತ, ಅಸಲಿ ಕಲೆಯಾಗಲಿಕ್ಕಿಲ್ಲ.

ಒಂದು ಸಂಗೀತ ಸಾಧನವಾಗಿ ಗುಮಟೆಯ ಉಪಯೋಗ ಮತ್ತು ಮಹತ್ವಗಳ ವಿವರಗಳನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ.ಚರ್ಮವಾದ್ಯಗಳ ಪೈಕಿ ಗುಮಟೆಗೆ ಅದರದ್ದೇ ಆದ ಗೌರವದ ವಿಶಿಷ್ಟ ಸ್ಥಾನವಿದೆ. ನಮ್ಮ ಪರಿಸರದಲ್ಲಿ ಯಾವ ಸಮುದಾಯದ ಜನರು ತಮ್ಮ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳ ಸಂದರ್ಭಗಳಲ್ಲಿ ಗುಮಟೆಯನ್ನು ಖಡ್ಡಾಯವಾಗಿ ಉಪಯೋಗಿಸಿದ್ದಾರೊ - ಆ ಜನಾಂಗದವರು ಈ ಕಲೆಯನ್ನು ಉಳಿಸಿ ಬೆಳೆಸಿದ್ದಾರೆ ಮತ್ತು ಮುಂದಕ್ಕೂ ಉಳಿಸುತ್ತಾರೆ.

ಪ್ರಾರಂಭದಲ್ಲಿ ವಿದೇಶೀ ಮತಾಂಧರು ಗುಮಟೆ ಕಲೆಯನ್ನು ಕಾಟು ಜನರ ಕಲೆ, ಪೈಶಾಚಿಕ ವಿದ್ಯೆ ಅಂತ ನಿರ್ಬಂಧಿಸಿದರು, ಗುಮಟೆಯನ್ನು ಕಿತ್ತೊಗೆದರು. ಗುಮಟೆಕಾರರ ಹೃದಯ ಕುದಿಸಿದರು. ಗುಮಟೆಕಾರರು ಅಳುವಂತೆ ಮಾಡಿದರು. ಕೊನೆಗೆ ಮೂಲ ನೆಲೆ ಗೋವಾದಿಂದಲೇ ಹೊರಗೋಡಿಸಿದರು. ಆ ನಂತರದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯಿಂದಾಗಿ ಗುಮಟೆ ಮೂಲೆ ಸೇರಿತು. ತಂತ್ರಜ್ಞಾನ ಪ್ರಗತಿಯಾಗುತ್ತಾ ಬರುವಾಗ ಜಾಗತೀಕರಣದ ಪ್ರಭಾವದಿಂದ ಗುಮಟೆಯನ್ನು ಬಳಸುವುದು ಯಾರಿಗೂ ಬೇಡವಾಯಿತು. ಸುಲಭಧಲ್ಲಿ ಕೈಗೆ ಸಿಗುವ, ಜಾಸ್ತಿ ಬಾಳಿಕೆ ಬರುವ ಸುಧಾರಿತ ಆಧುನಿಕ ಸಾಧನಗಳು ಲಭ್ಯವಾಗುವಾಗ, ಮಣ್ಣಿನಿಂದ ತಯಾರಿಸಲ್ಪಟ್ಟ ಅನಾಕರ್ಷಕ ಗುಮಟೆಯನ್ನು ಉಪಯೋಗಿಸುವುದು ತಮ್ಮ ಘನಸ್ತಿಕೆ ಗೌರವಗಳಿಗೆ ಕುಂದು ಎಂಬ ಕೀಳರಿಮೆ ಬಾಧಿಸಿದಾಗ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳ ಚೌಕಟ್ಟಿನ ಪರಿಧಿಯೊಳಗೆ ಗುಮಟೆಗಳಿಗೆ ಅವಕಾಶ ನೀಡದ ಸಮುದಾಯಗಳಲ್ಲಿ, ಧರ್ಮ ಮತ್ತು ಈ ಕಲೆಯ ನಡುವಿನ ಕೊಂಡಿ ಕಳಚಿದ ಕಾರಣ, ಆ ಸಮಾಜದಲ್ಲಿ ಗುಮಟೆ ಕಲೆ ಅಳಿಯಿತು. ಅಂತಹ ಸಮಾಜದಲ್ಲಿ ಇನ್ನು ಮುಂದಕ್ಕೂ ಅಳಿಯುತ್ತದೆ.

ಗುಮಟೆ ಕಲೆಯು ಮಾನವನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪುರಾತನ ಕಲೆ. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳಲ್ಲಿ ಮಾತ್ರವಲ್ಲ, ಇತರ ವೇಳೆಗಳಲ್ಲೂ ನಾವು ನಮ್ಮ ಮಕ್ಕಳಿಗೆ, ಎಳವೆಯಲ್ಲಿಯೇ ಇದರ ಔಚಿತ್ಯವನ್ನು ಮನವರಿಕೆ ಮಾಡಿಕೊಟ್ಟು ಹಾಡು, ವಾದನ ಮತ್ತು ತತ್ಸಂಬಂಧವಾದ ನೃತ್ಯಗಾರಿಕೆಯನ್ನು ಕಲಿಸಿಕೊಡಬೇಕು. ಕೇವಲ ಹಳ್ಳಿಯ ಅಶಿಕ್ಷಿತ ಜನಾಂಗ ಮಾತ್ರವಲ್ಲ, ವಿದ್ಯಾವಂತ ಯುವಕರಲ್ಲೂ, ಕೀಳರಿಮೆಯ ಭಾವನೆಯನ್ನು ಹೋಗಲಾಡಿಸಿ, ಕಲಾಭಿರುಚಿ ಕಲಾಭಿಮಾನ ಉಂಟಾಗುವಂತೆ ಪ್ರೋತ್ಸಾಹ ನೀಡಿ ಕಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದರೆ , ಮುಂದಿನ ಪೀಳಿಗೆಗೆ ಈ ಕಲೆಯನ್ನು ಉಳಿಸಿದಂತಾಗುತ್ತದೆ. ಉಳಿಸಬಹುದು.

❖❖❖

ಪರಾಮರ್ಶನ ಗ್ರಂಥ ಸೂಚಿ

1. ಕನ್ನಡ ನಿಘಂಟು - ಕನ್ನಡಸಾಹಿತ್ಯ ಪರಿಷತ್ ಬೆಂಗಳೂರು - III ಸಂಪುಟ
2. ತುಳು ನಿಘಂಟು - ಸಂಪುಟ III - ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ - 1995
3. ಕರ್ನಾಟಕ ಜನಪದ ಕಲೆಗಳ ಕೋಶ - ಕನ್ನಡ ವಿಶ್ವವಿದ್ಯಾನಿಲಯ ಹಂಪಿ - 1996
4. ಕರ್ನಾಟಕ ಬುಡಕಟ್ಟುಗಳು - ಸಂಪುಟ 1 : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ - 1998
5. ರಾಮಭಟ್ ಸಜಂಗದ್ದೆ - ಉದಯವಾಣಿ ಮೆಗಝೀನ್ 3-3-1996
6. ಡಾ। ಎನ್. ತಿರುಮಲೇಶ್ವರ ಭಟ್ - ಉದಯವಾಣಿ 21-12-2001 (ಬುರ್ರಕಥಾ)
7. ರಾಕ್ಣೊ - 60 - ಅಂಕೊ 1998
8. ಚಾ .ಫ್ರಾ. ದೆ 'ಕೊಸ್ತಾ - ಜಿವಿತ್ ಕೊಂಕಣಿ ಪತ್ರ - ಮೇ 1983 ಪುಟ 30-31
9. ಕೊಂಕ್ಣಿ ಲೋಕ್‌ವೆದ್-ಕೊಂಕಣಿ ಸಂಸ್ಥೆ, ಸೈಂಟ್ ಎಲೋಶಿಯಸ್ ಕಾಲೇಜ್, ಮಂಗಳೂರು - ಕೊಂಕಣಿ ಡಿಪ್ಲೋಮಾ ಕರೆಸ್ಪಾಂಡೆನ್ಸ್ ಕೋರ್ಸ್ ಎರಡನೇ ವರ್ಷದ ನೋಟ್ಸ್ - ಪುಸ್ತಕ 2 ಅಂಕೆ 2
10. ಸಿರಿಲ್ ಮಾಡ್ತಾ - 'ಕೊಂಕಣಿ ದಾಯ್ಜ್' ಲೇಖನ - ಅಮರ್ ಕೊಂಕ್ಣಿ 1974 - ರಾಕ್ಣೊ ಪ್ರಕಾಶನ, ಮಂಗಳೂರು
11. ವಿ.ಡಿ. ಸಿಲ್ವಾ ಕಾಂಜೂರ್ ಮಾರ್ಗ್ 'ಆಮ್ಚಿಂ ಅದ್ಲಿಂ ಕಾಜಾರಾಂ ' -2002
12. ಪ್ರೊ. ಬೆನೆಟ್ ಪಿಂಟೊ -Konkani Bards and Musicians of Kanara - 2003
13. ಫ್ರಾನ್ಸಿಸ್ ಜೆ. ಹರ್ನೊಡ್‌ಕರ - 'ಸಿದ್ದಿ ಲೋಕ್‌ಗೀತ್ ಸಂಗ್ರಹ್' _ ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು - 2007
14. ಸುರೇಶ್ ತಾಂಡೇಲ್ - 'ಖಾರ್ವಿ ಲೋಕ್ ಗೀತ್ ಸಂಗ್ರಹ್' - ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು - 2007
15. ಪೂವಪ್ಪ ಕಣಿಯೂರು - ಉದಯಾಣಿ 28-2-1988

16. 'ವೊಗ್ರೆಂ ಕಾರಣ್' - ಪಾವ್ಲು ವೊರಾಸ್ - ಪಡ್ವಳ್ ಪ್ರಕಾಶನ, ಮಂಗಳೂರು - 2008

17. ಪ್ರವೋದ್ ಮಹಾದೇಶ್ವರ್ ಗೋವಾ 'ಪ್ರಬಂಧ' ಗೊಂಯ್ಚಿ ಪಾರಂಪರಿಕ್ ಲೋಕ್‌ನಾಟ್ಯ್ ಕಲಾ -2008

18. ಸುನಾಪರಂತ್ ತಾ. 7-7-2010

19 ಪ್ರೊ. ಎ. ವಿ. ನಾವಡ - 'ಕೊಂಕಣದ ಕುಡುಬಿಯರು' ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು - 2008

❖❖❖

ಅನುಬಂಧ - 1



ಸೇಸು ಮೇಸ್ತ್ರಿ ಕೊಂಪದವು

ದಕ್ಷಿಣ ಕನ್ನಡದಲ್ಲಿ ಕಾರ್ಕಳದಿಂದ ಕೊಣಾಜೆವರೆಗೆ ಇರುವ ಸುಮಾರು 25 ಕುಡುಬಿ ಕೂಡುಕಟ್ಟುಗಳಲ್ಲಿ ಪ್ರಥಮ ಗೌರವದ ಕೂಡುಕಟ್ಟು ಕೊಂಪದವು ಗ್ರಾಮ. ಈ ಕೂಡುಕಟ್ಟಿಗೆ ಸಂಬಂಧಪಟ್ಟ ಸುಮಾರು 350-400 ಕುಟುಂಬಗಳಿದ್ದು ಗ್ರಾಮದಲ್ಲಿ ಹೆಚ್ಚಿನ ಜನಸಂಖ್ಯೆ ಕುಡುಬಿಯರದ್ದು. ಸಾಂಪ್ರದಾಯಿಕ ಗುಮಟೆ ಕೋಲಾಟ ನೃತ್ಯದೊಂದಿಗೆ ಕಂಗುಸುಟ್ಟು, ಹೋಳಿಯ ಕಾಮದಹನ ಜರಗುವುದು ಇಲ್ಲಿ ಮಾತ್ರ.

ಕೊಂಪದವಿನ 'ಮೊರ್ಲಡೆ' ಎಂಬಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ತೀರಾ ಹಿಂದುಳಿದ ಕುಡುಬಿ ಸಮುದಾಯದಲ್ಲಿ ಮುಂಢಗೌಡ ಭಾಗೀರಥಿ ಬಾಯಿ ದಂಪತಿಗಳಿಗೆ ಏಕಮಾತ್ರ ಪುತ್ರರಾಗಿ ಸೇಸು ಮೇಸ್ತ್ರಿಯವರು ಜನಿಸಿದರು. ಈಗ 91ರ ಇಳಿಪ್ರಾಯದಲ್ಲಿರುವ ಶ್ರೀಯುತರು ತಮ್ಮ 15ನೇ ಪ್ರಾಯದಲ್ಲಿಯೇ ಕುಡುಬಿಯರ ಧಾರ್ಮಿಕ ಪರಂಪರೆಯ ಆಚರಣೆಯ ಮಹತ್ವವುಳ್ಳ ಪ್ರದರ್ಶನಾತ್ಮಕ ಜಾನಪದ ಕಲೆ -ಗುಮಟೆ ಕೋಲಾಟಗಳ ಹಾಡುಗಾರಿಕೆ ಹಾಗೂ ತತ್ಸಂಬಂಧ ನೃತ್ಯಗಾರಿಕೆಯನ್ನು ತಮ್ಮದಾಗಿಸಿಕೊಂಡ ಮೇರು ಕಲಾವಿದ. ಕೌಮಾರ್ಯ ಮತ್ತು ಯೌವನಾವಸ್ಥೆಯಲ್ಲಿ ಬಡತನದ ಬೇಗೆಯಲ್ಲಿ ಬೆಂದರೂ ಕಲೆಗಾಗಿ ತಮ್ಮ ಜೀವಮಾನವನ್ನು ಅರ್ಪಿಸಿದವರು. ಪೂರ್ತಿ ಅನಕ್ಷರಸ್ಥರಾಗಿರುವ ಇವರು, ತಮ್ಮ ಹಿರಿಯರಾರೂ ಕಲಾವಿದರಲ್ಲದಿದ್ದರೂ ಕೇವಲ ಕಂಠಸ್ಥ ಸಂಪ್ರದಾಯದಿಂದ ಪೂರ್ವ ಪರಂಪರೆಯಂತೆ ಸಂಪ್ರದಾಯಬದ್ಧ ಶೈಲಿಯನ್ನು ಕರಗತ ಮಾಡಿಕೊಂಡು ಈ ಕಲೆಗೆ ಅನರ್ಘ್ಯ ಮೌಲ್ಯವನ್ನು ತಂದುಕೊಟ್ಟ ಸವ್ಯಸಾಚಿ ಕಲಾವಿದ.

ಜಾನಪದ ಕಲೆಯಾದರೂ ಒಂದು ಪೂರ್ಣ ಶಿಸ್ತಿನ ಚೌಕಟ್ಟಿಗೆ ಒಳಪಟ್ಟಿರುತ್ತದೆ. ಕಲಾಭ್ಯಾಸ ಮತ್ತು ಪೋಷಣೆ, ಕಲೆಯ ಗೌರವಕ್ಕೆ ಚ್ಯುತಿ ತರುವಂತಿರಬಾರದು. ಕಲಾ ಪ್ರಕಾರಗಳು ಎಲ್ಲರಿಗೆ ಅನಾಯಾಸವಾಗಿ ಒಲಿಯುವುದು ಅಪರೂಪ. ಕೆಲವರಿಗೆ ಅದು ಹಿರಿಯರ ಬಳುವಳಿಯಾದ್ರೆ, ಸೇಸು ಮೇಸ್ತ್ರಿಯವರಿಗೆ ಅದು ಸ್ವಯಾರ್ಜಿತ. ಇವರು ಗುಮಟೆ ಕಲೆಯನ್ನು ಕಲಿಯುವಾಗ ಪರಿಸರದಲ್ಲಿನ ಆ ಕಾಲದ ಪ್ರಸಿದ್ಧ ಕಲಾವಿದರಾದ ಕಾನ್ಸೆಕಾರ್ ಸೇಸಪ್ಪಗೌಡ, ಸೇಸಪ್ಪಗೌಡರ ಚಿಕ್ಕಪ್ಪ ರವಳುಗೌಡ, ವಿಠಲ ಮಾಸ್ತರರ ತಂದೆ ಅಮ್ಮುಗೌಡ, ಕುಪ್ಪು ಗುರಿಕಾರ, ಪುಟ್ಟಣ್ಣ ಗುರಿಕಾರ, ಬಾಬು ಗುರಿಕಾರ, ಪೆರಾರ್‌ಗಾರ್ ಕೊರಗಗೌಡ, ತಿಮ್ಮಪ್ಪ ಗೌಡ, ಸರಂಗಿಕಾರ್ ತಿಮ್ಮಗೌಡ -ಮುಂತಾದವರ ಪ್ರಭಾವ ತಮ್ಮ ಮೇಲೆ ಆಗಿರುವುದನ್ನು ಪ್ರಾಮಾಣಿಕವಾಗಿ ಸ್ಮರಿಸುತ್ತಾರೆ. ಅವರು ಕೃಷಿಕರಲ್ಲ. ಆದರೆ ಕುಡುಬಿ ಜಾನಪದ ಕಲಾಕ್ಷೇತ್ರದಲ್ಲಿ ಅವರು ಮಾಡಿದ ಕೃಷಿಗೆ ಬೆಲೆಕಟ್ಟಲು ಸಾಧ್ಯವಿಲ್ಲ. ಕೊಂಪದವಿನಲ್ಲಿ, ಒಂದು ಕಾಲದಲ್ಲಿ ನಿಂತೇ ಹೋಯಿತು ಎಂಬಂತಿದ್ದ ಗುಮಟೆ ಕಲೆಯ ಖೇಳ್ ಮೇಳವನ್ನು ಪುನಃಶ್ಚೇತನಗೊಳಿಸಿದವರು ಸೇಸು ಮೇಸ್ತ್ರಿಯವರು ಎಂಬ ಹೇಳಿಕೆ ಇದೆ.

ಕಲೆ ಯಾವಾಗಲೂ ಹರಿವ ನೀರಿನಂತಿರಬೇಕು ಹೊರತು ನಿಂತ ಮಡುವಾಗಬಾರದು. ನಿಂತನೀರು ನಿಷ್ಕ್ರಿಯವಾಗಿರುತ್ತದೆ. ಹರಿವ ನೀರು ಚೈತನ್ಯಯುತವಾಗಿರುತ್ತದೆ. ಸೇಸು ಮೇಸ್ತ್ರಿಯವರು ಸಾಂಪ್ರದಾಯಿಕ ಚೌಕಟ್ಟನ್ನು ಮೀರದೆ, ಸಮರ್ಥ ನಿರ್ದೇಶನದಿಂದ, ಅರ್ಪಣಾ ಮನೋಭಾವದಿಂದ ಪರಿಸರದ ಎಲ್ಲರಿಗೆ ಈ ಕಲೆಯನ್ನು ಕಲಿಸಿಕೊಟ್ಟು ಎಲ್ಲರ ಅಭಿಮಾನಕ್ಕೆ ಪಾತ್ರರಾದ ಪುಣ್ಯಜೀವಿ. 6 ಗಂಡು 4 ಹೆಣ್ಣು ಮಕ್ಕಳ ಸುಸಂಸ್ಕೃತ ತುಂಬು ಸಂಸಾರ ಇವರದು. ಇವರ ಗಂಡು ಮಕ್ಕಳೆಲ್ಲಾ ಕಲಾವಿದರು. ಹಿರಿಮಗ ಲಿಂಗಪ್ಪ ಮೇಸ್ತ್ರಿಯವರು ಇವರ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ.

ಕಲೆಯನ್ನು ಪೋಷಿಸಿಕೊಂಡು, ಸಾರ್ಥಕತೆ ಪಡೆದವರು ವಿರಳ. ಸಾರ್ಥಕತೆ ಪಡೆದರೂ ಪ್ರಸಿದ್ಧಿಗೆ ಬರುವುದು ಅಪರೂಪ. ಹೆಚ್ಚಿನ ಕಲಾವಿದರು ಸಾರ್ಥಕತೆಯ ಒಂದು ಮಜಲು ತಲುಪಿದಂತೆ ಸಾಂದ್ರರಾಗಿ ಬಿಡುತ್ತಾರೆ. ಸೇಸು ಮೇಸ್ತ್ರಿಯವರಿಗೆ ಈಗ 91ರ ಇಳಿವಯಸ್ಸಾದರೂ ಗಮಟೆ ಕಲೆಯಲ್ಲಿ ಸಕ್ರಿಯರಾಗಿರುತ್ತಾ ಯುವಕರಿಗೂ ಮೀರಿದ ಉತ್ಸಾಹದಿಂದ ತಮ್ಮನ್ನು ತೊಡಗಿಸಿಕೊಂಡಿರುವುದು ವಿಶೇಷ. ಸರಳ ಸ್ವಭಾವ, ನಿರಾಡಂಬರ ವ್ಯಕ್ತಿತ್ವ, ನಿಗರ್ವಿ, ಎಂದೂ ಪ್ರಚಾರ ಪ್ರಶಂಸೆ ಬಯಸದ ವಯೋವೃದ್ಧ ಸೇಸು ಮೇಸ್ತ್ರಿಯವರನ್ನು ಅವರ ಯೋಗ್ಯತೆಗೆ, ಸಮಾಜವು ಎರಡುಬಾರಿ ಗೌರವದ ವೇದಿಕೆಗಳಲ್ಲಿ ಸನ್ಮಾನಿಸಿದೆ.

❖❖❖

ಅನುಬಂಧ - 2

ಕೊರ್ಗ್ಯಗೌಡ, ಕನ್ನೋರಿ

ಮಂಗಳೂರು ತಾಲೂಕು ಎಡಪದವು ಗ್ರಾಮದಲ್ಲಿ ವಾಸ್ತವ್ಯವಿರುವ ಹೆಚ್ಚಿನ ಕುಡುಬಿಯರು 'ಕನ್ನೋರಿ' ವಾಡೆಗೆ ಸಂಬಂಧಪಟ್ಟವರು. ಬಹಳ ಹಿಂದಿನಿಂದಲೂ ಜೈನ ಜಮೀನುದಾರರ ಒಕ್ಕಲುಗಳಾಗಿ ಕೃಷಿ ಮತ್ತು ಕೃಷಿ ಕೂಲಿಗಳಾಗಿ ಶ್ರಮಜೀವನದಲ್ಲಿ ತೊಡಗಿಸಿಕೊಂಡು ಇತರ ಸಮಾಜದವರಿಂದ ಪ್ರಾಮಾಣಿಕ ಕಷ್ಟಜೀವಿ ವರ್ಗ ಎಂಬುದಾಗಿ ಪ್ರಶಂಸೆಗೆ ಪಾತ್ರರಾದವರು. ಕನ್ನೋರಿ ವಾಡೆಯಲ್ಲಿ ಗುರಿಕಾರ ಮನೆತನವು ಕುಡುಬಿಯರ ಧಾರ್ಮಿಕ ಹಿನ್ನೆಲೆಯ, ಜಾನಪದ ಸೊಗಡಿನ ಸಾಂಸ್ಕೃತಿಕ ಕಲೆ - ಗುಮಟೆ ಕೋಲಾಟಗಳ ಗಾಯನ, ವಾದನ, ನರ್ತನಗಳಿಗೆ ಪ್ರಖ್ಯಾತ ಹೆಸರು. ಇಂತಹ ಗೌರವಾನ್ವಿತ ಮನೆತನದಲ್ಲಿ ಗುರಿಕಾರ ಅಪ್ಪು ಗೌಡರ ತೃತೀಯ ಪುತ್ರರಾಗಿ ಜನಿಸಿದವರು ಕೊರ್ಗ್ಯ ಗೌಡರು.

ಬಾಲ್ಯದಲ್ಲಿ ಇವರಿಗೆ ಒದಗಿದ ಪೂರಕ ಕಲಾ ಪರಿಸರ, ಚಿಕ್ಕ ಪ್ರಾಯದಲ್ಲೇ ಕುಡುಬಿ ಸಂಸ್ಕೃತಿಯ ಜಾನಪದ ಕಲೆಯಲ್ಲಿ ನಿಷ್ಣಾತರಾಗಲು ಅನುಕೂಲವಾಯಿತು. ಪರಂಪರಾಗತ ಹಿರಿಯರ ಬಳುವಳಿ, ನಿರಂತರ ಪರಿಶ್ರಮದ ಅಭ್ಯಾಸಗಳಿಂದಾಗಿ ಒಬ್ಬ ಉತ್ಕೃಷ್ಟ ಕಲಾವಿದರಾಗಲು ಸಾಧ್ಯವಾಯಿತು.

ಗುರಿಕಾರ ಅಪ್ಪುಗೌಡರು ಈ ಕಲೆಯ ಒಳಹೊರಗು, ಆಳ ಅಗಲಗಳನ್ನೆಲ್ಲಾ ಅರಿತವರಾಗಿದ್ದು ಹಾಡುಗಾರಿಕೆ, ಮತ್ತು ನೃತ್ಯಗಳನ್ನು ಸರಳ ರೀತಿಯಿಂದ ಕಲಿಸಲು ಸಮರ್ಥರಿದ್ದರು. ಆ ಕಾಲದಲ್ಲಿ ಹಾಡುಗಳನ್ನು ಬರೆದಿಡುವಷ್ಟು ವಿದ್ಯಾವಂತರು ಇರಲಿಲ್ಲ. ಜಾನಪದ ಹಾಡುಗಳು ಶ್ರುತಿ ಸಂಪ್ರದಾಯದಿಂದ, ಕೇವಲ ನೆನಪುಶಕ್ತಿಯಿಂದ ಬಾಯಿಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವಂಥವು. ಕೊರ್ಗ್ಯ ಗೌಡರಿಗೆ ಸ್ವಲ್ಪ ಮಟ್ಟಿನ ವಿದ್ಯಾಭ್ಯಾಸವೂ ಇದ್ದುದರಿಂದ ಅವರ ಪರಿಣತಿಗೆ ಸಹಕಾರಿಯಾಯಿತು ಎನ್ನಬಹುದು. ಪೂರ್ತಿ ರಾಮಾಯಣದ ಕಥನ ಗೀತಗಳನ್ನು ಪುಂಖಾನುಪುಂಖವಾಗಿ ಹಾಡುತ್ತಾ ಇತರ ಪುರಾಣಗಳ ಹಾಡುಗಳನ್ನೂ ಕಂಠಪಾಠ ಮಾಡಿಕೊಂಡು ನೃತ್ಯಾಭ್ಯಾಸದೊಂದಿಗೆ ಉತ್ತಮ ಕಲಾವಿದರಾಗಿ ರೂಪುಗೊಂಡು. ಇವರಿಗೆ ನೃತ್ಯಕ್ಕಿಂತಲೂ ಹಾಡುಗಾರಿಕೆ ಹೆಚ್ಚು ಒಲಿಯಿತು ಎನ್ನಬಹುದು. ಹೀಗೆ ಪರಂಪರೆಯ ಹರಿಕಾರರಾಗಿ ರೂಪುಗೊಳ್ಳುತ್ತಿರುವಾಗ ತಮ್ಮ ತಂದೆ ಮಾತ್ರವಲ್ಲದೆ ಆಗಿನ ಪ್ರಸಿದ್ಧ ಕಲಾವಿದರಾದ ಮಡಪಾಡಿ ತೋಟ ಮೋನುಗೌಡ, ಮದಪಾಡಿ ಅಣ್ಣಪ್ಪಗೌಡ, ಪಾದೆ ಅಣ್ಣುಗೌಡ, ದೆಪ್ಪದವು ಹೊನ್ನುಗೌಡ, ಕಿಟ್ಟುಗೌಡ, ಸಾಂತಪ್ಪ ಗೌಡ, ಗುತ್ತಗಾರ ಚೆಂದುಗೌಡ, ಪಟ್ಲಚಿಲ್ ಚೆಂದುಗೌಡ.. ಮುಂತಾದವರ ಒಡನಾಡಿತನವನ್ನು ಇವರು ಸ್ಮರಿಸುತ್ತಾರೆ.

ಕಲಾಪ್ರಜ್ಞೆ ಇರುವವರಿಗೆ ಅದನ್ನು ಹೇಗೆ ಉಳಿಸಬೇಕೆಂಬ ಅರಿವೂ ಇರುತ್ತದೆ. ಕಲೆ ಯಾವತ್ತೂ

ತನ್ನ ಎತ್ತರಕ್ಕೆ ಕಲಾವಿದರನ್ನು ಎಳೆದುಕೊಳ್ಳಬೇಕೇ ಹೊರತು ಕಲೆಯೇ ಕಲಾವಿದನ ಮಟ್ಟಕ್ಕೆ ಇಳಿದು ಬರಬಾರದು. ಕೊರ್ಗ್ಯ ಗೌಡರು ಗುಮಟೆ ಕಲೆಯ ಹಾಡುಗಾರಿಕೆಯನ್ನು ಒಂದು ಉತ್ತಮಸ್ಥಾನಕ್ಕೆ ತಲುಪಿಸಿ ಕಲಾಮೌಲ್ಯಕ್ಕೆ ಓಜಸ್ಸು ತೇಜಸ್ಸನ್ನು ತಂದು ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಇವರಿಂದ ಹಲವು ಯುವಕರು ಪ್ರಭಾವಿತರಾಗಿ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಇವರ ಮಕ್ಕಳ ಪೈಕಿ ಕೂಸಗೌಡರು ಪದವೀಧರರಾಗಿ ಉದ್ಯೋಗಸ್ಥರಾಗಿದ್ದರೂ ತಮ್ಮ ತಂದೆಯ ಕಲಾಕ್ಷೇತ್ರವನ್ನು ತುಂಬುತ್ತಿದ್ದಾರೆ.

ಪ್ರಕೃತ ಗುಮಟೆ ಹಾಡುಗಳ ಸಾಹಿತ್ಯದ ಬಗ್ಗೆ ಸಂಪನ್ಮೂಲ ವ್ಯಕ್ತಿಯಾಗಬಲ್ಲವರಲ್ಲಿ ಗುರಿಕಾರ ಅಪ್ಪುಗೌಡರ ನಂತರದ ವ್ಯಕ್ತಿ ಕೊರ್ಗ್ಯಗೌಡರು. ಈಗ ಅವರ ಪ್ರಾಯ 75 ವರ್ಷ ದಾಟಿ ನಿವೃತ್ತಿಯಂಚಿನಲ್ಲಿದ್ದರೂ ಕಲಾ ಸೇವೆಯಲ್ಲಿ ಪ್ರವೃತ್ತರು.

❖❖❖

ಅನುಬಂಧ - 3

ಬಾಬು ಗೌಡ, ಮ್ಯೆಂದೇರಿ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಮತ್ತು ಸಾಂಸ್ಕೃತಿಕ ನಗರ, ಜೈನಕಾಶಿಯೆಂದೇ ಪ್ರಖ್ಯಾತವಾದ ಊರು ಮೂಡಬಿದ್ರೆ. ಇಲ್ಲಿಂದ ಸುಮಾರು ಆರು ಕಿಮೀ ದಕ್ಷಿಣದಲ್ಲಿ, ಹಿಂದೆ ಚೌಟರಸರ ಆಳ್ವಿಕೆಗೊಳಪಟ್ಟ ಮರಕಡ ಗುತ್ತಿನ ಬಂಟ ಸಮುದಾಯದ ಆಡಳಿತವಿದ್ದ 'ಮ್ಯೆಂದೇರಿ' ಎಂಬ ಪ್ರಶಾಂತ ಪರಿಸರದಲ್ಲಿ ಕುಡುಬಿಯರೇ ಹೆಚ್ಚು ವಾಸ್ತವ್ಯವಿರುವ ವಾಡೆಯಿದೆ. ಕುಡುಬಿಯರು ಮರಕಡ ಗುತ್ತಿನ ಒಕ್ಕಲಾಗಿ ತಮ್ಮ ಸ್ವಾಮಿನಿಷ್ಠೆ, ಪ್ರಾಮಾಣಿಕತೆ, ಸತ್ಯಸಂಧತೆ, ದೈವಭಕ್ತಿ, ಸ್ವಾಭಿಮಾನ, ಸರಳ ಜೀವನಗಳಿಂದ ಸುಸಂಸ್ಕೃತ ಸಮಾಜವಾಗಿ ಬಾಳಿ ಬದುಕಿದವರು. ಇಲ್ಲಿಯ ಗುರಿಕಾರ ಮನೆಯ ಪರಂಪರಾಗತ ಕಲಾವಿದ ದಿ| ತಿಮ್ಮ ಗೌಡರ ಪುತ್ರ ಸುಮಾರು 58 ವರ್ಷ ದಾಟಿದ ಎಲ್ಲರಿಗೂ 'ಬಾಬಣ್ಣ' ಅಂತಲೇ ಪರಿಚಿತರಾದ ಬಾಬುಗೌಡರು ಪ್ರಕೃತ ಕೊಡಿಯಾಲ್ ಕುಡುಬಿಯರ ಗುಮಟೆ ಕಲಾವಿದರಲ್ಲಿ ಪ್ರಸಿದ್ಧರು.

ಬಾಲ್ಯದಲ್ಲಿ ' ಹಾಸಲಿಕ್ಕುಂಟು, ಹೊದೆಯಲಿಕ್ಕಿಲ್ಲ' ಎಂಬ ನಾಣ್ಣುಡಿಯಂತೆ ಕಿತ್ತು ತಿನ್ನುವ ಬಡತನ, ಆರ್ಥಿಕ ಅಡಚಣೆ, ಪ್ರೋತ್ಸಾಹದ ಕೊರತೆಯಿಂದಾಗಿ 'ಹಲಗೆ ಬಳಪವ ಪಿಡಿದವರಲ್ಲ' ದುದರಿಂದ ವಿದ್ಯಾಭ್ಯಾಸ ಸೊನ್ನೆ. ಆದರೆ ಇವರ ಅಪಾರ ನೆನಪು ಶಕ್ತಿ, ಚುರುಕುಮತಿ, ಹಾಡಿದುದನ್ನು ಹಾಡಿದ ಹಾಗೇ ಮನಸ್ಸಿನಲ್ಲಿ ಅಚ್ಚೊತ್ತಿಕೊಂಡು, ಕುಣಿದುದನ್ನು ಕುಣಿದ ಹಾಗೇ ಅನುಕರಣೆ ಮಾಡಿ, ಮರುದಿನವೇ ತಾನೂ ಹಾಡಿ, ಕುಣಿದು ಕರತಲಾಮಲಕ ಮಾಡಿಕೊಳ್ಳುವ ಸಾಮರ್ಥ್ಯದಿಂದಾಗಿ ಅಭಿಜಾತ ಕಲಾವಿದನಾಗಿ ಈ ಕಲೆಗೆ ಉಜ್ವಲ ಭವಿಷ್ಯವನ್ನು ರೂಪಿಸಿಕೊಂಡರು. ಸೀಮಿತ ಅವಧಿಯಲ್ಲಿ ಮಾತ್ರವಲ್ಲದೆ ಇತರ ಸಂದರ್ಭಗಳಲ್ಲಿ ಈ ಕಲಾಗಾರಿಕೆಯ ಅಭ್ಯಾಸಕ್ಕೆ ಸಮಾಜದ ಧಾರ್ಮಿಕ ಕಟ್ಟುಪಾಡುಗಳ ನಿರ್ಬಂಧ ವಿದ್ದಾಗ್ಯೂ ಮಳೆಗಾಲದ ರಾತ್ರಿಗಳಲ್ಲಿ ತಂದೆಯಿಂದ ಮಗನಿಗೆ ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳ ಹಾಡುಗಳ ಕಂಠಪಾಠವಾಗಿ ನಿದ್ರೆಗೆ ಜಾರುವಾಗ ಕೆಲವು ಬಾರಿ ಮುಂಜಾವದ ಕೋಳಿ ಕೂಗುತ್ತಿತ್ತು. ತಮ್ಮ ಕುಟುಂಬದ ಆಗಿನ ಕಾಲದ ಪ್ರಸಿದ್ಧ ಕಲಾವಿದರಾಗಿದ್ದ ವೀರಪ್ಪ ಗುರಿಕಾರ, ಅಣ್ಣು ಗುರಿಕಾರ, ನೇಮು ಗೌಡ ಮುಂತಾದವರ ಹಾಡು ಕುಣಿತಗಳಿಂದ ಪ್ರಭಾವಿತನಾಗಿ ಬಾಬಣ್ಣಗೆ 18ರ ಯುವಪ್ರಾಯ ತುಂಬಿದಾಗ ಒಬ್ಬ ಪ್ರಬುದ್ಧ ಕಲಾವಿದನಾಗಲು ಸಾಧ್ಯವಾಯಿತು.

ಬಾಬುಗೌಡರೇ ಹೇಳುವ ಪ್ರಕಾರ - ಹಿರಿಯರಿಂದ ಈ ಕಲೆಯನ್ನು ಕಲಿಯಲು ತುಂಬಾ ಕಷ್ಟಪಡಬೇಕಾಗಿತ್ತು. ಹಾಡು, ನೃತ್ಯ ಮತ್ತು ವಾದನಗಳನ್ನು ಕೇಳಿ, ನೋಡಿ, ಅನುಭವಿಸಿ ಕಲಿತುಕೊಳ್ಳಬೇಕಾಗಿತ್ತು. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಧಾರ್ಮಿಕ ಆಚರಣೆಯ ಉಳಿವಿಗಾಗಿ ಈ ಕಲೆಯನ್ನು ಕಲಿಯಲೇಬೇಕಾದ ಅನಿವಾರ್ಯತೆ ಇತ್ತು. ಚಿಕ್ಕ ಹುಡುಗರು ಅನುಭವಿ ಹಿರಿಯರೊಂದಿಗೆ ಆಡಬೇಕಾದಲ್ಲಿ ತುಂಬಾ ಪರಿಣತಿ ಹೊಂದಿರಬೇಕಾಗಿತ್ತು. ಪರಿಣತಿ ಹೊಂದಿದ್ದರೂ ತಂಡದಲ್ಲಿ ಆಡುವಾಗ ಹಾಡು, ಹೆಜ್ಜೆಗಾರಿಕೆ ಮತ್ತು ಗುಮಟೆ ವಾದನದ ತಾಳಗಳು ಕಿಂಚಿತ್ ತಪ್ಪಿದರೂ ಕುಟುಂಬ ಸಂಬಂಧದ

ಮುಲಾಜಿಲ್ಲದೆ, ಯಾವನೇ ಹಿರಿಯ ಕಲಾವಿದನ ಪೆಟ್ಟು, ಒದೆಯನ್ನಾದರೂ ತಿನ್ನಬೇಕಾಗಿತ್ತು. ಮಾತ್ರವಲ್ಲ, ಆ ನಿಮಿಷದಲ್ಲೇ ತಂಡದಿಂದ ಒದ್ದು ಹೊರಗೆ ಹಾಕುತ್ತಿದ್ದರು. ಹೀಗೆ ಒದೆ, ಪೆಟ್ಟು ತಿಂದರೂ ಹುಡುಗನಾಗಲೀ, ಹುಡುಗನ ಹೆತ್ತವರಾಗಲೀ, ಒದ್ದವರ ವಿರೋಧವಾಗಿ ಎದುರು ಮಾತಾಡುವಂತಿರಲಿಲ್ಲ. ಯಾರೂ ಚಕಾರ ಶಬ್ದ ಸಹಿತ ಎತ್ತುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಒದೆ ತಿಂದ ಹುಡುಗ 'ಹಿರಿಯರೊಂದಿಗೆ ಆಡಿಯೇ ತೀರುತ್ತೇನೆ' ಎಂಬ ಹಠದಿಂದ ಎಷ್ಟೇ ಕಷ್ಟ ಪಟ್ಟಾದರೂ ಒದೆ, ಪೆಟ್ಟು, ಅವಮಾನಗಳನ್ನು ಸಹಿಸಿಯಾದರೂ ಈ ಕಲೆಯನ್ನು ಕಲಿಯುತ್ತಿದ್ದರು.

ಸಮಕಾಲೀನ ಸಂದರ್ಭದಲ್ಲಿ ಕುಡುಬಿ ಕಲಾವಿದರ ಪೈಕಿ ಗುಮಟೆ ವಾದನ, ಹಾಡುಗಾರಿಕೆ, ನೃತ್ಯ, ಆಚರಣಾ ವಿಧಿಗಳ ಹಾಸುಹೊಕ್ಕು, ಆಳ ಅಗಲಗಳನ್ನು ನಿಯಮಾನುಸಾರವಾಗಿ ಬಲ್ಲ ಸವ್ಯಸಾಚಿ ಕಲಾವಿದ ಬಾಬು ಗೌಡರು ತಮ್ಮ ಜೀವನಾನುಭವ ಮೌಲ್ಯಗಳಿಂದ ಕುಡುಬಿ ಸಂಸ್ಕೃತಿಯ ಬಗ್ಗೆ ಸಂಪನ್ಮೂಲ ವ್ಯಕ್ತಿಯಾಗಿ ಅಧಿಕಾರವಾಣಿಯಿಂದ ವಿವರಣೆ ನೀಡಬಲ್ಲರು. ಇವರ ಹಾಡಿನ ಶೈಲಿ, ಕುಣಿತದ ಮಟ್ಟು, ಗುಮಟೆ ವಾದನದ ಗತ್ತು ಹಿಂದಿನ ಹಿರಿಯರ ಶೈಲಿಯನ್ನು ನೆನಪು ಮಾಡಿಕೊಡುತ್ತದೆ. ಗುಮಟೆ ಹೆಗಲಿಗೆ ಹಾಕಿಕೊಂಡು ಆಡಲು ಪ್ರಾರಂಭಿಸಿದರೆ, ಒಂದು ರೀತಿ ಆವೇಶ ಪಡೆದವರಂತೆ ಸಮಯ, ದಣಿವುಗಳ ಪರಿವೆಯಿಲ್ಲದೇ ಆಡುತ್ತಿರುತ್ತಾರೆ. ಮಿಕ್ಕವರು ದಣಿವಿಗಾಗಿ ವಿಶ್ರಮಿಸಿದರೂ ಇವರು ವಿರಾಮ ಪಡೆಯಲಿಕ್ಕಿಲ್ಲ. ಹುಲಿಯ ಘರ್ಜನೆಯಂತಹ ವಿಶಿಷ್ಟ ಕಂಠವಾದರೂ ಅದರ ಏರುಗತಿಯಿಂದ ಶ್ರುತಿ ತಪ್ಪದ ಗಾನ ಮಾಧುರ್ಯ, ಆಹ್ಲಾದಕರ ಆಲಾಪನೆ, ಸಮಯಾವಧಾನದ ನಿಲುಗಡೆಯ ಚಾತುರ್ಯಗಳಿಂದ, ಮಾತ್ರಾ ಸಂಖ್ಯೆಗಳ ಲೆಕ್ಕಾಚಾರಕ್ಕೆ ಚ್ಯುತಿ ಬರಲಿಕ್ಕಿಲ್ಲ. ಹೆಜ್ಜೆಗಾರಿಕೆ ತಪ್ಪಲಿಕ್ಕಿಲ್ಲ. ಕೋಲಾಟವಾಡುವಾಗ ಎಲ್ಲಿ ಕಣ್ಣು ಕಿವಿ, ಕೈಮೈಗೆ ತಾಗಿ ಪೆಟ್ಟಾಗಬಹುದೊ ಎಂಬ ಭಯ ಜೊತೆಗಾರರಿಗೆ ಆಗಬಹುದಾದರೂ, ಕೋಲುಗಳ ಪೆಟ್ಟು ಬೀಳುವಷ್ಟೇ ಬಿದ್ದೀತು. ತಾಗುವಷ್ಟೇ ತಾಗಿ ಶಬ್ದ ಮಾತ್ರ ಹೊರಹೊಮ್ಮಿತು. ಜಗಿಯುವಿಕೆ - ಜಗಿದಷ್ಟೇ ನಾಜೂಕಿನಲ್ಲಿ ಕಾಲೂರೀತು. ಇವರು ಗುಮಟೆ ಹಿಡಿದು ವಾದನ ಮಾಡುತ್ತಿರುವಂತೆಯೇ ಗಿರ್ರನೆ ತಿರುಗುವ ರೀತಿ, ತಿರುಗುವ ಸುತ್ತುಗಳ ರಭಸ, ತಾಳ ತಪ್ಪದ ಬಡಿತ, ಹಾಡಿನ ಏರಿಳಿತದ ಹಿಡಿತ-ಗಳ ಕಲಾ ಕೌಶಲ್ಯ ಅವರದ್ದೇ ಹೆಸರಿನಲ್ಲಿ ದಾಖಲೆಯಾಗಿ ಉಳಿದಿದೆ. ಪ್ರಾಯ 58 ದಾಟಿದರೂ ಇವರಲ್ಲಿ ತರಬೇತಿ ಪಡೆದ ಯುವಕರು ಇವರ ಅರ್ಧದಷ್ಟು ಆಡಲಾರರು ಎಂದರೆ ಅತಿಶಯವಾಗಲಿಕ್ಕಿಲ್ಲ.

ಬಾಬುಗೌಡರ ವ್ಯಕ್ತಿತ್ವ, ಕಲಾಗಾರಿಕೆಯ ಆಕರ್ಷಣೆ, ಪ್ರೇರಣೆ, ಪೋಷಣೆ, ಪ್ರೋತ್ಸಾಹಗಳಿಂದ ಪ್ರಭಾವಿತರಾದವರಲ್ಲಿ ನಾನೂ ಒಬ್ಬ. ಇವರ ಕಲಾಗಾರಿಕೆಯನ್ನು ಅನೇಕರು ಅನುಕರಿಸಿದ್ದಾರಾದರೂ ಮೈಂದೇರಿ ವಾಡೆಯ ಇವರ ಜೊತೆಗಾರ ಫಕೀರ ಗೌಡರು ಹೊರತು ಪಡಿಸಿದರೆ ಉಳಿದವರ್‍ಯಾರೂ ಇವರಿಗೆ ಸರಿಯಾದ ಜೋಡಿಯಾಗಿಲ್ಲ. ಬಾಬು ಗೌಡರ ಪ್ರತಿಭೆಯನ್ನು ಸಮಾಜ ಗುರುತಿಸುವಂತಾಗಬೇಕು. ಧಾರ್ಮಿಕ ಆಚರಣಾ ಹಿನ್ನೆಲೆಯ ಈ ಕಲಾಗಾರಿಕೆಯಿಂದ ಹೊಟ್ಟೆ ತುಂಬುವುದಿಲ್ಲವಾದರೂ ದೈವೀ ಆರಾಧನೆಯ ನಂಬಿಕೆಯಿಂದ ಮನೋನೆಮ್ಮದಿಯನ್ನು ಹೊಂದಿ, ಮುಂದಿನ ಜೀವನಕ್ಕೆ ಹುರುಪು ಉತ್ಸಾಹಗಳನ್ನು ತುಂಬುವ ಈ ಕಲೆ ಬಾಳಬೇಕು.

●

❖❖❖

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮಂಗಳೂರು
ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳು

	ಪುಸ್ತಕದ ಹೆಸರು	ಲೇಖಕರು	ಬೆಲೆ	ಪ್ರಕಟಿತ
1.	ಕವಿತಾಮೃತ್	ಅಕಾಡೆಮಿ ಪ್ರಕಾಶನ	20.00	1999
2.	ಕೊಂಕಣಿ ಮಹಾ ಮಾನೆಸ್ತ್ ಲೇಖಿನ ಮಾಲೆ			
1.	ಲುವಿಸ್ ಮಸ್ಕರೇನ್ಹಸ್	ಗ್ಲೆಡಿಸ್ ರೇಗೋ	10.00	2000
2.	ಕಾರ್ನಾಡ್ ಸದಾಶಿವ ರಾವ್	ವಿಶ್ವ ಕುಂದಾಪುರ	10.00	2000
3.	ಎ.ಟಿ. ಲೋಬೋ	ಗ್ಲೆಡಿಸ್ ರೇಗೋ	10.00	2000
4.	ಪಂಜೆ ಮಂಗೇಶ ರಾವ್	ಸಿದ್ದಾಪುರ ವಾಸುದೇವ ಭಟ್	10.00	2000
5.	ಉಳ್ಳಾಲ ಶ್ರೀನಿವಾಸ್ ಮಲ್ಯ (ಲಭ್ಯವಿಲ್ಲ)	ಬಸ್ತಿ ವಾಮನ್ ಶೆಣೈ	10.00	2000
6.	ಅಮ್ಮೆಂಬಳ್ ಸುಬ್ಬರಾವ್ ಪೈ (ಲಭ್ಯವಿಲ್ಲ)	ಸಂಧ್ಯಾ ಶೆವಗೂರ್	10.00	2000
7.	ಬಾ. ಫ್ರಾ. ದ. ಕೋಸ್ತ (ಲಭ್ಯವಿಲ್ಲ)	ವಿಕ್ಟರ್ ಡಿ'ಸಿಲ್ವಾ	10.00	2000
8.	ಮಂಜೇಶ್ವರ ಗೋವಿಂದ ಪೈ (ಲಭ್ಯವಿಲ್ಲ)	ನಾಗರಾಜ ಜವಳಿ	10.00	2000
9.	ಪಂಡಿತ ತಾರಾನಾಥ	ಸಂಧ್ಯಾ ಶೆವಗೂರ್	10.00	2000
10.	ದಿನಕರ ದೇಸಾಯಿ	ವಾಸುದೇವ ಶ್ಯಾನುಭಾಗ್	10.00	2000
11.	ಎಸ್. ಎನ್. ಕಾಮತ್	ಲೀಲಾ ಭಟ್	10.00	2000
12.	ಹಿರಿಯಡ್ಕ ರಾಮರಾಯ ಮಲ್ಯ	ಇಂದಿರಾ ನಾಯಕ್	10.00	2000
13.	ಕರ್ನಾಟಕ ಗಾಂಧಿ ತಿಮ್ಮಪ್ಪ ನಾಯಕ್	ವಿಶ್ವ ಕುಂದಾಪುರ	10.00	2001
14.	ಡಾ. ಟಿ. ಎಮ್. ಎ. ಪೈ	ಸಿದ್ದಾಪುರ ವಾಸುದೇವ ಭಟ್	10.00	2001
15.	ರೆಂಜಾಳ ಗೋಪಾಲ ಶೆಣೈ	ಅನಿತಾ ಜಿ. ಶೆಣೈ	10.00	2001
16.	ಬಿಡಾರಾಂ ಕೃಷ್ಣಪ್ಪ	ಶಾಂತಾರಾಂ ಬಾಳಿಗಾ	10.00	2001
17.	ಮೊನ್ಸಿಜೊರ್ ಸಿಲ್ವೆಸ್ಟರ್ ಫ್ರಾನ್ಸಿಸ್ ಮಿನೇಜಿಸ್	ಶ್ರೀ ಲಿಯೋ ಸೋಜ್	10.00	2003
18.	ಕುಡ್ಪಿ ಶ್ರೀನಿವಾಸ್ ಶೆಣೈ	ಜಯಶ್ರೀ ಬಾಳಿಗಾ	10.00	2003
3.	ಇತರ ಪುಸ್ತಕಗಳು			
1.	ಗೊಂಯ್ ಸೊಡುನ್ ಆಯ್ಲಿ ಮಾಂಯ್	ಜೋಕಿಂ ಪಿತರೊ	30.00	2003
2.	ಕೊಂಕ್ಣ್ಯಾಲಿ ಕಾವಿ ಕಲಾ	ಕೃಷ್ಣಾನಂತ ಕಾಮತ್	100.00	2000
3.	ಕುಡ್ಮ್ಯಾಲಿ ಗುಮ್ಟಾಂ ಆನಿ ತೋಣಿಯಾ ಪದಂ	ಗೋಪಾಲ ಗೌಡ	40.00	2001
4.	ಬಾಕಿಬಾಬ ಬೊರಕಾರ್	ಪ್ರಕಾಶ ಥಳಿ (ಲಿಪ್ಯಾಂತರ)	60.00	2001
5.	ಫಾ। ಸಿ.ಸಿ.ಎ. ಪೈ (ಸ್ವಾಮಿ ಸುಪ್ರಿಯಾ)	ವಿಲಿಯಂ ಮಾಡ್ತಾ	20.00	2001
6.	ಕೊಂಕಣಿ ಕಳೊ (ಪೂರ್ವ ಪ್ರಾಥಮಿಕ್ ಭಾಷಾ ವಿಕಾಸ್ ಸಾಹಿತ್ಯ)	ಅಕಾಡೆಮಿ ಪ್ರಕಾಶನ	100.00	2001

7.	ಕೊಂಕಣಿ ಸಮಾಂತರ ಶಬ್ದ ಕೋಶ್	ಅಕಾಡೆಮಿ ಪ್ರಕಾಶನ	500.00	2001
8.	ಆಮ್ಗೆಲೊ ಕಾರಂತು	ಹೆಚ್. ರಾಘವೇಂದ್ರ ರಾವ್	20.00	2002
9.	ಕೊಂಕ್ಣಿ ಗ್ರಂಥಾ ಸೂಚಿ	ಅಕಾಡೆಮಿ ಪ್ರಕಾಶನ	50.00	2004
10.	ಇಂಗ್ಲೀಷ್ -ಕೊಂಕಣಿ ಶಬ್ದ ಕೋಶ್	ಸ್ಟೀವನ್ ಕ್ವಾಡ್ರಸ್	250.00	2007
11.	ಹಾಸುನ್ ನಾಚುನ್ ಗಾವ್ರ ಯಾ ಸಿ.ಡಿ.	ಅಕಾಡೆಮಿ ಪ್ರಕಾಶನ	100.00	2006
12.	ಧ್ವನಿ ಸುರುಳಿ	ಅಕಾಡೆಮಿ ಪ್ರಕಾಶನ	35.00	2006
13.	ಯೆಯಾ ಕೊಂಕ್ಣಿ ಶಿಕುಯಾಂ	ಸ್ಟೀವನ್ ಕ್ವಾಡ್ರಸ್	14.00	2006
14.	ಸಿದ್ಧಿಲೋಕ್ ಗೀತ್ ಸಂಗ್ರಹ್	ಫ್ರಾನ್ಸಿಸ್ ಹಾರ್ನೊಡರ್	50.00	2007
15.	ಖಾರ್ವಿ ಲೋಕ್ ಗೀತ್ ಸಂಗ್ರಹ್	ಸುರೇಶ್ ತಾಂಡೇಲ (ಅ.ಪ್ರ)	50.00	2007
16.	20 ವ್ಯಾ ಶಿಕ್ಯಾಚ್ಯೊ ಕೊಂಕ್ಣಿ ಕವಿತಾ	ಮೆಲ್ವಿನ್ ರೊಡ್ರಿಗಸ್ (ಅ.ಪ್ರ)	100.00	2007
17.	ಭಾಯ್ಲ್ಯಾನ್ ಆಯ್ಲೊ ವ್ಹೊರ್	ಐರಿನ್ ರಿಬೆಲ್ಲೊ (ಅ.ಪ್ರ.)	30.00	2007
18.	ಕುಡ್ಬಿ ಜಾನಪದ ಸಂಗ್ರಹ	ಡಿ.ವಿ. ಪ್ರಕಾಶ್ ಪ್ರೊ. ಎ.ವಿ.ನಾವಡ	50.00	2008
19.	ಕನ್ನಡ ಲಿಪಿಯೆಂತ್ ಕೊಂಕ್ಣಿ ಬರೊಂವ್ಚಿ ಪ್ರಮಾಣ್ ರೀತಿ	ಫಾ। ಪ್ರತಾಪ್ ನಾಯಕ್	30.00	2008
20.	ಆರ್.ಎಸ್.ಬಿ. ಸಾಹಿತ್ಯ ಸಂಗ್ರಹ್	ಪುಂಡಲೀಕ ಮರಾಠೆ	20.00	2008

4. ದಶಮಾನೋತ್ಸವ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕಗಳು

1.	ಕೊಂಕ್ಣಿ ಕಾವ್ಯಾಂ	ಹೆಚ್ ರಾಘವೇಂದ್ರ ರಾವ್ ಮತ್ತು ಸ್ಟೀವನ್ ಕ್ವಾಡ್ರಸ್	20.00	2004
2.	ಕೊಂಕ್ಣಿಂತ್ಲೊ ಮಟ್ವೊ ಕಥಾ	ಡೋಲ್ಫಿ ಕಾಸ್ಸಿಯಾ	20.00	2004
3	ಕೊಂಕ್ಣಿಂತ್ ಲಾಕ್ಕಾರ್ ಸಾಹಿತ್	ಫ್ರಾನ್ಸಿಸ್ ಡಿ ಕುನ್ಹಾ,	20.00	2004
4	ಕೊಂಕ್ಣಿಂತ್ ಲ್ಹಾನ್ಹಾಂ ಭುರ್ಗ್ಯಾಂಚೆ ಸಾಹಿತ್	ಪ್ರವೀಣ್ - ಫೆರ್ನಾಂಡಿಸ್	20.00	2004
5	ಕೊಂಕಣಿ ರಂಗಭೂಮಿ	ವಾಸುದೇವ ಶ್ಯಾನುಭಾಗ್	20.00	2004
6	ಕರ್ನಾಟಕಾಂತ್ ಕೊಂಕ್ಣಿ ಸಂಗೀತ್ ಆನಿ ತಾಂತ್ಲೆ ಪ್ರಕಾರ್	ಎಲ್ ಎನ್ ರೇಗೊ	20.00	2004
7	ಕೊಂಕ್ಣಿ ನೆಮಾಳಿಂ	ಗ್ಲಾಡಿಸ್ ರೇಗೊ	20.00	2004

5. ಸುವರ್ಣ ಕರ್ನಾಟಕ ಯೋಜನೆಯಲ್ಲಿ ಪ್ರಕಟಿಸಿದ ಪುಸ್ತಕಗಳು

ದಿನಕರಾಲಿ ಕವನಾಂ	ಕೂಡ್ಲ ಆನಂದ ಶ್ಯಾನುಭಾಗ್	50.00	2007
20 ವ್ಯಾ ಶೆಕ್ಯಾಚೆ ಕೊಂಕ್ಣಿ ಮ್ಹಾನ್ ಮನಿಸ್ (ಭಾಗ-1)	ಅಕಾಡೆಮಿ ಪ್ರಕಾಶನ	200.00	2007
ಸುವರ್ಣಕರ್ನಾಟಕಾಂತ್ ಕೊಂಕ್ಣಿ ಲೋಕ್	ಫಾ। ರಿಚಡ ರೇಗೊ ಜೆ.ಸ	200.00	2007
20 ವ್ಯಾ ಶೆತ್ಕ್ಯಾಚ್ಯೊ ಕೊಂಕ್ಣಿ ಕಾಣಿಯೊ	ವಲ್ಲಿ ಕ್ವಾಡ್ರಸ್	200.00	2007

ಸಾಶ್ವಿಲೊ ಉಗ್ಡಾಸ್	ವಿಕ್ಟರ್ ಡಿ ಸಿಲ್ವಾ	50.00	2008
ತಿರ್ಸ್ಯಾ ಮೊರ್ನಾ ಉಪ್ರಂತ್	ಫಾ। ಪ್ರತಾಪ್ ನಾಯ್ಕ್	50.00	2008
ಮಹಾಕವಿ ಗೋವಿಂದ ಪೈ	ಸುವರ್ಣ ಗಾಡ	50.00	2008
ಮಾಧ್ಯಮದಲ್ಲಿ ಕರ್ನಾಟಿಕ ಕೊಂಕಣಿ ಸಾಹಿತ್ಯ ಅಕಾಡೆಮಿ	ವಿನ್ಸೆಂಟ್ ಆಳ್ವ	ಉಚಿತ	2008
ಸಂಸ್ಕಾರ್	ವಿನ್ಸೆಂಟ್ ಆಳ್ವ	50.00	2008
ವೆಲ್‌ಕಮ್ ಟು ಕೊಂಕಣಿ	ಸ್ಟೀವನ್ ಕ್ವಾಡ್ರಸ್	250.00	2008
ಶಾಳಾಂನಿ ಕೊಂಕ್ಣಿ ಏಕ್ ಜಯ್ತೆವಂತ್ ಸಾಹಸ್ ಸುವರ್ಣ ಕರ್ನಾಟಕಾಂತ್ ಕೊಂಕ್ಣಿ	ಸ್ಟೀವನ್ ಕ್ವಾಡ್ರಸ್ / ವಿತೊರಿ ಕಾರ್ಕಳ್	30.00	2008
ಲೋಕ್ - ವಿ.ಸಿ.ಡಿ.	ಫಾ। ರಿಚರ್ಡ್ ರೇಗೋ	30.00	2008

	ಪುಸ್ತಕಮುದ್ರಣದ ಅವಧಿ	ವರ್ಷಾನುವರ್ಷ ಪುಸ್ತಕ ಮುದ್ರಣದ ಅವಧಿ	ಸಾರ್ವಜನಿಕರಿಗೆ ರಿಯಾಯಿತಿ	ಪುಸ್ತಕ ಮಾರಾಟಗಾರರಿಗೆ ರಿಯಾಯಿತಿ
1.	10 ವರ್ಷದ ಮೇಲ್ಪಟ್ಟ ಅವಧಿಯ ಪುಸ್ತಕಗಳು	1999	50%	55%
2.	6 ವರ್ಷದಿಂದ 10 ವರ್ಷದ ಅವಧಿಯ	2000-2004	30%	35%
3.	3ರಿಂದ 5 ವರ್ಷಗಳ ಅವಧಿಯ ಪುಸ್ತಗಳು	2005-2007	20%	25%
4.	ಹೊಸ ಪ್ರಕಟಣೆಗಳು 2 ವರ್ಷದ ಅವಧಿಯ ವರೆಗೆ	2008-2010	15%	20%

ಶ್ರೀ ಯಂ ಗೋಪಾಲ ಗೌಡ

ಮಂಗ್ಳುರ್ ತಾಲೂಕ್ ಎಡಪದವು ಗ್ರಾಮಾಚ್ಯಾ ಪಟ್ಲಚಿಲ್ ಮ್ಹಳ್ಳೆಕಡೆ ಏಕ್ ಸಾಂಪ್ರದಾಯಿಕ್ ಕುಡ್ಮಿ ಕುಟ್ಮಾಂತ್ 27.11.1955 ವೆರ್ ಜಲ್ಮಾಲೊ ಹಾಚೆಂ ವಿದ್ಯಾಭ್ಯಾಸ್ ಪಿಯುಸಿ. ಪ್ರಕೃತ್ ಮಂಗ್ಳುರ್ಚ್ಯಾ ಸೈಂಟ್ ಎಲೋಶಿಯಸ್ ಕೊಲೆಜಿಚ್ಯಾ ಕೊಂಕಣಿ ಸಂಸ್ಥ್ಯಾಂತ್ ವೃತ್ತಿ.

ಪ್ರವೃತ್ತೆನ್ ಕುಡ್ಮಿ ಸಂಸ್ಕೃತಿಚ್ಯಾ ಜಾನಪದಾಚೊ ಅಭಿಜಾತ್ ಕಲಾಕಾರ್ ಜಾವ್ನ್ ಗುಮ್ಟಾಂ ಆನಿ ತೋಣಿಯಾಂ ನಾಚಾಕ್ ಪ್ರಸಿದ್ಧ್. 37 ವರ್ಸಾದ್ದಿಂ ಕುಡ್ಮಿ ವಾಡ್ಯಾಂ ಭಾಯ್ರ್ ಕಲಾಪ್ರದರ್ಶನಾಕ್ ಹಾಂಣಿಂ ರಚ್‌ಲ್ಲೊ ಪಂಗಡ್ ಆತಾಂ 'ಕುಡುಬಿ ಜಾನಪದ ಕಲಾ ವೇದಿಕೆ' ಮ್ಹಳ್ಳ್ಯಾ ನಾಂವಾರ್ ಕಲಾ ಪ್ರದರ್ಶನ್ ದಿಂವ್ಚೊ ಏಕೈಕ್ ನೊಂದಾಯಿತ್ ಸಂಸ್ಥೊ. ದೇಸ್‌ಭರ್ ಹ್ಯಾ ಪಂಗ್ಡಾನ್ ರಾಜ್ಯ್ ಆನಿ ರಾಷ್ಟ್ರ ಮಟ್ಟಾಚ್ಯಾ ಪ್ರತಿಷ್ಠಿತ್ ವೇದಿಂನಿ ಪ್ರದರ್ಶನ್ಯಾಂ ದಿಲ್ಯಾಂ, ಪ್ರಶಸ್ತ್ಯೊ ಪುರಸ್ಕಾರ್‌ಯೀ ಆಪ್ಣಾಯ್ಲ್ಯಾ.

ಶ್ರೀ ಗೋಪಾಲ ಗೌಡಾನ್ ಕುಡ್ಮಿ ಸಮಾಜ್, ಸಂಸ್ಕೃತಿ ಆನಿ ಜಾನಪದಾವಿಶಿಂ ಸಂಶೋಧನ್ ಕರ್ತಲ್ಯಾಂಕ್ ಸಂಪನ್ಮೂಲ್ ವ್ಯಕ್ತಿ ಜಾವ್ನ್ ಮಾಹೆತ್ ದಿಲ್ಯಾ. ಸ್ವಿಜರ್ಲೆಂಡ್, ಕೆನಡಾ, ಜರ್ಮನಿ, ಇಂಗ್ಲೆಂಡ್ ಥ್ಯಾವ್ನ್ ವಿದೇಶೀ ಅಧ್ಯಯನ್ ಕಾರಾಂನಿ ಯೇವ್ನ್ ಹಾಚೆ ಥಾವ್ನ್ ಡೊಕ್ಯುಮೆಂಟೇಶನ್ ಕರುನ್ ಘೆತ್ಲಾಂ. ಕುಡ್ಮ್ಯಾಂ ವಿಶಿಂ ಗೋಪಾಲ ಗೌಡಾನ್ ಬರಯಿಲ್ಲಿಂ ಲೇಖನಾಂ ವಿವಿಧ್ ಸಮೂಹ್ ಮಾಧ್ಯಮಾಂನಿ, ಸಂಶೋಧನಾ ಗ್ರಂಥಾಂನಿ ಪ್ರಸಾರ್, ಪ್ರಗಟ್ ಜಾಲ್ಯಾಂ. ವಿವಿಧ್ ಕಾರ್ಯಾಗಾರಾಂನಿ, ವಿಚಾರ್ ಗೋಷ್ಠಿಂನಿ, ಆಕಾಶ್‌ವಾಣಿ ದೂರದರ್ಶನಾಂಚ್ಯಾ ಕಾರ್ಯಕ್ರಮಾಂನಿ ಭಾಗ್ ಘೇವ್ನ್, ಪ್ರಬಂಧ್, ಭಾಷಣಾಂ, ವಿಚಾರ್ ಮಂಡನ್ ಕೆಲ್ಯಾಂ.

ಹಾಚ್ಯಾ ಪಂಗ್ಡಾಕ್ ಕೇಂದ್ರ್ ಸರ್ಕಾರಾಚ್ಯಾ ಪ್ರವಾಸೋದ್ಯಮ್ ಆನಿ ಸಂಸ್ಕೃತಿ ಇಲಾಖ್ಯಾ ಥಾವ್ನ್ ಸ್ಕಾಲರ್‌ಷಿಪ್ ಮೆಳ್ಳಾಂ. ಕೊಂಕಣಿ ಅಕಾಡೆಮಿನ್ ತಾಕಾ 2002 ವರ್ಸಾಚಿ 'ಗೌರವ್ ಜಾನಪದ್ ಪ್ರಶಸ್ತಿ' ದೀವ್ನ್ ಮಾನ್ ಕೆಲಾ, ಹ್ಯಾ ಭಾಯ್ರ್, ವಿವಿಧ್ ನಾವಾಡ್ದಿಕ್ ಸಂಘ್ ಸಂಸ್ಥ್ಯಾನಿ ಉಂಚ್ಲ್ಯಾ ವೇದಿಂರ್ 16 ಪಾವ್ಟಿಂ ಸನ್ಮಾನ್ ಕೆಲಾ. 2010 ನವಂಬರಾಂತ್ ಮಾಂಡ್ ಸೊಭಾಣ್ ಸಂಸ್ಥ್ಯಾನ್ ಚಲಯಿಲ್ಲ್ಯಾ ವಿಶ್ವಕೊಂಕಣಿ ಸಾಂಸ್ಕೃತಿಕ್ ಸಮ್ಮೇಳಾಂತ್ ಹಾಚ್ಯಾ ಪಂಗ್ಡಾಕ್ ರಾಷ್ಟ್ರಪತಿ ಥಾವ್ನ್ ಸನ್ಮಾನ್ ಕರಯ್ಲಾ.

ಕೊಂಕಣಿ ಅಕಾಡೆಮಿ ಸ್ಥಾಪನ್ ಜಾಲ್ಲ್ಯಾ 1994 ಥಾವ್ನ್ 5 ವರ್ಸಾಂ, ದೋನ್ ಆವ್ದೆಂಕ್ ತೋ ಅಕಾಡೆಮಿ ಸಾಂದೋ ಆಸಲ್ಲೊ. ತಾಣಿಂ ಸಂಗ್ರಹ್ ಕೆಲ್ಲಿಂ ಗುಮ್ಟಾಂ ಆನಿ ತೋಣಿಯಾಂ ಪೊದಾಂಚೊ ಬೂಕ್ ಅಕಾಡೆಮಿನ್ 2000 ಇಸ್ವೆಂತ್ ಪ್ರಗಟ್ ಕೆಲಾ. ಹಾಚ್ಯಾ ಸಂಗ್ರಹಾಂತ್ ಕುಡ್ಮಿ ಬೊಲಿಚೊ ಲ್ಹಾನ್ ಶಬ್ದ್‌ಕೋಶ್, ವ್ಹಾರ್ಡಿಕೆ ಸಂಪ್ರದಾಯಾಚಿಂ ಗಾಣಾಂ, ಬಾಳ್‌ಗಿತಾಂ, ಕುಡ್ಮಿ ಕುಳಿ, ಆಚಾರ್ ವಿಚಾರ್, ಚರಿತ್ರಾಕ್ ಸಂಬಂಧ್ ಜಾಲ್ಲೆಂ ಭಂಡಾರ್‌ಚ್ಚ್ ಆಸಾ. ಕುಡ್ಮಿ ಸಮುದಾಯಾಚೊ ಎಕ್ಲೊ ಪ್ರತಿಭಾವಂತ್ ಕಲಾಕಾರ್, ಜಾನಪದ್ ಸಂಸ್ಕೃತಿಚೊ ಸಾದೊ ಸರಳ್ ಪ್ರಾತಿನಿಧಿಕ್ ವ್ಯಕ್ತಿ ಗೋಪಾಲಗೌಡಾಚೆಂ ಸಂಗ್ರಹ್ ಸಾಹಿತ್ಯ್ ಮುಕಾರ್ ಕುಡ್ಮಿ ಜನಾಂಗಾವಿಶಿಂ ಸಮಗ್ರ್ ಸಂಶೋಧನ್ ಕರ್ತಲ್ಯಾಂಕ್ ಪ್ರಯೋಜನಾಕ್ ಪಡ್ತಲೆಂ.